16 December 2025 Tuesday | SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಅತಿಯಾದ ಒಳ್ಳೆಯತನವೂ ಜೀವನದ ಶತ್ರು! ಏಕೆಂದರೆ ಅದನ್ನು ಕಾಪಾಡಿಕೊಳ್ಳುವ ಜನಕ್ಕಿಂತ ಬಳಕೆ ಮಾಡಿಕೊಳ್ಳುವ ಜನರೇ ಜಾಸ್ತಿ!

ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

ಸದಾ ನಕಾರಾತ್ಮಕ ಚಿಂತನೆಯಲ್ಲಿ ಮುಳುಗಿರುವವರನ್ನು, ನಿರುತ್ಸಾಹದ ಮಾತುಗಳನ್ನು ಆಡುವವರನ್ನು, ಒಳ್ಳೆಯ ಕಾರ್ಯಕ್ಕೆ ಮುಂದಾದಾಗ ಹತ್ತಾರು ಪ್ರಶ್ನೆಗಳನ್ನು ಕೇಳಿ ತಣ್ಣೀರು ಎರಚುವವರನ್ನು ನಿಮ್ಮ ಜತೆಯಲ್ಲಿ ಇಟ್ಟುಕೊಳ್ಳಬೇಡಿ. ಇಂಥವರು ಹತ್ತು ವೈರಿಗಳಿಗೆ ಸಮ.....!

ಮೈಲಾರ ಸಾವಿತ್ರಿಬಾಯಿ

info.varthaman@gmail.com

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 53 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ದೆಹಲಿ ಪೊಲೀಸರಿಗೆ ಅಧಿವೇಶನ ಬಳಿಕ ಉತ್ತರ: ಡಿಕೆಶಿ

**ದೆಹಲಿ:** ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಪೊಲೀಸರ ನೋಟೀಸ್‌ಗೆ ಉತ್ತರ ನೀಡಲು ಕಾಲಾವಕಾಶ ಕೋರುವೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.



ದೆಹಲಿಯಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಸೋಮವಾರ ಪ್ರತಿಕ್ರಿಯೆ ನೀಡಿದರು. ಸೋಮವಾರ ದೆಹಲಿ ಪೊಲೀಸರಿಗೆ ಉತ್ತರ ನೀಡಲು ನಿರ್ಧರಿಸಿದ್ದೆ. ಆದರೆ ಶಾಮನೂರು ಶಿವಶಂಕರಪ್ಪ ನಿಧನದ ಹಿನ್ನೆಲೆಯಲ್ಲಿ ವಿಶೇಷ ವಿಮಾನದಲ್ಲಿ ದಾವಣಗೆರೆಗೆ ತೆರಳುತ್ತಿದ್ದೇನೆ. ಅಧಿವೇಶನ ಮುಗಿದ ಬಳಿಕ ಉತ್ತರ ನೀಡಲು ಕಾಲಾವಕಾಶ ಕೇಳುತ್ತೇನೆ ಎಂದು ತಿಳಿಸಿದರು.

ಪೊಲೀಸರು ನೀಡಿರುವ ನೋಟಿಸ್ ಗೆ ನನ್ನ ಉತ್ತರದ ಪ್ರತಿಯನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡುತ್ತೇನೆ. ಏಕೆಂದರೆ ಅವರು ಎಫ್‌ಐಆರ್ ಪ್ರತಿಯನ್ನು ಲಗತ್ತಿಸಿಲ್ಲ. ಇ.ಡಿ.ಗೆ ಈಗಾಗಲೇ ಉತ್ತರ ನೀಡಿದ್ದೇವೆ. ಎಫ್‌ಐಆರ್ ಪ್ರತಿಯಲ್ಲಿ ಏನಿದೆ ಎಂದು ಓದಿಲ್ಲ. ಕೇವಲ ನೋಟಿಸ್ ಮಾತ್ರ ನೀಡಿದ್ದಾರೆ. ಎಫ್‌ಐಆರ್ ಪ್ರತಿ ನೀಡಿ ಎಂದು ಕೇಳುತ್ತೇನೆ ಎಂದು ತಿಳಿಸಿದರು. ನಾನು ದೆಹಲಿಗೆ ಬಂದಾಗ ಎಲ್ಲರನ್ನೂ ಭೇಟಿ ಮಾಡಬೇಕು.

ಪುಟ 2ಕ್ಕೆ

## ತಾಪಮಾನ ಕುಸಿತ: ಚಳಿಗೆ ಉತ್ತರ ತತ್ತರ

**ಬೆಂಗಳೂರು:** ಉತ್ತರ ಕರ್ನಾಟಕದ 9 ಜಿಲ್ಲೆಗಳಲ್ಲಿ ಚಳಿ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಹವಾಮಾನ ಇಲಾಖೆ ಆರೆಂಜ್ ಅಲರ್ಟ್ ಘೋಷಣೆ ಮಾಡಿದೆ. ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್, ವಿಜಯಪುರ, ಬೆಳಗಾವಿ, ಬಾಗಲಕೋಟೆ, ಹಾವೇರಿ, ಯಾದಗಿರಿ, ಧಾರವಾಡ, ಕೊಪ್ಪಳ ಜಿಲ್ಲೆಗಳಲ್ಲಿ ಮುಂದಿನ ಎರಡು ದಿನಗಳ ಕಾಲ ಶೀತಗಾಳಿ ಬೀಸಲಿದೆ. ಜನರು ಆದಷ್ಟು ಎಚ್ಚರಿಕೆಯಿಂದ ಇರುವಂತೆ ಸೂಚನೆ ನೀಡಲಾಗಿದೆ.

ಈ 9 ಜಿಲ್ಲೆಗಳಲ್ಲಿ ತಾಪಮಾನ ದಿಢೀರ್ ಕುಸಿತ ಕಂಡಿದೆ. ಇನ್ನೂ ತಾಪಮಾನ ಕುಸಿಯುವ ಸಾಧ್ಯತೆ ಇದೆ. ವಿಜಯಪುರ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಅತಿ ಕಡಿಮೆ ತಾಪಮಾನ ದಾಖಲಾಗಿದೆ. ವಿಜಯಪುರ ಜಿಲ್ಲೆಯಲ್ಲಿ ಕನಿಷ್ಠ ತಾಪಮಾನ 7 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಜನಜೀವನ ತತ್ತರಗೊಂಡಿದೆ.

ಕಳೆದ ಹತ್ತು ವರ್ಷಗಳಲ್ಲಿ ಎರಡನೆಯ ಬಾರಿಗೆ ತಾಪಮಾನ ಕನಿಷ್ಠ ಮಟ್ಟ ತಲುಪಿದೆ.

ಪುಟ 2ಕ್ಕೆ

# ದಾವಣಗೆರೆಗೆ ವಿದ್ಯಾಕಾಶಿ ಪಟ್ಟ ಸಿಗಲು ಶಾಮನೂರು ಕಾರಣಕರ್ತರು: ಸಿದ್ದರಾಮಯ್ಯ

## ಸಂತಾಪ ಸಲ್ಲಿಸಿ ಉಭಯ ಸದನಗಳ ಕಲಾಪ ಮುಂದೂಡಿಕೆ

**ಬೆಳಗಾವಿ:** ಕಾಂಗ್ರೆಸ್ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರಿಗೆ ಸೋಮವಾರ ವಿಧಾನಸಭೆ ಮತ್ತು ವಿಧಾನ ಪರಿಷತ್ ನಲ್ಲಿ ಸಂತಾಪ ಸೂಚಿಸಲಾಯಿತು.

ಬೆಳಗಾವಿಯ ಸುವರ್ಣಸೌಧದಲ್ಲಿ ಚಳಿಗಾಲದ ಅಧಿವೇಶನ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸೋಮವಾರ ವಿಧಾನಸಭೆ ಕಲಾಪ ಆರಂಭವಾಗುತ್ತಿದ್ದಂತೆ ಶಾಮನೂರು ಶಿವಶಂಕರಪ್ಪ ಅವರಿಗೆ ಸಂತಾಪ ಸೂಚಿಸಲಾಯಿತು. ಬಳಿಕ ಉಭಯ ಸದನಗಳ ಕಲಾಪವನ್ನು ಮಂಗಳವಾರಕ್ಕೆ ಮುಂದೂಡಲಾಯಿತು.

ವಿಧಾನಸಭೆಯಲ್ಲಿ ಸಂತಾಪ ಸೂಚನೆ ನಿರ್ಣಯ ಮಂಡಿಸಿ ಮಾತನಾಡಿದ ಸ್ಪೀಕರ್ ಯು.ಟಿ.ಖಾದರ್ ಅವರು, ಎಷ್ಟೇ ಜಟಿಲವಾದ ಸಮಸ್ಯೆಯನ್ನು ತಾಳ್ಮೆಯಿಂದ ನಿಭಾಯಿಸುವ ಗುಣ ಶಾಮನೂರು ಅವರಲ್ಲಿತ್ತು. ಅವರ



ಜೀವನವೇ ಒಂದು ಸಂದೇಶ ಎಂದು ಬಣ್ಣಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ದಾವಣಗೆರೆ ಜಿಲ್ಲೆ ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿಯಾಗಿದ್ದಾರೆ ಅದಕ್ಕೆ ಶಾಮನೂರು ಶಿವಶಂಕರಪ್ಪ ಕಾರಣ. ಶಾಮನೂರು ಶಿವಶಂಕರಪ್ಪ ತಮ್ಮ 63ನೇ ವಯಸ್ಸಿನಲ್ಲಿ ವಿಧಾನಸಭೆ ಪ್ರವೇಶಿಸಿ ಆರು ಬಾರಿ ಶಾಸಕರಾದವರು. ಒಮ್ಮೆ ಸಂಸತ್ ಸದಸ್ಯರಾಗಿದ್ದರು. ದೀರ್ಘ ಕಾಲ ರಾಜಕೀಯದಲ್ಲಿದ್ದರು. ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷರಾಗಿದ್ದರು. 1969ರಲ್ಲಿ ದಾವಣಗೆರೆ ಪುರಸಭೆ ಸದಸ್ಯರಾಗಿ ನಂತರ ನಗರಸಭೆ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು ಎಂದು ಶ್ಲಾಘಿಸಿದರು.

ದಾವಣಗೆರೆಯಲ್ಲಿ ಬಾಪೂಜಿ ವಿದ್ಯಾ ಕೇಂದ್ರದ ಮೂಲಕ ಇಂಜಿನಿಯರಿಂಗ್, ವೈದ್ಯಕೀಯ ಕಾಲೇಜುಗಳು ಸೇರಿದಂತೆ ಅನೇಕ ಸಂಸ್ಥೆಗಳನ್ನು ಕಟ್ಟಿ ಜಿಲ್ಲೆಯನ್ನು ವಿದ್ಯಾಕಾಶಿಯಾಗಿಸಿದರು. ಉದ್ಯಮಿಯಾಗಿ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ

ಪುಟ 2ಕ್ಕೆ

# ಪಂಚಭೂತಗಳಲ್ಲಿ ಶಾಮನೂರು ಲೀನ

## ವೀರಶೈವ ಲಿಂಗಾಯತ ಸಂಪ್ರದಾಯದಂತೆ ಸರ್ಕಾರಿ ಗೌರವಗಳೊಂದಿಗೆ ಅಂತ್ಯಸಂಸ್ಕಾರ

**ದಾವಣಗೆರೆ:** ರಾಜಕೀಯ ಮುತ್ಸದ್ಧಿ, ಕೊಡುಗೈ ದಾನಿ, ಜನರಿಗಾಗಿಯೇ ಜೀವನ ಮುಡಿಪಿಟ್ಟ ಹಿರಿಯ ಜೀವ ಶಾಮನೂರು ಶಿವಶಂಕರಪ್ಪ ಅವರ ಅಂತ್ಯಕ್ರಿಯೆ ಸಕಲ ಸರ್ಕಾರಿ ಗೌರವಗಳೊಂದಿಗೆ ವೀರಶೈವ ಲಿಂಗಾಯತ ಸಂಪ್ರದಾಯದ ಪ್ರಕಾರ ಸೋಮವಾರ ಸಂಜೆ ನೆರವೇರಿತು. ಅಂತ್ಯಕ್ರಿಯೆಯಲ್ಲಿ ಜನಸಾಗರವೇ ಭಾಗವಹಿಸಿತ್ತು.

ನಗರದ ಕಲ್ಲೇಶ್ವರ ರೈಸ್ ಮಿಲ್‌ನಲ್ಲಿ ಪತ್ನಿ ಪಾರ್ವತಮ್ಮ ಸಮಾಧಿ ಪಕ್ಕದಲ್ಲೇ ಅಂತ್ಯಕ್ರಿಯೆ ನೆರವೇರಿಸಲಾಯಿತು. ಮಣ್ಣಿನ ಬದಲಿಗೆ ವಿಭೂತಿ ಗಟ್ಟಿಗಳೊಂದಿಗೆ ಪಂಚಪೀಠದ ಸ್ವಾಮೀಜಿಗಳು ಅಂತಿಮ ಸಂಸ್ಕಾರದ ವಿಧಿವಿಧಾನ ನೆರವೇರಿಸಿದರು. ಶಾಮನೂರು ಪುತ್ರ ಎಸ್.ಎಸ್.ಮಲ್ಲಿಕಾರ್ಜುನ ಅವರು ಅಂತಿಮ ವಿಧಿವಿಧಾನ ಪೂರೈಸಿದರು.

ಶಾಮನೂರರ ಪಾರ್ಥಿವ ಶರೀರಕ್ಕೆ ಪೊಲೀಸರು ತ್ರಿವರ್ಣ ಧ್ವಜ ಹೊದಿಸಿ ಗೌರವ ಸೂಚಿಸಿದರು. ಶಾಮನೂರು ಪುತ್ರ ಧ್ವಜ ಸ್ವೀಕರಿಸಿದರು. ನಂತರ ರಾಷ್ಟ್ರಗೀತೆಯೊಂದಿಗೆ ಮೂರು ಸುತ್ತು ಕುಶಾಲತೋಪು ಸಿಡಿಸುವ ಮೂಲಕ ವಿಶೇಷ ಗೌರವ ಸಲ್ಲಿಸಿದರು. ಬಳಿಕ ವಾದ್ಯವಂದನೆ ಅರ್ಪಿಸಿ, ಒಂದು ನಿಮಿಷ ಮೌನಾಚರಣೆ ಮಾಡಲಾಯಿತು.

ರಾಜಕೀಯ ಕ್ಷೇತ್ರದ ಗಣ್ಯರಾದ ಮಲ್ಲಿಕಾರ್ಜುನ ಖರ್ಗೆ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವರಾದ ಕೆ.ಜೆ ಜಾರ್ಜ್, ಆರ್.ವಿ.ದೇಶಪಾಂಡೆ, ಸತೀಶ್ ಜಾರಕಿಹೊಳಿ, ಜಮೀರ್ ಅಹಮ್ಮದ್, ಸುಧಾಕರ್, ಈಶ್ವರ್ ಖಂಡ್ರೆ, ಬಸವರಾಜ ರಾಯರಡ್ಡಿ, ವಿಪಕ್ಷ ನಾಯಕ ಆರ್.ಅಶೋಕ್, ಸಿರಿಗೆರೆ ಶ್ರೀಗಳು, ವಚನಾನಂದ









ಸ್ವಾಮೀಜಿ ಸೇರಿದಂತೆ ವಿವಿಧ ಮಠಾಧೀಶರು ಹಾಗೂ ಚರ್ಚ್ ಪಾದ್ರಿಗಳು ಸೇರಿದಂತೆ ಗಣ್ಯರು ಅಂತಿಮ ದರ್ಶನ ಪಡೆದರು.

ಶಾಮನೂರು ಶಿವಶಂಕರಪ್ಪ ನಿವಾಸದ ಮುಂಭಾಗ ಸಾರ್ವಜನಿಕ ದರ್ಶನಕ್ಕೆ ಪಾರ್ಥಿವ ಶರೀರ ಇಡಲಾಗಿತ್ತು. ಮಧ್ಯಾಹ್ನ 12

ಪುಟ 2ಕ್ಕೆ

### ಸಿದಗಂಗಾ ಮಠದಿಂದ ವಿಭೂತಿ ಗಟ್ಟಿ ರವಾನೆ

**ತುಮಕೂರು:** ಮಾಜಿ ಸಚಿವ ಶಾಮನೂರು ಶಿವಶಂಕರಪ್ಪ ಅವರ ಅಂತ್ಯಕ್ರಿಯೆಗೆ ಸಿದ್ದಗಂಗಾ ಮಠದಿಂದ ಸುಮಾರು 100 ವಿಶೇಷ ವಿಭೂತಿ ಗಟ್ಟಿಯನ್ನು ರವಾನಿಸಲಾಯಿತು. ಶ್ರೀ ಸಿದ್ದಲಿಂಗಾ ಸ್ವಾಮಿಜಿಗಳು ತಮ್ಮ ವಾಹನದಲ್ಲೇ ದಾವಣಗೆರೆಗೆ ವಿಶೇಷ ವಿಭೂತಿ ಗಟ್ಟಿಗಳನ್ನು ತೆಗೆದುಕೊಂಡು ಹೋದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಶ್ರೀಗಳು, ಸುಧೀರ್ಘ ಕಾಲದಿಂದ ಸಾಮಾಜಿಕ ಶೈಕ್ಷಣಿಕ ರಾಜಕೀಯ ಸೇವೆ ಕೈಗೊಂಡವರು

ಪುಟ 2ಕ್ಕೆ

### ತಂದೆ ಕಷ್ಟದಲ್ಲಿ ಬೆಳೆದರು: ಪುತ್ರ ಮಲ್ಲಿಕಾರ್ಜುನ ಭಾವುಕ

**ದಾವಣಗೆರೆ:** ಶಾಮನೂರು ಶಿವಶಂಕರಪ್ಪ ಅವರನ್ನು ನೆನೆದು ಅವರ ಪುತ್ರ ಸಚಿವ ಎಸ್.ಎಸ್ ಮಲ್ಲಿಕಾರ್ಜುನ ಭಾವುಕರಾದರು.

ದಾವಣಗೆರೆಯ ತಮ್ಮ ನಿವಾಸದ ಬಳಿ ಮಾಧ್ಯಮಗಳ ಜೊತೆ ಅವರು ಮಾತನಾಡಿದರು. ಕಳೆದ 15 ದಿನಗಳಿಂದ ತೀವ್ರ ಆರೋಗ್ಯ ಸಮಸ್ಯೆ ಅನುಭವುಸುತ್ತಿದ್ದರು. ವಯೋ ಸಹಜವಾಗಿ ಅವರು ನಮ್ಮನ್ನಗಲಿದ್ದಾರೆ. ಬಹಳ ಕಷ್ಟದಿಂದ ಬೆಳೆದವರು ಅವರು. ನನಗೆ ಆ ಕಷ್ಟ ಇಲ್ಲ. ತಮ್ಮ ತಂದೆ ಕಷ್ಟದಲ್ಲಿಯೇ

ಪುಟ 2ಕ್ಕೆ

## ಕೊಡುಗೈ ದಾನಿಯ ಅಂತಿಮ ಯಾತ್ರೆಯಲ್ಲಿ ಜನಸಾಗರ ಭಾಗಿ

**ದಾವಣಗೆರೆ:** ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಪಾರ್ಥಿವ ಶರೀರದ ಅಂತಿಮ ಯಾತ್ರೆ ನಗರದ ಎಂಸಿಸಿ ಬಡಾವಣೆಯ ಅವರ ನಿವಾಸದಿಂದ ಸೋಮವಾರ ಮಧ್ಯಾಹ್ನ ಆರಂಭವಾಯಿತು. ಅಂತಿಮ ಯಾತ್ರೆಯಲ್ಲಿ ಲಕ್ಷಾಂತರ ಮಂದಿ ಅಭಿಮಾನಿಗಳು ಮತ್ತು ಬಂಧುಗಳು ಭಾಗಿಯಾಗಿದ್ದರು.

ಪೂಜಾ ಕೈಂಕರ್ಯ ಮುಗಿದು ಪಾರ್ಥಿವ ಶರೀರವನ್ನು ಮನೆಯಿಂದ ಹೊರಗೆ ತರಲಾಯಿತು. ಪುಷ್ಪಾಲಂಕೃತ ವಾಹನದಲ್ಲಿ ಪಾರ್ಥಿವ ಶರೀರವನ್ನು ಕೂರಿಸಲಾಯಿತು. ಎಂಸಿಸಿ ಬಡಾವಣೆಯಿಂದ ಹೊರಟ ಮೆರವಣಿಗೆಯಲ್ಲಿ ಭಜನೆ ತಂಡಗಳು ಭಕ್ತಿ ಗೀತೆ ಹಾಡಿದವು. ಪಾರ್ಥಿವ ಶರೀರದ ಕೈವಲ್ಯಕ್ಕೆ ಪುತ್ರ, ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಹೆಗಲು ಕೊಟ್ಟಿದ್ದರು. ರಸ್ತೆಯ ಇಕ್ಕೆಲಗಳಲ್ಲಿ ಸಾಲಾಗಿ ನಿಂತಿರುವ ಜನರು ಹೂಹಾರ ಹಾಕಿ ಗೌರವ ಸಲ್ಲಿಸಿದರು. ಮೆರವಣಿಗೆ ಎವಿಕೆ ಕಾಲೇಜು ರಸ್ತೆಯ ಮೂಲಕ ಸಾಗಿದ ಮೆರವಣಿಗೆ ಹೈಸ್ಕೂಲ್ ಮೈದಾನ ತಲುಪಿತು. ಜ್ಯುವೆಲರಿ ಅಸೋಸಿಯೇಷನ್ ವತಿಯಿಂದ ಅಂಗಡಿಗಳನ್ನು ಮುಚ್ಚಿ ವಹಿವಾಟು ಸ್ಥಗಿತಗೊಳಿಸಿ ನಮನ ಸಲ್ಲಿಸಲಾಯಿತು.

ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಯಾದವ ಗುರುಪೀಠದ ಶ್ರೀಕೃಷ್ಣ ಯಾದವಾನಂದ ಸ್ವಾಮೀಜಿ, ಕುಂಚಿಟಿಗ ಗುರುಪೀಠದ ಶಾಂತವೀರ ಸ್ವಾಮೀಜಿ, ಇಮ್ಮಡಿ ಕೇತೇಶ್ವರ ಸ್ವಾಮೀಜಿ ದರ್ಶನ ಪಡೆದರು.

ಪಾರ್ಥೀವ ಶರೀರ ಮೆರವಣಿಗೆ ಹಿನ್ನೆಲೆ ಮಾರ್ಗದುದ್ದಕ್ಕೂ ಶಾಮನೂರರ ಫ್ಲೆಕ್ಸ್‌ಗಳನ್ನ ಅಳವಡಿಸಲಾಗಿತ್ತು. ಕ್ಷೇತ್ರದ ನೆಚ್ಚಿನ ಜನನಾಯಕನನ್ನ ಕಳೆದುಕೊಂಡು ಜನ ಕಣ್ಣೀರು ಹಾಕಿದರು. ಕೆಲವರು ಪಾರ್ಥೀವ ಶರೀರ ವಿದ್ದ ವಾಹನಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು.

## ಕೆ.ಆರ್.ನಗರದಲ್ಲಿ ರೈತ ಮಹಿಳೆ ಆತ್ಮಹತ್ಯೆ

**ಕೆ.ಆರ್.ನಗರ:** ಸಾಲಬಾಧೆಯಿಂದ ಮನನೊಂದು ರೈತ ಮಹಿಳೆ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆಯು ಸಾಲಿಗ್ರಾಮ ತಾಲೂಕಿನ ಕಾಳಮ್ಮನ ಕೊಪ್ಪಲು ಗ್ರಾಮದಲ್ಲಿ ನಡೆದಿದೆ.



ಗ್ರಾಮದ ಜಯಮ್ಮ (59) ಎನ್ನುವರೇ ಮೃತಪಟ್ಟವರಾಗಿದ್ದಾರೆ.

ಮೃತರು ಮೂರು ಜನ ಹೆಣ್ಣು ಮಕ್ಕಳು ಹಾಗೂ ಒಬ್ಬ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಜಯಮ್ಮ ಅವರು ಡಿ.11ರಂದು ತನ್ನ ಮಗಳ ಮನೆಗೆ ಹೋಗಿ ಬರುತ್ತೇನೆ ಎಂದು ಹೇಳಿ ತನ್ನ ಬಟ್ಟೆಗಳೊಂದಿಗೆ ತೆರಳಿದವರು ಮತ್ತೆ ವಾಪಸ್ಸು ಮನೆಗೆ ಬಾರದಿರುವ ಹಿನ್ನೆಲೆಯಲ್ಲಿ ಅವರ ಬಗ್ಗೆ ಎಲ್ಲೆಡೆ ಹುಡುಕಾಟ ಮಾಡಿದ ಸಂದರ್ಭದಲ್ಲಿ ಅವರ ಸುಳಿವು ಸಿಗದ ಹಿನ್ನೆಲೆಯಿಂದ ಸಾಲಿಗ್ರಾಮ ಪೊಲೀಸ್ ಠಾಣೆಗೆ ನಮ್ಮ ತಾಯಿ

ಪುಟ 2ಕ್ಕೆ

## ರಸ್ತೆಯಲ್ಲಿಯೇ ಹೊತ್ತು ಉರಿದ ಬಸ್

**ಮಡಿಕೇರಿ:** ನಡು ರಸ್ತೆಯಲ್ಲೇ ಪ್ರವಾಸಿ ಬಸ್ ಹೊತ್ತಿ ಉರಿದ ಘಟನೆ ವಿರಾಜಪೇಟೆಯ ಮಾಕುಟ್ಟ ಬಳಿಯ ಮಗಡಿಪಾರೆ ಆಂಜನೇಯ ದೇವಾಲಯದ ಬಳಿ ನಡೆದಿದೆ. ಕೇರಳ ನೋಂದಣಿಯ ಖಾಸಗಿ ಬಸ್ ಹೊತ್ತಿ ಉರಿದಿದೆ.

ಮೈಸೂರಿನಲ್ಲಿ ಪ್ರವಾಸಿಗರನ್ನು ಇಳಿಸಿ ವಾಪಸ್ ತೆರಳುವಾಗ ಘಟನೆ ಸಂಭವಿಸಿದೆ. ಬಸ್ ನಲ್ಲಿ ಚಾಲಕ ಮತ್ತು ನಿರ್ವಾಹಕ ಇಬ್ಬರೇ ಇದ್ದರು. ಯಾವುದೇ ಪ್ರಾಣಪಾಯ ಸಂಭವಿಸಿಲ್ಲ. ಅಕಸ್ಮಾತ್ ಪ್ರವಾಸಿಗರಿದ್ದಿದ್ದರೆ ಭಾರೀ ಅನಾಹುತ ಸಂಭವಿಸುವ ಸಾಧ್ಯತೆ ಇತ್ತು. ಘಟನಾ ಸ್ಥಳಕ್ಕೆ ಅಗ್ನಿಶಾಮಕ ಸಿಬ್ಬಂದಿ ತೆರಳಿ ಬೆಂಕಿ ನಂದಿಸಿದ್ದಾರೆ. ವಿರಾಜಪೇಟೆ ಗ್ರಾಮಾಂತರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.



## ಜೆಡಿಎಸ್ ನಾಶಕ್ಕೆ ಕಾಂಗ್ರೆಸ್ ಯತ್ನ: ಎಚ್.ಡಿ.ದೇವೇಗೌಡ

**ನವದೆಹಲಿ:** 2019ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸ್ನೇಹಿತರೇ ನನ್ನನ್ನು ಸೋಲಿಸಿದರು. ನಾನು ಅದನ್ನು ಮತ ಕಳವು ಎಂದು ಹೇಳಲಿಲ್ಲ ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ವ್ಯಂಗ್ಯವಾಗಿ ಹೇಳಿದರು.



ರಾಜ್ಯಸಭೆಯಲ್ಲಿ ಸೋಮವಾರ ನಡೆದ ಚುನಾವಣೆ ಸುಧಾರಣೆ ಕುರಿತು ಚರ್ಚೆಯಲ್ಲಿ ಮಾತನಾಡಿದ ಅವರು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು. ಜೆಡಿಎಸ್ ಅನ್ನು ಸಂಪೂರ್ಣವಾಗಿ ನಾಶ ಪಡಿಸಲು ಕಾಂಗ್ರೆಸ್ ನಾಯಕರು ನಿರಂತರ ಪ್ರಯತ್ನ ಮಾಡಿದರು. ಲೋಕಸಭಾ ಚುನಾವಣೆಗೆ ಮುನ್ನ ಬಿಜೆಪಿ ಜತೆಗೆ ಮೈತ್ರಿ ಮಾಡಿಕೊಂಡೆವು ಎಂದು ದೇವೇಗೌಡರು ಹೇಳಿದರು. ದೇವೇಗೌಡರ ಮಾತಿಗೆ ಕಾಂಗ್ರೆಸ್ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು.

## ಶಿವರಾತ್ರೀಶ್ವರ ಜಯಂತಿ: ಇಂದು ರಾಷ್ಟ್ರಪತಿ ಮುರ್ಮು ಉದ್ಘಾಟನೆ

**ಮೈಸೂರು:** ಮಳವಳ್ಳಿಯಲ್ಲಿ ಡಿ.16ರಂದು ಆರಂಭವಾಗಲಿರುವ ಸುತ್ತೂರು ಮಠದ ಶಿವರಾತ್ರೀಶ್ವರ ಶಿವಯೋಗಿಗಳ 1066ನೇ ಜಯಂತಿ ಮಹೋತ್ಸವ ಉದ್ಘಾಟನೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಮಂಗಳವಾರ ಆಗಮಿಸಲಿದ್ದಾರೆ.



ದ್ರೌಪದಿ ಮುರ್ಮು ಮಧ್ಯಾಹ್ನ 2.45ಕ್ಕೆ ಮಳವಳ್ಳಿ ಹೆಲಿಪ್ಯಾಡ್‌ನಲ್ಲಿ ಬಂದಿಳಿಯುವರು. ಮಧ್ಯಾಹ್ನ 3.15ಕ್ಕೆ ವೇದಿಕೆ ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ. ಸಂಜೆ 4.35ಕ್ಕೆ ಅವರನ್ನು ಹೆಲಿಪ್ಯಾಡ್‌ನಲ್ಲಿ ಬೀಳ್ಕೊಡಲಾಗುವುದು.

ಡಿ.16ರಿಂದ ಡಿ.22ರವರೆಗೆ ಉಪನ್ಯಾಸ, ವಸ್ತುಪ್ರದರ್ಶನ, ಸಂಗೀತ, ನಾಟಕ, ಹಾಸ್ಯ ಕಾರಂಜಿ ಸೇರಿದಂತೆ ವೈವಿಧ್ಯಮಯ ಕಾರ್ಯ ಕ್ರಮ ಹಾಗೂ ಡಿ.21ರಂದು ಉತ್ಸವಮೂರ್ತಿ ಬೆಳ್ಳಿ ಪಲ್ಲಕ್ಕಿ ಮೆರವಣಿಗೆ ನಡೆ ಯಲಿದೆ. ಶಿವರಾತ್ರೀಶ್ವರ ಶಿವಯೋಗಿಗಳ ಜಯಂತಿ ಕಾರ್ಯಕ್ರಮದಲ್ಲಿ ರಾಜ್ಯ ಪಾಲ ಥಾವರ್‌ಚಂದ್ ಗೆಹ್ಲೋತ್, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಮಳವಳ್ಳಿ ಶಾಸಕ ಪಿ.ಎಂ.ನರೇಂದ್ರಸ್ವಾ ಇತರರು ಪಾಲ್ಗೊಳ್ಳಲಿದ್ದಾರೆ.

## ಮತ್ತೊಂದು ವಾರ ಅಧಿವೇಶನ ವಿಸ್ತರಣೆಗೆ ಸ್ಪೀಕರ್‌ಗೆ ಬಿಜೆಪಿ ಪತ್ರ

**ಬೆಳಗಾವಿ:** ಉತ್ತರ ಕರ್ನಾಟಕದ ಸಮಸ್ಯೆಗಳು, ಕಾನೂನು ಸುವ್ಯವಸ್ಥೆ ಲೋಪ ಸೇರಿದಂತೆ ಹಲವು ವಿಷಯಗಳ ಬಗ್ಗೆ ಇನ್ನೂ ದೀರ್ಘ ಚರ್ಚೆ ಆಗಬೇಕಿರುವುದರಿಂದ ಅಧಿವೇಶನವನ್ನು ಇನ್ನೂ ಒಂದು ವಾರ ವಿಸ್ತರಿಸಬೇಕೆಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಅವರು, ಸ್ಪೀಕರ್ ಯು.ಟಿ.ಖಾದರ್ ಅವರಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.

ಬೆಳಗಾವಿಯಲ್ಲಿ ಡಿಸೆಂಬರ್ 8ರಿಂದ 19ರವರೆಗೆ ಅಧಿವೇಶನ ನಡೆಸಲು ತೀರ್ಮಾನಿಸಲಾಗಿತ್ತು. ಈಗಾಗಲೇ ಎರಡು ದಿನ ಮೊಟಕುಗೊಂಡಿದೆ. ರಾಜ್ಯದ ಜ್ವಲಂತ ಸಮಸ್ಯೆಗಳ ಚರ್ಚೆಯಾಗಬೇಕಿದೆ. ಈ ಹಿನ್ನೆಲೆಯಲ್ಲಿ ಅಧಿವೇಶವನ್ನು ಒಂದು ವಾರ ವಿಸ್ತರಿಸಬೇಕೆಂದು ಅವರು ಮನವಿ ಮಾಡಿದ್ದಾರೆ.

ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಶಾಸಕರು ಪ್ರಸ್ತಾಪ ಮಾಡಿರುವ ಹಲವು ಗಂಭೀರ ವಿಷಯಗಳಿಗೆ ಮುಖ್ಯಮಂತ್ರಿಗಳು ಮತ್ತು

ಪುಟ 2ಕ್ಕೆ

# ಔತಣಕೂಟದಲ್ಲಿ ಡಿಕೆಶಿಯಷ್ಟೇ ಭಾಗಿ!

## ಮಲ್ಲಿಕಾರ್ಜುನ ಖರ್ಗೆ ಆಯೋಜಿಸಿದ್ದ ಭೋಜನಕೂಟಕ್ಕೆ ಬಾರದ ಸಿಎಂ ಸಿದ್ದರಾಮಯ್ಯ

**ಬೆಂಗಳೂರು:** ಮುಖ್ಯಮಂತ್ರಿ ಅಧಿಕಾರ ಹಂಚಿಕೆ ಕುರಿತು ವಿವಾದ ಎದ್ದಿರುವ ಸಂದರ್ಭದಲ್ಲಿಯೇ ದೆಹಲಿಯಲ್ಲಿ ಕಾಂಗ್ರೆಸ್ ಹೈಕಮಾಂಡ್ ನಾಯಕರು ಆಯೋಜಿಸಿದ್ದ ಭೋಜನಕೂಟದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾಗಿಯಾಗಿದ್ದರು. ಆದರೆ ಸಿಎಂ ಸಿದ್ದರಾ ಮಯ್ಯ ಭಾಗವಹಿಸದೆ ಇದ್ದದ್ದು ಕುತೂಹಲಕ್ಕೆ ಕಾರಣವಾಗಿದೆ.

ದೆಹಲಿಯಲ್ಲಿ ನಡೆದ ವೋಟ್ ಚೋರಿ ಪ್ರತಿಭಟನೆ ನಂತರ ಭಾನುವಾರ ರಾತ್ರಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಆಯ್ದ ನಾಯಕರಿಗೆ ಮಾತ್ರ ಬೋಜನ ಕೂಟಕ್ಕೆ ಆಹ್ವಾನ ನೀಡಿದ್ದರು. ಭೋಜನಕೂಟದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಭಾಗಿಯಾಗಿದ್ದರು. ಸಿದ್ದರಾಮಯ್ಯ ಅನುಪಸ್ಥಿತಿಯಲ್ಲಿ ಈ ಭೋಜನಕೂಟ ನಡೆದಿದೆ. ಈ ಹಿನ್ನೆಲೆಯಲ್ಲಿ ಹೈಕಮಾಂಡ್ ನಾಯಕರು ಹಾಗೂ ಡಿಕೆ.ಶಿವಕುಮಾರ್ ನಡುವಿನ ಮಾತುಕತೆ ಕುರಿತು ಕುತೂಹಲಗಳು ಶುರುವಾಗಿದೆ.



ಕರ್ನಾಟಕ ಭವನದಲ್ಲಿ ಹಲವು ಶಾಸಕರು, ಸಚಿವರು ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ಬಳಿಕ ಔತಣ ಕೂಟದಲ್ಲಿ ಭಾಗವಹಿಸಿದ್ದ ಡಿ.ಕೆ.ಶಿವಕುಮಾರ್ ಅಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕ ಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಸೇರಿದಂತೆ ಪ್ರಮುಖ ನಾಯಕರನ್ನು ಭೇಟಿ ಮಾಡಿದ್ದರು. ಈ ವೇಳೆ ಡಿಕೆ ಶಿವಕುಮಾರ್ ತಮ್ಮ ಪರವಾದ ವಾದ ವನ್ನು ವರಿಷ್ಠರಿಗೆ ತ

ಪುಟ 2ಕ್ಕೆ

## ವಿಮಾನದಲ್ಲಿ ಸಿಕ್ಕಿಬಿದ್ದ ರಾಜ್ಯದ 20ಕ್ಕೂ ಹೆಚ್ಚು ಸಚಿವರು ಶಾಸಕರು

**ನವದೆಹಲಿ:** ನವದೆಹಲಿಯಲ್ಲಿ ಹವಾಮಾನ ವೈಪರಿತ್ಯ, ಹಿಮಪಾತವಾಗುತ್ತಿರುವ ಹಿನ್ನೆಲೆ ವಿಮಾನಗಳ ಹಾರಾಟದಲ್ಲಿ ವ್ಯತ್ಯಯ ಉಂಟಾಗಿದೆ. ದೆಹಲಿಗೆ ತೆರಳಿದ್ದ ರಾಜ್ಯದ 20ಕ್ಕೂ ಹೆಚ್ಚು ಶಾಸಕ, ಸಚಿವರು ಇಂಡಿಗೋ ವಿಮಾನದಲ್ಲೇ ಸಿಲುಕಿದ್ದಾರೆ.

ವೋಟ್ ಚೋರಿ ಸಮಾವೇಶಕ್ಕೆ ಭಾನುವಾರ ಸಚಿವರು, ಶಾಸಕರು ದೆಹಲಿಗೆ ಆಗಮಿಸಿದ್ದರು. ಸೋಮವಾರ ದಾವಣಗೆರೆಯಲ್ಲಿ ನಡೆಯಲಿರುವ ಶಾಮನೂರು ಶಿವಶಂಕರಪ್ಪ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ದೆಹಲಿಯಿಂದ ಬೆಳಗಾ ವಿಗೆ ಹೋಗುವ ವಿಮಾನ ಏರಿದ್ದರು. ಶಾಸಕರ ವಿಮಾನ ಬೆಳಗ್ಗೆ 5.30ಕ್ಕೆ ದೆಹಲಿಯಿಂದ ಹೊರಡಬೇಕಿತ್ತು.

ಪುಟ 2ಕ್ಕೆ



# ಮೊಟ್ಟೆಯಲ್ಲಿ ಕ್ಯಾನ್ಸರ್ ಅಂಶ ಪತ್ತೆ?

## ಲ್ಯಾಬ್‌ಗಳಲ್ಲಿ ಪರೀಕ್ಷೆಗೆ ಸೂಚನೆ | ಸಚಿವ ದಿನೇಶ್ ಗುಂಡೂರಾವ್

**ಬೆಂಗಳೂರು:** ಮೊಟ್ಟೆ ಪ್ರಿಯರಿಗೆ ಶಾಕಿಂಗ್ ನ್ಯೂಸ್ ಎದುರಾಗಿದೆ. ಮೊಟ್ಟೆಯಲ್ಲಿ ಕ್ಯಾನ್ಸರ್ ಅಂಶ ಪತ್ತೆಯಾಗಿದೆ ಎಂಬ ವಿಚಾರ ಬೆಳಕಿಗೆ ಬಂದಿದೆ. ಈ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಮೊಟ್ಟೆಗಳ ಮಾದರಿಗಳನ್ನು ಸಂಗ್ರಹಿಸಿ ಲ್ಯಾಬ್‌ಗಳಲ್ಲಿ ಪರೀಕ್ಷೆ ನಡೆಸುವಂತೆ ಆರೋಗ್ಯ ಇಲಾಖೆ ಸೂಚನೆ ನೀಡಿದೆ.



ಪ್ರೋಟಿನ್ ಮೂಲವಾದ ಮೊಟ್ಟೆಯನ್ನು ವೆಜಿಟೇರಿಯನ್ಸ್ ಕೂಡ ಬಳಕೆ ಮಾಡುತ್ತಾರೆ. ಆದರೆ, ಜನಪ್ರಿಯ ಬ್ರಾಂಡ್‌ನ ಮೊಟ್ಟೆಗಳಲ್ಲಿ ಕ್ಯಾನ್ಸರ್ ಕಾರಕ ಅಂಶ ಪತ್ತೆಯಾಗಿದೆ ಎನ್ನಲಾಗಿದೆ. ಮೊಟ್ಟೆಗಳಲ್ಲಿ ನೈಟ್ರೋಫ್ಯೂರಾನ್ ಎಂಬ ರಾಸಾಯಿನಕಗಳ ಕಣಗಳು ಕಂಡುಬಂದಿವೆ. ಇದು ಡಿಎನ್‌ಎಯಿಂದ ಸಂತಾನೋತ್ಪತ್ತಿ ಅಂಗಗಳು ಮತ್ತು ರೋಗನಿರೋಧಕ ವ್ಯವಸ್ಥೆಗೆ ಹಾನಿ ಮಾಡುತ್ತದೆ. ಅಲ್ಲದೇ ಇದು ಕ್ಯಾನ್ಸರ್‌ನಂತಹ ಅಪಾಯಕಾರಿ ಕಾಯಿಲೆಗಳಿಗೂ ಕಾರಣವಾಗಬಹುದು ಎಂಬ ವಿಚಾರ ಮೊಟ್ಟೆ ಪ್ರಿಯರಿಗೆ ಆಘಾತವನ್ನುಂಟು ಮಾಡಿದೆ. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ ನಡೆಯುತ್ತಿದೆ.



ಈ ಹಿನ್ನೆಲೆಯಲ್ಲಿ ರಾಜ್ಯ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಪ್ರತಿಕ್ರಿಯಿಸಿದ್ದಾರೆ. ಈ ಹಿಂದೆ ನಡೆಸಿದ ಪರೀಕ್ಷೆಗಳಲ್ಲಿ ಮೊಟ್ಟೆ ಹಾನಿ ಕಾರಕ ಅಂಶಗಳು ಕಂಡುಬಂದಿಲ್ಲ. ಆದರೆ, ಈ ಹೊಸ ಆರೋಪಗಳ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಮೊಟ್ಟೆಗಳ ಮಾದರಿಗಳನ್ನು ಸಂಗ್ರಹಿಸಿ, ಲ್ಯಾಬ್‌ಗಳಲ್ಲಿ ಕೂಲಂಕುಷ ಪರೀಕ್ಷೆ ನಡೆಸುವಂತೆ ಸೂಚನೆ ನೀಡಲಾಗಿದೆ. ಒಂದು ವೇಳೆ ಪರೀಕ್ಷೆಯಲ್ಲಿ ಕ್ಯಾನ್ಸರ್ ಕಾರಕ ಅಂಶಗಳು ಪತ್ತೆಯಾದರೆ, ಮೊಟ್ಟೆ

ಪುಟ 2ಕ್ಕೆ

# ಅಮೆರಿಕಾದೊಂದಿಗಿನ ಒಪ್ಪಂದ ವಿರೋಧಿಸಿ ರೈತರ ಪ್ರತಿಭಟನೆ

ಮೈಸೂರು: ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯು ಅಮೆರಿಕದೊಂದಿಗೆ ಕೃಷಿ ಸಂಬಂಧಿತ ಮುಕ್ತ ವಾಣಿಜ್ಯ ಒಪ್ಪಂದಕ್ಕೆ ಕೇಂದ್ರ ಸರ್ಕಾರ ಸಹಿ ಮಾಡಬಾರದೆಂದು ಆಗ್ರಹಿಸಿ ಕಾಡಾ ಕಚೇರಿ ಬಳಿ ಪ್ರತಿಭಟನೆ ನಡೆಸಿದರು

ರೈತರ ಬೆಳೆಗೆ ಈಗಾಗಲೇ ಸರಿಯಾದ ಬೆಲೆ ಸಿಗದೆ, ಹವಾಮಾನ ವೈಪರೀತ್ಯಗಳ ಹೊಡೆತಕ್ಕೆ ಸಿಲುಕಿ ಸಂಕಷ್ಟದಲ್ಲಿದ್ದಾರೆ. ಬೆಳೆ ಬೆಳೆಯುವ ವೆಚ್ಚ, ಮಾರುಕಟ್ಟೆಯಲ್ಲಿ ದಲ್ಲಾಳಿಗಳ ಹಾವಳಿ, ಬ್ಯಾಂಕ್ ಹಾಗೂ ಖಾಸಗಿ ಸಾಲದ ಕಂಪನಿಗಳ ಸುಳಿಯಲ್ಲಿ ಸಿಲುಕಿ ನಲುಗುತ್ತಿದ್ದಾರೆ. ತೀರಾ ಇತ್ತೀಚಿನ ಎನ್‌ಸಿಆರ್‌ಬಿ (ನ್ಯಾಷನಲ್ ಕ್ರೈಂ ರೆಕಾರ್ಡ್ ಬ್ಯುರೋ) ಪ್ರಕಾರ ದೇಶದಲ್ಲಿ ಪ್ರತಿ ಗಂಟೆಗೆ ಓರ್ವ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ಕರ್ನಾಟಕ ರೈತರ ಆತ್ಮಹತ್ಯೆ ವಿಚಾರದಲ್ಲಿ ದೇಶದಲ್ಲಿ ಎರಡನೇ ಸ್ಥಾನದಲ್ಲಿದೆ. ಕೇಂದ್ರ ಸರ್ಕಾರ ಅಮೆರಿಕದೊಂದಿಗೆ ಹಾಲಿನ ಉತ್ಪನ್ನಗಳು, ಮಕ್ಕೆಜೋಳ, ಅಕ್ಕಿ, ಹತ್ತಿ, ಸೋಯಾ ಬೀನ್, ದ್ವಿದಳ ಧಾನ್ಯಗಳು ಮತ್ತು ಚಿಕನ್ ಸಂಬಂಧಿಸಿದಂತೆ ಸುಂಕ ರಹಿತ, ಅತಿ ಕಡಿಮೆ ಸುಂಕದ ಆಧಾರದ ಮೇಲೆ ಭಾರತಕ್ಕೆ ಆಮದು ಮಾಡಿಕೊಳ್ಳಲು ಒಪ್ಪಂದ ಮಾಡಿಕೊಳ್ಳಲು ಮುಂದಾಗಿರುವುದು ಸರಿಯಲ್ಲ ಎಂದು ಕಿಡಿಕಾರಿದರು. ದೇಶದಲ್ಲಿ ಈಗಾಗಲೇ ಮೆಕ್ಕೆಜೋಳದ ಬೆಲೆ ತೀವವಾಗಿ ಕುಸಿದಿದೆ. ಈಗ ಬರುತ್ತಿರುವ ಮಾಹಿತಿ ಪ್ರಕಾರ ಬೇಳೆ ಕಾಳುಗಳೂ ಕೂಡ ಅದರ ಸಾಲಿನಲ್ಲಿವೆ. ಕೇವಲ ಒಡಂಬಡಿಕೆಯ ಸುದ್ದಿಯ ಆಧಾರದ ಮೇಲೆ ದೇಶದ ರೈತರ ಪರಿಸ್ಥಿತಿ ಈ ಮಟ್ಟಕ್ಕೆ ಇಳಿದಿರುವಾಗ




ಪಶ್ಚಿಮಾತ್ಯ ದೇಶಗಳು ತಮ್ಮ ದೇಶದಲ್ಲಿ ಹೇರಳವಾಗಿ ಬೆಳೆದಿರುವ ಆಹಾರ ಪದಾರ್ಥಗಳನ್ನು ತಂದು ಅತಿ ಕಡಿಮ ಬೆಲೆಗೆ ನಮ್ಮ ದೇಶದೊಳಗೆ ಸುರಿಯಲು ಶುರು ಮಾಡಿದರೆ ನಮ್ಮ ದೇಶದ ರೈತರ ಪರಿಸ್ಥಿತಿ ಏನಾಗಬಹುದು ಎಂಬುದನ್ನೂ ಯೋಚಿಸಲು ಅಸಾಧ್ಯ ಎಂದು ಆತಂಕ ವ್ಯಕ್ತಪಡಿಸಿದರು. ಅಮೆರಿಕಾದ ಒಟ್ಟು ಜನಸಂಖ್ಯೆ 34.8 ಕೋಟಿ. ಅದರಲ್ಲಿ ಕೃಷಿಯಲ್ಲಿ ತೊಡಗಿಸಿಕೊಂಡಿರುವ ರೈತರ ಸಂಖ್ಯೆ ಕೇವಲ 3.4 ಕೋಟಿ. ಇನ್ನೊಂದೆಡೆ ಭಾರತದ ಒಟ್ಟು ಜನಸಂಖ್ಯೆ 140 ಕೋಟಿ. ಅದರಲ್ಲಿ ಸರಿಸುಮಾರು 70 ಕೋಟಿ ರೈತರಿದ್ದಾರೆ. ಕರ್ನಾಟಕದಲ್ಲೇ 3.45 ಕೋಟಿ ರೈತರಿದ್ದಾರೆ. ಅಂದರೆ, ಅಮೆರಿಕ ದೇಶಕ್ಕಿಂತ 25 ಲಕ್ಷಕ್ಕೂ ಹೆಚ್ಚು ರೈತರಿದ್ದಾರೆ. ಆಮೆರಿಕ ದೇಶದ ರೈತರಿಗೆ ಕೃಷಿ ವಲಯದಲ್ಲಿ ಒತ್ತಡವಿದೆ ಎಂಬ ಕಾರಣಕ್ಕಾಗಿ ಅಲ್ಲಿಯ ಹಾಲು ಉತ್ಪನ್ನಗಳು ಜೋಳ .ಅಕ್ಕಿ ಹತ್ತಿ ಸೂಯ ಮತ್ತು ಇನ್ನಿತರ ಧಾನ್ಯಗಳನ್ನು ನಮ್ಮಂತಹ ದೇಶಗಳಿಗೆ ರಫ್ತು ಮಾಡಲು ಮುಂದಾಗಿದ್ದು, ಭಾರತ ಅಮೆರಿಕಾ ಒತ್ತಡಕ್ಕೆ ಮಣಿದಂತೆ ಕಾಣುತ್ತಿದೆ ಎಂದರು

ಕೇಂದ್ರ ಸರ್ಕಾರದಿಂದ ಈಗಾಗಲೇ ಕೃಷಿ ಕ್ಷೇತ್ರದಲ್ಲಿ ದ್ವಿಗುಣ ಖರ್ಚಿನ ಗ್ಯಾರಂಟಿ ಅನುಷ್ಠಾನಕ್ಕೆ ಬಂದಿದೆ. ಜತೆಗೆ ದ್ವಿಗುಣ ರೈತ ಆತ್ಮಹತ್ಯೆ ಸರಣಿಗಳ ಮೂಲಕ ದೇಶದಲ್ಲಿ ಅನಾಥ ಕುಟುಂಬಗಳ ಗ್ಯಾರಂಟಿಯ ಕೊಡುಗೆ ಕೊಟ್ಟಂತಾಗುತ್ತದೆ. ಈ ಕುರಿತು ಪ್ರಧಾನಿ ಹಾಗೂ ಕೇಂದ್ರದ ಕೃಷಿ ಮಂತ್ರಿಗಳಿಗೆ ಪತ್ರ ಬರೆಯಲಾಗಿದೆ. ಜಿಲ್ಲೆಯ ಮತಕ್ಷೇತ್ರದ ಜನಪ್ರತಿನಿಧಿಯಾಗಿರುವ ಯದುವೀರ್ ಅವರು ಸಂಸತ್ತಿನಲ್ಲಿ ರೈತ ಕುಲಕ್ಕೆ ಮುಕ್ತ ವಾಣಿಜ್ಯ ಒಪ್ಪಂದದಿಂದ ಆಗುವ ಅನಾಹುತಗಳ ಬಗ್ಗೆ ಧ್ವನಿ ಎತ್ತುವುದರ ಮೂಲಕ ಭಾರತ ಮತ್ತು ಅಮೆರಿಕ ಮಧ್ಯೆ ಆಗಲು ಹೊರಟಿರುವ ಕೃಷಿ ಸಂಬಂಧಿತ ಮುಕ್ತ ವಾಣಿಜ್ಯ ಒಪ್ಪಂದಕ್ಕೆ ಯಾವುದೇ ಕಾರಣಕ್ಕೂ ಸಹಿ ಹಾಕಬಾರದು ಎಂದು ಪ್ರತಿವಾದಿಸಬೇಕೆಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಮಂಜು ಕಿರಣ್, ಅನುಸೂಯ, ಕೆ.ಟಿ.ಗಂಗಾಧರ್, ರಾಮಣ್ಣ ಕೆಂಚಲ್ಲೆರಾ, ಹೊನ್ನೂರು ಪ್ರಕಾಶ್, ಗ್ಯಾರಂಟಿ ರಾಮಣ್ಣ, ರಾಜ್ಯ ಖಜಾಂಚಿ ಮಲ್ಲಿಕಾರ್ಜುನ್ ಬಳ್ಳಾರಿ, ಗಳಿಗರ ಹುಂಡಿ ವೆಂಕಟೇಶ್ ಸೇರಿ ಇತರರು ಭಾಗವಹಿಸಿದ್ದರು.

# ಕ್ರಿಸ್ಮಸ್‌ಗೆ ಶಾಲೆಗಳ ಅನಧಿಕೃತ ರಜೆ

## ಶ್ರೀರಾಮ ಸೇನೆ ಆಕ್ಷೇಪ, ಡಿಡಿಪಿಐ ಅವರಿಗೆ ದೂರು

ರಾಮನಗರ: ಸರ್ಕಾರದ ರಜೇ ಆದೇಶವನ್ನು ಉಲ್ಲಂಘಿಸಿ ಕೆಲವು ಶಾಲೆಗಳು ಕ್ರಿಸ್ಮಸ್ ಹಬ್ಬಕ್ಕೆ ಅನಧಿಕೃತ ರಜೆ ನೀಡುತ್ತಿರುವುದರ ಬಗ್ಗೆ ಶ್ರೀರಾಮ ಸೇನೆಯ ಜಿಲ್ಲಾ ಘಟಕ ಆಕ್ಷೇಪ ವ್ಯಕ್ತಪಡಿಸಿ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ ದೂರು ನೀಡಿದ್ದಾರೆ.

ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಶಾಲಾ–ಕಾಲೇಜುಗಳು ಸರ್ಕಾರ ಘೋಷಿಸಿರುವ ನಿಗದಿತ ರಜೆ ದಿನಗಳನ್ನು ಮಾತ್ರ ಕಡ್ಡಾಯವಾಗಿ ಅನುಸರಿಸಬೇಕಾಗಿರುತ್ತದೆ. ಆದರೆ ಕೆಲವು ಖಾಸಗಿ ಶಾಲೆಗಳು, ವಿಶೇಷವಾಗಿ ಕ್ರಿಶ್ಚಿಯನ್ ಆಡಳಿತದಲ್ಲಿರುವ ಕೆಲವು ಶಿಕ್ಷಣ ಸಂಸ್ಥೆಗಳು, ಸರ್ಕಾರದ ರಜೆ ಆದೇಶವನ್ನು ಸ್ಪಷ್ಟವಾಗಿ ಉಲ್ಲಂಘಿಸುತ್ತಿವೆ ಎಂದು ದೂರಲಾಗಿದೆ.

ಸರ್ಕಾರವು ಕ್ರಿಸ್ಮಸ್ ಹಬ್ಬದ ಹಿನ್ನೆಲೆಯಲ್ಲಿ ಡಿಸೆಂಬರ್ 25ರಂದು ಒಂದು ದಿನದ ರಜೆಯನ್ನು ಮಾತ್ರ ಅಧಿಕೃತವಾಗಿ ಘೋಷಿಸಿದೆ. ಆದರೂ ಕೆಲವು ಕ್ರಿಶ್ಚಿಯನ್ ನಿರ್ವಹಣೆಯ ಶಾಲೆಗಳು ಸರ್ಕಾರದ ಅನುಮತಿ ಇಲ್ಲದೆ 5 ರಿಂದ 10 ದಿನಗಳವರೆಗೆ ದೀರ್ಘಾವಧಿಯ ಕ್ರಿಸ್ಮಸ್ ರಜೆಯನ್ನು ಘೋಷಿಸುತ್ತಿರುವುದು ಸಂಪೂರ್ಣವಾಗಿ ಕಾನೂನು ಬಾಹಿರವಾಗಿದ್ದು, ಸರ್ಕಾರದ ಆದೇಶಕ್ಕೆ ವಿರುದ್ಧವಾಗಿದೆ ಎಂದು ಆರೋಪಿಸಲಾಗಿದೆ.

ಕ್ರಿಶ್ಚಿಯನ್ ಸಮುದಾಯದ ನಿರ್ವಹಣೆಯಲ್ಲಿರುವ ಶಾಲೆಗಳಲ್ಲಿ ಬಹುಪಾಲು ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಿಬ್ಬಂದಿಗಳು ಹಿಂದು ಸಮುದಾಯಕ್ಕೆ ಸೇರಿದವರಾಗಿದ್ದರೂ, ಶಾಲಾ ವಾತಾವರಣದಲ್ಲಿ ಕ್ರಿಶ್ಚಿಯನ್ ಧಾರ್ಮಿಕ ಆಚರಣೆಗಳು, ಕಾರ್ಯಕ್ರಮಗಳು ಹಾಗೂ ಪ್ರಾಬಲ್ಯವನ್ನು



ಪರೋಕ್ಷವಾಗಿ ಅಥವಾ ನೇರವಾಗಿ ಹೇರುವ ಪ್ರಯತ್ನಗಳು ನಡೆಯುತ್ತಿರುವ ಬಗ್ಗೆ ಗಂಭೀರ ಆಕ್ಷೇಪಗಳು ಕೇಳಿಬರುತ್ತಿವೆ. ಇದು ಶಿಕ್ಷಣ ಸಂಸ್ಥೆಗಳ ಧರ್ಮನಿರಪೇಕ್ಷ ಸ್ವಭಾವಕ್ಕೆ ವಿರುದ್ಧವಾಗಿದ್ದು, ಸಂವಿಧಾನದ ಉದ್ದೇಶಗಳಿಗೂ ಧಕ್ಕೆ ತರುವಂತಾಗಿದೆ ಎಂದು ಶ್ರೀರಾಮ ಸೇನೆ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

### ಹೋರಾಟದ ಎಚ್ಚರಿಕೆ

ಈ ವಿಷಯದಲ್ಲಿ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ವಹಿಸಿದಲ್ಲಿ, ಸರ್ಕಾರದ ಆದೇಶಗಳ ಅನುಷ್ಠಾನ ಮತ್ತು ಹಿಂದು ವಿದ್ಯಾರ್ಥಿಗಳ ಹಿತಾಸಕ್ತಿ ರಕ್ಷಣೆಯ ಉದ್ದೇಶದಿಂದ ರಾಜ್ಯಾದ್ಯಂತ ಕಾನೂನುಬದ್ಧ ಹಾಗೂ ಪ್ರಜಾಸತ್ತಾತ್ಮಕ ರೀತಿಯಲ್ಲಿ ಹೋರಾಟ ಮತ್ತು ಪ್ರತಿಭಟನೆಗಳನ್ನು ನಡೆಸಬೇಕಾಗುತ್ತದೆ ಎಂದು ಎಚ್ಚರಿಸಲಾಗಿದೆ.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ ಪತ್ರ ಸಲ್ಲಿಸುವ ಸಂದರ್ಭದಲ್ಲಿ ಶ್ರೀರಾಮ ಸೇನೆಯ ಜಿಲ್ಲಾಧ್ಯಕ್ಷ ಪರಮೇಶ ಗೌಡ, ಸಾಮಾಜಿಕ ಜಾಲತಾಣಗಳ ಪ್ರಮುಖರಾದ ಸಾಗರ್, ಸ್ವಾಮಿ ಮುಂತಾದವರು ಹಾರಜಿದ್ದರು ಎಂದು ಕರ್ನಾಟಕ ದಕ್ಷಿನ ಪ್ರಾಂತ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ನಾಗಾರ್ಜುನಗೌಡ ತಿಳಿಸಿದ್ದಾರೆ.

### ಕ್ರಮಕ್ಕೆ ಆಗ್ರಹ

ಸರ್ಕಾರದ ರಜೆ ನಿಯಮಗಳನ್ನು ಉಲ್ಲಂಘಿಸಿರುವ ಎಲ್ಲಾ ಶಾಲೆಗಳ ವಿರುದ್ಧ ತಕ್ಷಣ ತನಿಖೆ ನಡೆಸಿ ಕಾನೂನುಬದ್ಧ ಕ್ರಮ ಕೈಗೊಳ್ಳಬೇಕು. ಕ್ರಿಸ್ಮಸ್ ಹಬ್ಬಕ್ಕೆ ಸರ್ಕಾರ ಘೋಷಿಸಿರುವ ಒಂದು ದಿನದ ರಜೆಯ ಹೊರತಾಗಿ ಯಾವುದೇ ಹೆಚ್ಚುವರಿ ರಜೆ ನೀಡದಂತೆ ಕಟ್ಟುನಿಟ್ಟಿನ ನಿರ್ದೇಶನ ಜಾರಿಗೊಳಿಸಬೇಕು. ಮುಂದಿನ ದಿನಗಳಲ್ಲಿ ಯಾವುದೇ ಶಿಕ್ಷಣ ಸಂಸ್ಥೆಗಳಲ್ಲಿ ಧಾರ್ಮಿಕ ಪ್ರಾಬಲ್ಯ ಅಥವಾ ಧಾರ್ಮಿಕ ಆಚರಣೆಗಳನ್ನು ವಿದ್ಯಾರ್ಥಿಗಳ ಮೇಲೆ ಹೇರುವ ಯಾವುದೇ ಚಟುವಟಿಕೆಗಳಿಗೆ ಕಟ್ಟುನಿಟ್ಟಿನ ನಿಷೇಧ ವಿಧಿಸಬೇಕು ಎಂದು ಆಗ್ರಹಿಸಲಾಗಿದೆ.

### ಕನಕಪುರ ಬಿಇಒ ವಿರುದ್ಧ ಆರೋಪ

ದಸರಾ ಹಬ್ಬದ ಸಂದರ್ಭದಲ್ಲಿ ಸರ್ಕಾರಿ ಸುತ್ತೋಲೆಯಂತೆ ಘೋಷಿಸಬೇಕಾದ ರಜೆಗಳನ್ನು ಕಡಿತಗೊಳಿಸಿ ಶಾಲೆಗಳನ್ನು ನಡೆಸುತ್ತಿರುವ ಬಗ್ಗೆ ಹಾಗೂ ಇದರಿಂದ ಹಿಂದೂ ಧಾರ್ಮಿಕ ಭಾವನೆಗಳಿಗೆ ದಕ್ಕೆ ಉಂಟಾಗುತ್ತಿರುವ ಬಗ್ಗೆ ಶ್ರೀರಾಮ ಸೇನೆ ಅಕ್ಟೋಬರ್ ತಿಂಗಳಲ್ಲಿ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಗಮನ ಸೆಳೆಯಲಾಗಿತ್ತು. ಆಗ ಉಪನಿರ್ದೇಶಕರು ಸುತ್ತೋಲೆಯೊಂದನ್ನು ಹೊರೆಡಿಸಿದ್ದರು. ಆದರೂ ಸಹ ಕನಕಪುರ ತಾಲ್ಲೂಕು ವ್ಯಾಪ್ತಿಯ ಕೆಲಸು ಶಾಲಾ ಆಡಳಿತ ಮಂಡಳಿಗಳು ಸುತ್ತೋಲೆಯ ಸೂಚನೆಗಳನ್ನು ಪಾಲಿಸಿಲ್ಲ, ಅಲ್ಲದೆ ಕನಕಪುರ ತಾಲ್ಲೂಕು ಶಿಕ್ಷಣಾಧಿಕಾರಿಗಳು ಮತ್ತು ಅವರ ಕಚೇರಿಯ ಕೆಲವು ಅಧಿಕಾರಿಗಳು ಹಿರಿಯ ಅಧಿಕಾರಿಗಳ ಸೂಚನೆಗಳನ್ನು ಧಿಕ್ಕರಿಸುವ ರೀತಿಯಲ್ಲಿ ದಸರಾ ರಜೆ ನೀಡದ ಶಾಲೆಗಳ ವಿರುದ್ಧ ಯಾವ ಕ್ರಮವನ್ನು ಕೈಗೊಂಡಿಲ್ಲ. ಹಿಂದೂ ಧಾರ್ಮಿಕ ಭಾವನೆಗಳು, ಸನಾತನ ಪರಂಪರೆ, ಸಂಸ್ಕೃತಿ ಮತ್ತು ಸರ್ಕಾರದ ಆದೇಶಗಳಿಗೆ ಗಂಭೀರ ಧಕ್ಕೆ ಉಂಟಾಗುತ್ತಿದೆ. ಹೀಗಾಗಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ದ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕನಕಪುರ ತಹಸೀಲ್ದಾರರಿಗೂ ಪತ್ರ ಬರೆಯಲಾಗಿದೆ ಎಂದು ಶ್ರೀರಾಮ ಸೇನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ನಾಗಾರ್ಜುನಗೌಡ ತಿಳಿಸಿದ್ದಾರೆ.

# ಜಾನಪದ ಕಲೆಯನ್ನು ಉಳಿಸಿ, ಬೆಳೆಸಿ: ಅನ್ನದಾನೇಶ್ವರನಾಥ ಶ್ರೀ




ರಾಮನಗರ: ಜಾನಪದ ಲೋಕ ಒಳ್ಳೆಯ ವಾತಾವರಣವನ್ನು ಸೃಷ್ಟಿಸಿದೆ. ಒಳ್ಳೆಯ ವಿಚಾರಧಾರೆಗಳನ್ನು ಕೊಡುತ್ತಿದೆ. ಯುವ ಪೀಳಿಗೆ ನಮ್ಮ ಜಾನಪದ ಕಲೆ–ಸಾಹಿತ್ಯದ ಬಗ್ಗೆ ಆಸಕ್ತಿ ಬೆಳೆಸಿಕೊಳ್ಳಬೇಕು. ಜಾನಪದ ಕಲೆಗಳನ್ನು ಉಳಿಸಿಕೊಳ್ಳಬೇಕು ಎಂದು ಜಾನಪದ ಪರಿಷತ್ತಿನ ಆಡಳಿತ ಮಂಡಳಿಯ ಸದಸ್ಯರೂ ಆಗಿರುವ ಆದಿ ಚುಂಚನಗಿರಿ ಶಾಖಾ ಮಠದ ಮುಖ್ಯಸ್ಥರಾದ ಶ್ರೀ ಅನ್ನದಾನೇಶ್ವರನಾಥ ಸ್ವಾಮೀಜಿ ಯುವ ಸಮುದಾಯಕ್ಕೆ ಕರೆ ನೀಡಿದರು.

ಇಲ್ಲಿಗೆ ಸಮೀಪದ ಜಾನಪದ ಲೋಕದಲ್ಲಿ ಕರ್ನಾಟಕ ಜಾನಪದ ಪರಿ?ತ್ತು ಹಾಗೂ ಜಾನಪದ ಲೋಕದ ವತಿಯಿಂದ ಆಯೋಜಿಸಲಾಗಿದ್ದ ನಾಡೋಜ ಎಚ್.ಎಲ್. ನಾಗೇಗೌಡರ ನೆನಪಿನ 'ಲೋಕ ಸಿರಿ–112' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಲೋಕಸಿರಿ 112ರ ವಿಶೇಷ ಅತಿಥಿಯಾಗಿ ಭಾಗವಹಿಸಿದ್ದ ಬಾನಂದೂರು ಬೋರಮ್ಮನವರ ಬಗ್ಗೆ ಮಾತನಾಡಿದ ಅವರು ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರು ಹುಟ್ಟಿದ ಬಾನಂದೂರು ಗ್ರಾಮ ತಮಗೆ ಕಾಶಿ ಇದ್ದಂತೆ. ಈ ಪುಣ್ಯ ಭೂಮಿಯಲ್ಲಿ ಬಾನಂದೂರು ಬೋರಮ್ಮನವರು ಹುಟ್ಟಿದ್ದಾರೆ, ಸ್ವಾಮೀಜಿ ಅವರಿಗೆ ಕೊಟ್ಟಷ್ಟೇ ಗೌರವ ಅವರಿಗೂ ಅವರ ಕಲೆಗೂ ಕೊಡುತ್ತೇವೆ ಎಂದರು.

ಶರತ್ ಮೆಮೋರಿಯಲ್ ಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ರಾಜೇಶ್ವರಿ ಮಾತನಾಡಿ, ಈಗಿನ ತಲೆಮಾರಿನ ಮಕ್ಕಳಿಗೆ ಸಿನಿಮಾ ಹಾಡುಗಳ ಬಗ್ಗೆ ಗೊತ್ತು, ಆದರೆ ಜನಪದ ಹಾಡುಗಳು ಗೊತ್ತೇ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಜಾನಪದ ಲೋಕವು ಮುಂದಿನ ತಲೆಮಾರಿನ ಮಕ್ಕಳಿಗೆ ಕಲೆ ಸಂಪ್ರದಾಯ, ಸಂಸ್ಕೃತಿಯನ್ನು ಕೊಂಡೊಯ್ಯುತ್ತಿದೆ ಎಂದರು.

ಗೌರವ ಸ್ವೀಕರಿಸಿದ ಬೋರಮ್ಮ ಮತ್ತು ತಂಡದವರು ಸುಮಧುರವಾದ ಗೀತೆಗಳನ್ನು ಹಾಡಿದರು. ಮದುವೆ ಶಾಸ್ತ್ರದ ಆಚರಣೆಯಲ್ಲಿ ಬರುವ ಇಳ್ಳೇವುಶಾಸ್ತ್ರ, ಎಣ್ಣೆಶಾಸ್ತ್ರ, ಅಕ್ಕಿ ಇಕ್ಕೋಶಾಸ್ತ್ರ, ಕಂಕಣಕಟ್ಟೊ ಶಾಸ್ತ್ರ, ಜರಿಯೋಪದ, ಧಾರೆಪದ, ಫಲ್‌ದನ್ನಶಾಸ್ತ್ರ, ಮಡಲಕ್ಕಿಶಾಸ್ತ್ರ ಸಂಪ್ರದಾಯದ ಸೋಬಾನೆ ಗೀತೆಗಳನ್ನು ಹಾಡಿದರು. ಸಂವಾದದಲ್ಲಿ ತಮ್ಮ ಕುಟುಂಬ, ಗಾಯನ ಕಲಿಕೆ, ತಾವು ನೀಡಿದ ಕಾರ್ಯಕ್ರಮಗಳನ್ನು ಮೆಲುಕು ಹಾಕಿದರು. ಜಾನಪದ ಲೋಕದ ಕಾರ್ಯನಿರ್ವಹಣಾಧಿಕಾರಿ ಸರಸವಾಣಿ ಸ್ವಾಗತಿಸಿದರು. ಪ್ರದೀಪ್ ಎಸ್ ನಿರೂಪಿಸಿದರು. ಡಾ. ಸಂದೀಪ್ ಕೆ.ಎಸ್, ಡಾ. ರವಿ ಯು.ಎಂ, ಡಿಪ್ಲೊಮಾ ವಿದ್ಯಾರ್ಥಿಗಳು, ಜಾನಪದ ಲೋಕದ ಸಿಬ್ಬಂದಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

### ಪದಗಳ ಕುಸಿತ: ಡಾ.ವಿಜಯ್ ರಾಂಪುರ

ಸಾಹಿತಿ ಡಾ. ವಿಜಯ್ ರಾಂಪುರ ಮಾತನಾಡಿ, ತಾವೆಲ್ಲ ಗದ್ದೆ ನಾಟಿ ಮಾಡುವ ಹಾಡುತ್ತಿದ್ದ ಸೋಬಾನೆ ಪದಗಳನ್ನು ಆಲಿಸಿ, ಗ್ರಾಮೀಣ ಭಾಗದ ಸಂಪ್ರದಾಯಗಳನ್ನು ಆಚರಿಸುವಾಗಿ ಹಿರಿಯರು ಹಾಡುತ್ತಿದ್ದ ಗೀತೆಗಳನ್ನು ಆಲಿಸಿ ಅನೇಕ ಪದಗಳನ್ನು ಕಲಿತಿದ್ದಾಗಿ ತಿಳಿಸಿದರು. ಆದರೆ ವರ್ಷಗಳು ಕಳೆದಂತೆ ಜಾನಪದ ಕಲಾವಿದರು ವಯೋಸಹಜ ಕಾರಣ ಮರಣ ಅಪ್ಪುತ್ತಿದ್ದಾರೆ. ಕಲಾವಿದರ ಸಂಖ್ಯೆ ಕ್ಷೀಣಿಸುತ್ತಿದೆ. ಜಾನಪದ ಕಲೆಗಳನ್ನು ಕಲಿಯುವ ಆಸಕ್ತಿಯೂ ಇಲ್ಲ. ಇಂದು ಜಾನಪದ ಗೀತೆಗಳನ್ನು ಧ್ವನಿ ವರ್ಧಕದಲ್ಲಿ ಬಿತ್ತರಿಸಲಾಗುತ್ತಿದೆ. ಹೀಗಾಗಿ ಪದಗಳ ಕುಸಿತ ಕಾಣುತ್ತಿದ್ದೇವೆ ಎಂದರು.

ನಾಡೋಜ ಎಚ್.ಎಲ್ ನಾಗೇಗೌಡರು ಬೋರಮ್ಮ ಅವರ ಕಲೆಯನ್ನು 20 ವರ್ಷಗಳ ಹಿಂದೆಯೇ ಗುರುತಿಸಿ ಅವರಿಗೆ 'ಸೋಬಾನೆ ಚಿಕ್ಕಮ್ಮನ ಪ್ರಶಸ್ತಿ'ಯನ್ನು ನೀಡಿದ್ದರು ಎಂದರು. ಇನ್ನು 8–10 ವ?ಗಳಲ್ಲಿ ಈ ಸೋಬಾನೆ ಕಲಾವಿದರನ್ನು ಪೂರ್ಣ ಪ್ರಮಾಣದಲ್ಲಿ ಕಳೆದುಕೊಳ್ಳುವಂತಹ ಸಾಧ್ಯತೆಗಳು ಹೆಚ್ಚಿವೆ. ಯುವಪೀಳಿಗೆ ಈ ಕಲೆಯನ್ನು ಉಳಿಸುವಂತಹ ಮನೋಭಾವವನ್ನು ನಾವು ಉಳಿಸಿಕೊಳ್ಳದಿದ್ದರೆ ಭವಿ?ದ ಜನಾಂಗ ಈ ಕಲೆಯಿಂದ ಸಂಪೂರ್ಣವಾಗಿ ತೆರೆಮರೆಗೆ ಸರಿಯುತ್ತದೆ ಎಂದು ಹೇಳಿದರು.

# 18ರಿಂದ ಯೋಗ ಉತ್ಸವ

ಮೈಸೂರು: ನಗರದಲ್ಲಿ ಡಿ.18 ರಿಂದ 21ರವರೆಗೆ ವಿಜಯನಗರದ ಜೆಸಿಎಸಿ ಸಭಾಂಗಣದಲ್ಲಿ ಇಂಡಿಕಾ ಮೈಸೂರು ಯೋಗ ಉತ್ಸವ ಆಯೋಜಿಸಲಾಗಿದೆ ಎಂದು ಆಯೋಜಕ ಡಾ.ವಿನಯ್‌ಚಂದ್ರ ಬನವತಿ ತಿಳಿಸಿದರು.

ಗ್ರ್ಯಾಮಿ ಪ್ರಶಸ್ತಿ ಪುರಸ್ಕೃತ ಸಂಗೀತ ನಿರ್ದೇಶಕ ರಿಕ್ಕಿ ಕೇಜ್ ಡಿ.18ರಂದು ಬೆಳಗ್ಗೆ 11ಕ್ಕೆ ನಡೆಯುವ ಉದ್ಘಾಟನೆ ವೇಳೆ ಹಾಜರಿರುವರು. ಕೈಗಾರಿಕೋದ್ಯಮಿ ಎಂ.ಜಗನ್ನಾಥ ಶೆಣೈ, ಎಸ್.ಶ್ರೀಧರನ್, ಗೋಪಾಲ ಕೃಷ್ಣನ್ ಇನ್ನಿತರರು ವೇದಿಕೆಯಲ್ಲಿರುವರು. ಡಿ.21ರಂದು ಮಧ್ಯಾಹ್ನ 12.45ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಸಂಸದ ಯದುವೀರ್ ಒಡೆಯರ್ ಅತಿಥಿಗಳಾಗಿರುವರು ಎಂದು ತಿಳಿಸಿದರು. ಇದು ಯೋಗ ಪರಂಪರೆಯ ಜಾಗತಿಕ ವೇದಿಕೆ ಆಗಲಿದೆ. 30ಕ್ಕೂ ಹೆಚ್ಚು ದೇಶಗಳಿಂದ ಪ್ರತಿನಿಧಿಗಳು ಆಗಮಿಸಲಿದ್ದಾರೆ. 500ಕ್ಕೂ ಹೆಚ್ಚು ಮಂದಿ ಪಾಲ್ಗೊಳ್ಳಲಿದ್ದಾರೆ. 50ಕ್ಕೂ ಹೆಚ್ಚು ಯೋಗ ಗುರುಗಳು ಮಾರ್ಗದರ್ಶನ ನೀಡಲಿದ್ದಾರೆ. ಎಂದು ಮಾಹಿತಿ ನೀಡಿದರು. ಗೋಷ್ಠಿಯಲ್ಲಿ ರತ್ನಪ್ರಸಾದ್, ಲಕ್ಷ್ಮೀನಾರಾಯಣ ಶೆಣೈ, ಬಿ.ಪಿ.ಮೂರ್ತಿ ಮೊದಲಾದವರು ಇದ್ದರು.




ಮೊದಲ ಪುಟದಿಂದ

## ವಿಭೂತಿ ಗಟ್ಟಿ ರವಾನೆ

ಶಾಮನೂರು ಶಿವಶಂಕರಪ್ಪ. ಇಡೀ ನಾಡಿಗೆ, ಜಗತ್ತಿಗೆ ಶಾಮನೂರು ಶಿವಶಂಕರಪ್ಪ ಪರಿಚಯವಾಗಿದ್ದಾರೆ. ವಾಣಿಜ್ಯ ನಗರಿ ದಾವಣಗೆರೆಯನ್ನು ಶೈಕ್ಷಣಿಕ ನಗರಿಯಾಗಿಯೂ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ಹೇಳಿದರು. ಒಂದೇ ಪಕ್ಷದಲ್ಲಿ ಇದ್ದು ಪಕ್ಷ ನಿಷ್ಠೆ ಮೆರೆದಿದ್ದಾರೆ. ಪಕ್ಷ ಬೆಳೆಸಿದವರು. ವೀರಶೈವ ಮಹಾಸಭಾ ಅಧ್ಯಕ್ಷರಾಗಿ ಸಮಾಜದ ಸೇವೆ ಸಲ್ಲಿಸಿದ್ದಾರೆ. ವೀರಶೈವ ಮಹಾಸಭಾವನ್ನು ಸಾಮಾಜಿಕ, ಆರ್ಥಿಕವಾಗಿ ಬಲಗೊಳಿಸಿದ ಕೀರ್ತಿ ಅವರದ್ದು. ಸಮಾಜದ ಐಕ್ಯತೆ, ಒಗ್ಗಟ್ಟನ್ನು ಮನಸಲ್ಲಿ ಇಟ್ಟುಕೊಂಡು ಕೆಲಸ ಮಾಡಿದವರು. ಸಮಾಜದ ಜನರು ರಾಜಕೀಯವಾಗಿ ಆರ್ಥಿಕವಾಗಿ ಮುಂದೆ ಬರಬೇಕು ಎನ್ನುವ ಕನಸು ಕಂಡಿದ್ದರು. ಶಾಮನೂರು ಶಿವಶಂಕರಪ್ಪ ರಾಜಕೀಯ ಸಾಮಾಜಿಕ ಸೇವೆಯಲ್ಲಿ ವೀರ ಮತ್ತು ಧೀರ. ಅವರು ಸಮಾಜದ ಅವಿಸ್ಮರಣೀಯ ನಾಯಕರು. ಅವರು ಬಿಟ್ಟು ಹೋದ ಮಾದರಿ ಆದರ್ಶ ಅನುಕರಣೀಯವಾಗಿದೆ. ಸಿದ್ದಗಂಗಾ ಮಠದಿಂದ ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತೇನೆ ಎಂದು ಹೇಳಿದರು.

## ವಿದ್ಯಾಕಾಶಿಯಾಗಲು ಶಾಮನೂರು ಕಾರಣ

ಕ್ಷೇತ್ರಗಳಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ. ಜವಳಿ ಕ್ಷೇತ್ರದ ಅವನತಿ ಪ್ರಾರಂಭವಾದಾಗ ದಾವಣಗೆರೆಗೆ ಒಂದು ಬ್ರಾಂಡ್ ಹೆಸರನ್ನು ತಂದುಕೊಟ್ಟವರು ಶಿವಶಂಕರಪ್ಪ. ದೀರ್ಘಕಾಲ ಎಐಸಿಸಿ ಖಜಾಂಚಿ ಆಗಿದ್ದರು. ಎಲ್ಲರೊಂದಿಗೂ ಸ್ನೇಹ ಸಂಪಾದಿಸಿದ್ದವರು, ಅಜಾತಶತ್ರು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು ಎಂದು ಹೇಳಿದರು.

15 ದಿನಗಳ ಹಿಂದೆ ಆಸ್ಪತ್ರೆಯಲ್ಲಿ ಅವರನ್ನು ಭೇಟಿ ಮಾಡಿದಾಗ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಅವರ ನಿಧನದಿಂದ ಜನಪರ ನಾಯಕನನ್ನು ಕಳೆದುಕೊಂಡಂತಾಗಿದೆ. ಅವರು ದೊಡ್ಡ ಕುಟುಂಬ ಹಾಗೂ ಲಕ್ಷಾಂತರ ಅಭಿಮಾನಿಗಳನ್ನು ಅಗಲಿದ್ದಾರೆ. ಭಗವಂತ ಅವರೆಲ್ಲರಿಗೂ ದುಃಖ ಭರಿಸುವ ಶಕ್ತಿಯನ್ನು ನೀಡಲಿ ಹಾಗೂ ಮೃತರ ಆತ್ಮಕ್ಕೆ ಚಿರಶಾಂತಿ ನೀಡಲಿ ಪ್ರಾರ್ಥಿಸುತ್ತೇನೆ ಎಂದರು. ನಂತರ ಸ್ಪೀಕರ್ ಯುಟಿ ಖಾದರ್ ಅವರು ವಿಧಾನಸಭೆ ಕಲಾಪವನ್ನು ನಾಳೆಗೆ ಮುಂದೂಡಿದರು. ಅಂತಿಮ ದರ್ಶನ ಪಡೆಯಲು ಯುಟಿ ಖಾದರ್ ಸೇರಿದಂತೆ ಬೆಳಗಾವಿಯಿಂದ ಹಲವು ಸಚಿವರು, ಶಾಸಕರು ದಾವಣಗೆರೆತೆ ಹೊರಟರು.

## ಅಧಿವೇಶನ ವಿಸ್ತರಣೆಗೆ ಬಿಜೆಪಿ ಪತ್ರ

ಸಚಿವರು ಇನ್ನೂ ಉತ್ತರ ನೀಡಬೇಕಿದೆ. ಇದರ ಜೊತೆಗೆ ರಾಜ್ಯದಲ್ಲಿ ಕುಸಿದಿರುವ ಕಾನೂನು ಸುವ್ಯವಸ್ಥೆ, ಸರ್ಕಾರದ ವಿವಿಧ ಇಲಾಖೆಗಳಲ್ಲಿ ಅನುದಾನ ಬಳಕೆಯ ಕಳಪೆ ಸಾಧನೆ ಸೇರಿದಂತೆ ಅನೇಕ ವಿಚಾರಗಳ ಬಗ್ಗೆ ಚರ್ಚಿಸಲು ಶಾಸಕರಿಗೆ ಇನ್ನೂ ಸಾಕಷ್ಟು ಸಮಯಾವಕಾಶದ ಅಗತ್ಯವಿದೆ ಎಂದು ಅವರು ಹೇಳಿದ್ದಾರೆ. ಪಡಿತರ ಚೀಟಿಯ ವಿಚಾರದಲ್ಲಿ ಸರ್ಕಾರ ನಿರ್ಲಕ್ಷ್ಯ ತೋರಿದೆ. ಕರ್ನಾಟಕದಾದ್ಯಂತ ಪಡಿತರ ಚೀಟಿಗಾಗಿ ಸಲ್ಲಿಸಿರುವ 3.22 ಲಕ್ಷಕ್ಕೂ ಅಧಿಕ ಅರ್ಜಿಗಳು ಬಾಕಿ ಉಳಿದಿವೆ. ಅವುಗಳಲ್ಲಿ ಉತ್ತರ ಕರ್ನಾಟಕದ ಜಿಲ್ಲೆಗಳು ಮತ್ತು ಬೆಂಗಳೂರಿನಿಂದ ಅಧಿಕ ಅರ್ಜಿಗಳು ಸಲ್ಲಿಕೆಯಾಗಿವೆ. ಇಂತಹ ಗಂಭೀರ ಸಮಸ್ಯೆಗಳ ಬಗ್ಗೆ ಚರ್ಚೆಯಾಗಿ ಪರಿಹಾರ ಕಂಡುಕೊಳ್ಳಬೇಕಿದೆ. ಆದ್ದರಿಂದ ಅಧಿವೇಶನವನ್ನು ಒಂದು ವಾರ ವಿಸ್ತರಿಸುವ ಬಗ್ಗೆ ಕೂಡಲೇ ತೀರ್ಮಾನ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದ್ದಾರೆ.

## ಮೊಟ್ಟೆಯಲ್ಲಿ ಕ್ಯಾನ್ಸರ್ ಅಂಶ ಪತ್ತೆ?

ಉತ್ಪಾದಕರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ತಿಳಿಸಿದ್ದಾರೆ. ಆರು ತಿಂಗಳ ಹಿಂದೆ ಆಹಾರ ಸುರಕ್ಷತಾ ಇಲಾಖೆ ನಡೆಸಿದ ಪರೀಕ್ಷೆಗಳಲ್ಲಿ ಮೊಟ್ಟೆಗಳಲ್ಲಿ ಹಾನಿಕಾರಕ ವಸ್ತುಗಳು ಕಂಡುಬಂದಿಲ್ಲ. ಇದೀಗ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ಮತ್ತೊಮ್ಮೆ ಪರೀಕ್ಷೆಗಳಿಗೆ ಆದೇಶಿಸಲಾಗಿದೆ ಎಂದು ತಿಳಿಸಿದರು.

## ಪಂಚಭೂತಗಳಲ್ಲಿ ಲೀನ

ಗಂಟೆಯಿಂದ ಸಂಜೆ 4 ಗಂಟೆವರೆಗೆ ಹೈಸ್ಕೂಲ್ ಮೈದಾನದಲ್ಲಿ ಸಾರ್ವಜನಿಕ ದರ್ಶನಕ್ಕೆ ಇಡಲಾಗಿತ್ತು. ಸಾರ್ವಜನಿಕರ ದರ್ಶನ ಮುಕ್ತಾಯದ ಬಳಿಕ ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಲಾಯಿತು. ಮಾವನ ಅಂತ್ಯಸಂಸ್ಕಾರಕ್ಕೆ ಸೊಸೆ ಪ್ರಭಾ ಮಲ್ಲಿಕಾರ್ಜುನ್ ಅವರು ನಂದಾದೀಪ ಹಿಡಿದು ತಂದರು. ಕುಟುಂಬಸ್ಥರು ಬಿಲ್ವಪತ್ರೆ, ಬಾಳೆ ಎಲೆ, ವಿಭೂತಿಯ ಸಿದ್ಧತೆ ಮಾಡಿಕೊಂಡಿದ್ದರು. ಇದರೊಂದಿಗೆ ಸಿದ್ಧಗಂಗಾ ಮಠದಿಂದ ಶ್ರೀಗಳು 100 ವಿಭೂತಿಗಟ್ಟಿಗಳನ್ನೂ ಕಳಿಸಿಕೊಟ್ಟಿದ್ದರು. ಬಿದಿರು ಪಲ್ಲಕ್ಕಿಯಲ್ಲಿ ಪಾರ್ಥೀವ ಶರೀರ ಅಂತ್ಯಕ್ರಿಯೆಯ ಸ್ಥಳ ತಲುಪುತ್ತಿದ್ದಂತೆ ವೀರಶೈವ ಸಂಪ್ರದಾಯದಂತೆ ಅಂತಿಮ ವಿಧಿವಿಧಾನಗಳು ನಡೆಯಿತು.

## ಔತಣಕೂಟದಲ್ಲಿ ಡಿಕೆಶಿಯಷ್ಟೇ ಭಾಗಿ!

ಎಂದು ಮೂಲಗಳು ತಿಳಿಸುವೆ. ಅಧಿಕಾರ ಹಂಚಿಕೆ ವಿವಾದ ಪರಿಸ್ಥಿತಿ ವಿಪರೀತಕ್ಕೆ ತಲುಪಿದರಿಂದಾಗಿ ಹೈಕಮಾಂಡ್ ನಾಯಕರು ಮಧ್ಯ ಪ್ರವೇಶ ಮಾಡಿ ಸೂಚನೆ ನೀಡಿದ್ದರು. ಅದರಂತೆ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ನಡುವೆ ಎರಡು ಉಪಹಾರ ಕೂಟಗಳು ನಡೆದಿದ್ದವು. ಆದರೆ, ಈಗ ಕಾಂಗ್ರೆಸ್ ಹೈಕಮಾಂಡ್ ಆಯೋಜಿಸಿದ್ದ ಭೋಜನಕೂಟದಲ್ಲಿ ಡಿಕೆ.ಶಿವಕುಮಾರ್ ಅವರು ಏಕಾಂಗಿಯಾಗಿ ಭಾಗಿಯಾಗಿರುವುದು ಭಿನ್ನಾಭಿಪ್ರಾಯಕ್ಕೆ ಕಾರಣವಾಗಲಿದೆಯಾ ಎಂಬ ಅನುಮಾನಗಳನ್ನು ಹುಟ್ಟು ಹಾಕಿದೆ. ರಾಜ್ಯದಲ್ಲಿ 2023ರಲ್ಲಿ ಪಕ್ಷ ಅಧಿಕಾರಕ್ಕೆ ಬಂದಾಗ ಅಧಿಕಾರ ಹಂಚಿಕೆ ಒಪ್ಪಂದ ನಡೆದಿರುವುದು ನಿಜವಾಗಿದ್ದಲ್ಲಿ ಸಿಎಂ ಹುದ್ದೆ ಬದಲಾವಣೆ ಬಗ್ಗೆ ಹೈಕಮಾಂಡ್ ಇದೀಗ ಅಂತಿಮ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ. ಅಲ್ಲದೆ, ದೆಹಲಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಸಿದ್ದರಾಮಯ್ಯ ಮತ್ತು ಡಿ.ಕೆ ಶಿವಕುಮಾರ್ ಅವರು ತಮ್ಮ ಬಲ ಪ್ರದರ್ಶಿಸುವ ವೇದಿಕೆಯಂತೆಯೂ ಕಂಡುಬಂದಿದ್ದು ವಿಶೇಷವಾಗಿತ್ತು.

## ಚಳಿಗೆ ಉತ್ತರ ತತ್ತರ

2023ರಲ್ಲಿ ವಿಜಯಪುರದಲ್ಲಿ 6.5 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿತ್ತು. ಎರಡೂ ದಿನಗಳ ಕಾಲ ಶೀತಗಾಳಿ ಬೀಸಲಿದೆ. ವಿಜಯಪುರದಲ್ಲಿ ತಾಪಮಾನ 6 ಡಿಗ್ರಿ ಸೆಲ್ಸಿಯಸ್‌ಗೆ ಕುಸಿಯುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

## ರೈತ ಮಹಿಳೆ ಆತ್ಮಹತ್ಯೆ

ಜಯಮ್ಮ ಅವರು ಕಾಣೆಯಾಗಿದ್ದಾರೆ ಎಂದು ಅವರ ಮಗ ಶೇಖರ್ ಡಿ.13 ರಂದು ದೂರು ನೀಡಿದ್ದರು.

ಡಿ.14ರಂದು ತಾಲೂಕಿನ ಚುಂಚನಕಟ್ಟೆಯ ಗ್ರಾಫೈಟ್ ಇಂಡಿಯಾ ಕಾಲುವೆಯ ಬಳಿ ಯಾವುದೋ ಒಂದು ಮಹಿಳೆಯ ಶವ ಇದೆ ಎಂಬ ಮಾಹಿತಿಯನ್ನು ತಿಳಿದು ಹೋಗಿ ನೋಡಿದಾಗ ಆದು ನಮ್ಮ ತಾಯಿದೆ ಆಗಿರುತ್ತದೆ. ನಮ್ಮ ತಾಯಿಯು ಈ ರೀತಿ ಹೋಗಿ ಆತ್ಮಹತ್ಯೆ ಮಾಡಿಕೊಳ್ಳಲು ತಮ್ಮ ಭೂಮಿಯಲ್ಲಿ ತಂಬಾಕು ಬೆಳೆಯ ವ್ಯವಸಾಯ ಮಾಡಲು ಕೇರಳಾಪುರದ ಕೆನರಾ ಬ್ಯಾಂಕಿನಲ್ಲಿ ನಾಲ್ಕು ಲಕ್ಷ ಹಾಗೂ ಇತರೆ ಕೈ ಸಾಲ ಮಾಡಿದ್ದು ಆದರೆ ತಂಬಾಕು ಬೆಳೆಗೆ ಉತ್ತಮ ಬೆಲೆ ಸಿಗದ ಹಿನ್ನೆಲೆಯಲ್ಲಿ ಮನನೊಂದು ನಮ್ಮ ತಾಯಿಯು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಮೃತ ಜಯಮ್ಮ ಅವರ ಮಗ ಶೇಖರ್ ನೀಡಿರುವ ತಮ್ಮ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಸಾಲಿಗ್ರಾಮ ಪೊಲೀಸ್ ಠಾಣೆಯಲ್ಲಿ ಪ್ರಕರಣವು ದಾಖಲಾಗಿದೆ.

## ವಿಮಾನದಲ್ಲಿ ಸಿಕ್ಕಿಬಿದ್ದ ಸಚಿವರು

ವಿಮಾನದ ಒಳಗಡೆ ಕುಳಿತುಕೊಂಡ ಬಳಿಕ ದಟ್ಟವಾದ ಹೊಗೆಯಿಂದಾಗಿ ವಿಮಾನ ಟೇಕಾಫ್ ಆಗಿಲ್ಲ. ಶಾಸಕರು ವಿಮಾನದಲ್ಲೇ ಕುಳಿ ತಿದ್ದರು. ದೆಹಲಿಯಲ್ಲಿ ಹವಾಮಾನ ವೈಪರೀತ್ಯ ದಿಂದ ವಿಮಾನಗಳ ಟೇಕಾಫ್ ಮತ್ತು ಲ್ಯಾಂಡಿಂ ಗ್‌ಗೆ ಸಮಸ್ಯೆಯಾಗಿದೆ. ಕೋನರೆಡ್ಡಿ, ಬಸನಗೌಡ ಬಾದರ್ಲಿ, ಆನಂದ್ ಗಡದೇವರಮಠ, ಹೆಚ್‌ಕೆ ಪಾಟೀಲ್, ಲಕ್ಷ್ಮೀ ಹೆಬ್ಬಾಳ್ಕರ್, ಶರಣ ಪ್ರಕಾಶ್ ಪಾಟೀಲ್, ರಾಜುಗೌಡ, ಸಲೀಂ ಅಹಮದ್, ತನ್ವೀರ್ ಸೇಠ್, ಸತೀಶ್ ಜಾರಕಿಹೊಳಿ, ಜಿ ಎಸ್ ಪಾಟೀಲ್, ಮಾಲೀಕಯ್ಯ ಗುತ್ತೇದಾರ್, ಈಶ್ವರ್ ಖಂಡ್ರೆ, ಜೆ.ಟಿ.ಪಾಟೀಲ್, ತಿಪ್ಪಣ್ಣ ಕಾಮಕನೂರ್, ನಾಗೇಂದ್ರ, ಎಂ.ಬಿ ಪಾಟೀಲ್, ಅಲ್ಲಮಪ್ರಭು, ರೆಹಮಾನ್ ಖಾನ್, ಕೆಜೆ ಜಾರ್ಜ್ ವಿಮಾನದಲ್ಲಿ ಸಿಲುಕಿದ್ದಾರೆ.

ಮೊದಲ ಪುಟದಿಂದ

## ಅಧಿವೇಶನ ಬಳಿಕ ಉತ್ತರ

ಸುರ್ಜೆವಾಲ, ಮಲ್ಲಿಕಾರ್ಜುನ ಖರ್ಗೆ ಹಾಗೂ ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿ ಮಾಡಬೇಕು. ನಿನ್ನೆ ಇಂದಿರಾ ಭವನದಲ್ಲಿ ನಡೆದ ಭೋಜನ ಕೂಟದಲ್ಲಿ ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಅವರನ್ನೂ ಭೇಟಿ ಮಾಡಿದ್ದೆ ಎಂದು ತಿಳಿಸಿದರು.

ಮಲ್ಲಿಕಾರ್ಜುನ ಖರ್ಗೆ ಅವರ ಜೊತೆಯಲ್ಲೇ ದಾವಣಗೆರೆಗೆ ಹೋಗುತ್ತಿದ್ದೇವೆ. ತುರ್ತು ಕಾರಣಕ್ಕೆ ವಿಶೇಷ ವಿಮಾನ ವ್ಯವಸ್ಥೆ ಮಾಡಲಾಗಿತ್ತು. ಮಂಜು ಕವಿದ ವಾತಾವರಣ ಇರುವ ಕಾರಣಕ್ಕೆ ತಡವಾಯಿತು. ಅಧಿವೇಶನ ಮುಗಿದ ಬಳಿಕ ಮತ್ತೆ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡುತ್ತೀರಾ ಎಂದು ಕೇಳಿದಾಗ, ಪಕ್ಷದಲ್ಲಿ ನಮ್ಮ ಅವರ ಮಧ್ಯೆ ಮಾತುಕತೆ ಇದ್ದೇ ಇರುತ್ತದೆ. ಅದರ ಬಗ್ಗೆ ತಲೆ ಕೆಡಿಸಿಕೊಳ್ಳಬೇಡಿ ಎಂದು ಹೇಳಿದರು.

## ಪುತ್ರ ಮಲ್ಲಿಕಾರ್ಜುನ ಭಾವುಕ

ಹುಟ್ಟಿ, ಕಷ್ಟ ಅನುಭವಿಸಿಯೇ ಬೆಳೆದರು. ಅವರಲ್ಲಿ ಇರುವ ಸಾಮಾನ್ಯ ಜ್ಞಾನ ಮಾತ್ರ ಮೆಚ್ಚುವಂತಹದ್ದು. ಮೊದಲು ಉದ್ಯಮ ಹಾಗೂ ನಂತರ ರಾಜಕೀಯದಲ್ಲಿ ಬೆಳೆದರು. ನಮ್ಮ ತಾತ ಕೂಡಾ ಡಿ.16ರಂದು ನಿಧನರಾಗಿದ್ದರು ತಂದೆ 14ಕ್ಕೆ ನಿಧನರಾಗಿದ್ದಾರೆ ಎಂದು ಭಾವುಕರಾದರು. ಜಿಲ್ಲೆಯ ಅಭಿವೃದ್ಧಿಗೆ ಅವರ ಪಾತ್ರ ಮಹತ್ವದ್ದಾಗಿದೆ. ಅವರಗೊಳ್ಳ ಓಂಕಾರ ಶಿವಚಾರ್ಯ ಸ್ವಾಮೀಜಿ, ಕಣ್ವಕುಪ್ಪೆ ಶ್ರೀ ಗಳ ಸಮ್ಮುಖದಲ್ಲಿ ಶಾಮನೂರು ಶಿವಶಂಕರಪ್ಪ ಅವರ ಪಾರ್ಥಿವ ಶರೀರಕ್ಕೆ ಹಿರಿಯ ಮಗ ಬಕ್ಕೇಶ್ ಹಾಗೂ ಕಿರಿಯ ಮಗ ಎಸ್.ಎಸ್ ಮಲ್ಲಿಕಾರ್ಜುನ್ ವಿಧಿವಿಧಾನ ಪೂರೈಸಿದರು. ಮಲ್ಲಿಕಾರ್ಜುನ್ ಪತ್ನಿ ಸಂಸದೆ ಪ್ರಭಾ ಮಲ್ಲಿಕಾರ್ಜುನ್, ಪುತ್ರಿ ಶ್ರೇಷ್ಟಾ ಶಾಮನೂರು, ಸಮರ್ಥ್ ಶಾಮನೂರು, ಕುಟುಂಬಸ್ಥರು ಭಾಗಿಯಾಗಿದ್ದರು.

# ರತ್ನಾಕರ ವಾಲ್ಮೀಕಿ ಯುವ ವೇದಿಕೆಗೆ ಸಣ್ಣಸ್ವಾಮಿನಾಯಕ ಅಧ್ಯಕ್ಷ

ಎಚ್.ಡಿ.ಕೋಟೆ: ಶ್ರೀರತ್ನಾಕರ ವಾಲ್ಮೀಕಿ ತಾಲೂಕು ನಾಯಕರ ಯುವ ವೇದಿಕೆಯು ಕಬಿನಿ ಪ್ರವಾಸಿ ಮಂದಿರದಲ್ಲಿ ಸಭೆ ನಡೆಸಿ ನೂತನ ಕಾರ್ಯಕಾರಿ ಸಮಿತಿಯನ್ನು ಅಸ್ತಿತ್ವಕ್ಕೆ ತರಲಾಗಿದೆ.

ಅಧ್ಯಕ್ಷರಾಗಿ ಕುಣಿಗಲ್ ಸಣ್ಣಸ್ವಾಮಿ ನಾಯಕ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ. ಗೌರವ



ಅಧ್ಯಕ್ಷ– ಮೇಟಿಕುಪ್ಪೆ ಬಸವ ರಾಜು, ಉಪಾಧ್ಯಕ್ಷ– ಹೆಬ್ಬಲ ಗುಪ್ಪೆ ಕೋಳಿ ರಾಜು, ಪ್ರಧಾನ ಕಾರ್ಯದರ್ಶಿ– ಬೋರೆದೇವರ ಮುಂಟಿ ವೇಣುಗೋಪಾಲ್, ಖಜಾಂಚಿ– ಆಗತ್ತೂರು ಜವರಾಜು, ಪತ್ರಿಕೆ ಕಾರ್ಯದರ್ಶಿಯಾಗಿ ಕಂದಲಿಕೆ ನಿಂಗರಾಜು, ನಿರ್ದೇಶಕರಾಗಿ ನಿಲುವಾಗಿಲು ವೆಂಕಟಾಚಲ, ಅಂಕನಾಥಪುರ ಸ್ವಾಮಿ, ಸೋಗಹಳ್ಳಿ ಬಸಪ್ಪ, ಮುಳ್ಳೂರು ಗೋವಿಂದನಾಯಕ, ತುಂಬಸೋಗೆ ಎಸ್.ಚಂದ್ರು, ಸದಸ್ಯರಾಗಿ ಆಗತ್ತೂರು ಚಲುವನಾಯಕ, ಬಸಾಪುರ ರವಿಕುಮಾರ, ಸದಾಶಿವ, ಮೇಟಿಕುಪ್ಪೆ ವಿಜಯ್ ಪ್ರಕಾಶ್ ನಾಯಕ, ಸರಗೂರು ರವಿಕುಮಾರ, ಹೆಚ್. ಮಟಕೆರೆ ವೀರಭದ್ರನಾಯಕ, ಸರಗೂರು ನವೀನ್ ಕುಮಾರ್, ಸೋಗಹಳ್ಳಿ ಸೋಮೇಶ್ ಆಯ್ಕೆಯಾದರು.

> ಶ್ರೀರತ್ನಾಕರ ವಾಲ್ಮೀಕಿ ತಾಲೂಕು ನಾಯಕರ ಯುವ ವೇದಿಕೆಯು ಕಳೆದ ಹದಿಮೂರು ವರ್ಷಗಳಿಂದ ಸಾಮಾಜಿಕ ಕಾರ್ಯಗಳನ್ನು ಮಾಡಿದೆ. ಮುಂದಿನ ದಿನಗಳಲ್ಲಿ ಬೃಹತ್ ಆರೋಗ್ಯ ಶಿಬಿರ ಆಯೋಜನೆ, ಪ್ರತಿಭಾ ಪುರಸ್ಕಾರ ಸೇರಿದಂತೆ ಸಮಾಜದ ಹಾಗೂ ಸಮುದಾಯದ ಮತ್ತಷ್ಟು ಕೆಲಸ, ಕಾರ್ಯಗಳನ್ನು ಮಾಡಲಾಗುವುದು.
>
> –ಸಣ್ಣಸ್ವಾಮಿ ನಾಯಕ



# ಕಾಡಾನೆ ದಾಂಧಲೆ: ಬೆಳೆ ನಾಶ

ಗುಂಡ್ಲುಪೇಟೆ: ಕಾಡಾನೆ ದಾಂಧಲೆ ನಡೆಸಿ ಬಾಳೆ, ತೊಗರಿ, ಟೊಮ್ಯಾಟೋ ಸೇರಿದಂತೆ ಸೋಲಾರ್ ತಂತಿ ಬೇಲಿಯನ್ನು ತುಳಿದು ನಾಶ ಪಡಿಸಿರುವ ಘಟನೆ ಮಂಚಹಳ್ಳಿ ಗ್ರಾಮದಲ್ಲಿ ಭಾನುವಾರ ತಡರಾತ್ರಿ ನಡೆದಿದೆ.

ತಾಲೂಕಿನ ಬಂಡೀಪುರ ಅಭಯಾರಣ್ಯದ ಓಂಕಾರ ವಲಯ ವ್ಯಾಪ್ತಿಯ ಮಂಚಹಳ್ಳಿ ಗ್ರಾಮದ ನಾಗಮ್ಮ ಎಂಬುವವರಿಗೆ ಸೇರಿದ ಒಂದೂವರೆ ಎಕರೆ ಬಾಳೆ, ಅರ್ಧ ಎಕಕರೆ ತೊಗರಿ ಫಸಲು, ತೆಂಗಿನ ಸಸಿ ಮತ್ತು ನಾಲ್ಕು ಸೋಲಾರ್ ತಂತಿ ಬೇಲಿಯನ್ನು ತುಳಿದಿದೆ. ಜೊತೆಗೆ ರಾಮೇಗೌಡ ಎಂಬ ರೈತರ ತೆಂಗು, ಒಂದು ಎಕರೆ ಟೊಮ್ಯಾಟೊ ಫಸಲನ್ನು ತುಳಿದು ತಿಂದು ನಾಶ ಪಡಿಸಿದೆ. ಇದರಿಂದ ರೈತರಿಗೆ ಅಪಾರ ನಷ್ಟ ಉಂಟಾಗಿದೆ.

ಓಂಕಾರ ವಲಯದ ಮಂಚಹಳ್ಳಿ ವ್ಯಾಪ್ತಿಯ ಕಲ್ಲಾರಹಳ್ಳ ಮತ್ತು ಪೋಟೋ ನಾಗರಾಜು ಜಮೀನು ಪಕ್ಕದ ಎರಡು ಕಂದಕಗಳಿಂದ ಕಾಡಾನೆಗಳು ಸಲೀಸಾಗಿ ಇಳಿದು ರೈತರ ಫಸಲುಗಳ ಮೇಲೆ ದಾಳಿ ನಡೆಸುತ್ತಿವೆ. ಇಷ್ಟಾದರೂ ಕೂಡ ಅರಣ್ಯ ಸಿಬ್ಬಂದಿ ಕಾಡಾನೆಗಳಿಗೆ ಕಡಿವಾಣ ಹಾಕಲು ಮುಂದಾಗಿಲ್ಲ. ಜೊತೆಗೆ ಸಮರ್ಪಕವಾಗಿ



ಗಸ್ತು ತಿರುಗುತ್ತಿಲ್ಲ. ಇದರಿಂದ ನಿರಂತರವಾಗಿ ಫಸಲು ನಾಶವಾಗುತ್ತಿದೆ. ಆದ್ದರಿಂದ ಕೂಡಲೇ ಅರಣ್ಯಾಧಿಕಾರಿಗಳು ರೈಲ್ವೆ ಬ್ಯಾರಿಕೇಡ್ ನಿರ್ಮಿಸಿ ಕಾಡಾನೆ ದಾಂಧಲೆಗೆ ಕಡಿವಾಣ ಹಾಕಬೇಕೆಂದು ಮಂಚಹಳ್ಳಿ ಗ್ರಾಮದ ಮಹದೇಶ್ ಆಗ್ರಹಿಸಿದ್ದಾರೆ.

# ಭವನ್ಸ್ ಗೀತಾ ವಿದ್ಯಾಲಯದಲ್ಲಿ ನಡೆದ ವಾರ್ಷಿಕೋತ್ಸವ ಸಮಾರಂಭ



ಕೊಳ್ಳೇಗಾಲ: ಮಕ್ಕಳಿಗೆ ಬಾಲ್ಯದಿಂದಲೇ ಉತ್ತಮ ಸಂಸ್ಕಾರ ಕಲಿಸಿ ಉತ್ತಮ ಪ್ರಜೆಗಳನ್ನಾಗಿ ರೂಪಿಸಿ ಎಂದು ಮೈಸೂರಿನ ವಿದ್ಯಾಭವನದ ನಿವೃತ್ತ ಪ್ರಾಂಶುಪಾಲರಾದ ಶ್ರೀಮತಿ ವಿಜಯ ನರಸಿಂಹನ್ ಹೇಳಿದರು. ಡಿ.14 ರ ಭಾನುವಾರದಂದು ಭವನ್ಸ್ ಗೀತಾ ವಿದ್ಯಾಲಯವು ಶಾಲಾ ಆವರಣದಲ್ಲಿ ಏರ್ಪಡಿಸಿದ್ದ ವಾರ್ಷಿಕ ಮಹೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಶ್ರೀಮತಿ ವಿಜಯ ನರಸಿಂಹನ್ ರವರು ಈಗಿನ ಮಕ್ಕಳಿಗೆ ವಿದ್ಯೆಯೇ ಮೂಲಾಧಾರವಾಗಿದ್ದು ಮಕ್ಕಳು ವಿದ್ಯೆಯನ್ನು ಆಸಕ್ತಿಯಿಂದ ಕಲಿತು ಜ್ಞಾನಾರ್ಜನೆ ಪಡೆದುಕೊಂಡು ಸತ್ಪ್ರಜೆಗಳಾಗಿ ಉನ್ನತ ಸ್ಥಾನಕ್ಕೇರಿ ಸಮಾಜಕ್ಕೆ ಉತ್ತಮ ಕೊಡುಗೆಯನ್ನು ನೀಡುವ ಮೂಲಕ ಬದುಕನ್ನು ಸಾರ್ಥಕಪಡಿಸಿಕೊಳ್ಳಬೇಕು ಮತ್ತು ಶಾಲೆಗೆ ಮತ್ತು ಪೋಷಕರಿಗೆ ಕೀರ್ತಿ ತರಬೇಕು.

ಮಗುವಿನ ವಿಕಸನಕ್ಕೆ ಶಾಲೆಗಳು ಮತ್ತು ಮನೆ ತುಂಬಾ ಮುಖ್ಯ. ಮಗು ತನ್ನಲ್ಲಿ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳುವಲ್ಲಿ ತಂದೆ–ತಾಯಿ ಶಿಕ್ಷಕರ ಪಾತ್ರ ತುಂಬಾ ಅತ್ಯಾವಶ್ಯಕ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯೆ ಇಲ್ಲದೆ ಉತ್ತಮ ಜೀವನ ಸಾಗಿಸಲು ತುಂಬಾ ಕಷ್ಟ. ಹಿರಿಯರಿಗೆ, ಶಿಕ್ಷಕರಿಗೆ ಗೌರವ ಸಲ್ಲಿಸಲು ಶಿಕ್ಷಣ ಮುಖ್ಯವಾಗಿದ್ದು ವಿದ್ಯಾರ್ಥಿಗಳು ಶಿಕ್ಷಣದ ಮಹತ್ವವನ್ನು ಅರಿತುಕೊಂಡು ನವ ಸಮಾಜ ನಿರ್ಮಿಸುವ ಶಿಲ್ಪಿಗಳಾಗಿ ಹೊರಹೊಮ್ಮಬೇಕು ಎಂದು ಶ್ರೀಮತಿ ವಿಜಯ ನರಸಿಂಹನ್ ಮಕ್ಕಳಿಗೆ ಕಿವಿ ಮಾತು ಹೇಳಿದರು. ಶಾಲೆ ಮುಖ್ಯ ಶಿಕ್ಷಕಿ ಮಹೇಶ್ವರಿಯವರು ವಾರ್ಷಿಕ ವರದಿ ಓದಿದರು.

ಸಂಸ್ಥೆಯ ಕಾರ್ಯದರ್ಶಿ. ಸಿ.ಚನ್ನಮಾದೇಗೌಡರು ಅತಿಥಿಗಳನ್ನು ಸ್ವಾಗತಿಸಿದರು. ನಗರಸಭೆಯ ಮಾಜಿ ಸದಸ್ಯ ಹಾಗೂ ಸಂಸ್ಥೆಯ ನರಸಿಂಹನ್ ವಂದನಾರ್ಪಣೆ ನೆರವೇರಿಸಿದರು. ವೇದಿಕೆಯಲ್ಲಿ ಸಂಸ್ಥೆಯ ಅಧ್ಯಕ್ಷ ಶ್ರೀ ಜಿ.ಎನ್.ಗಿರಿರಾಜನ್, ಉಪಾಧ್ಯಕ್ಷ ಹಾಗೂ ಆರ್ಯ ವೈಶ್ಯ ಸಂಘದ ಅಧ್ಯಕ್ಷ ಶ್ರೀ ಎ.ಡಿ.ಕುಮಾರಕೃಷ್ಣ, ಖಜಾಂಚಿ ಎಸ್.ಲೋಕೇಶ್, ಮುಖ್ಯಶಿಕ್ಷಕಿಯವರಾದ ಶ್ರೀಮತಿ ಮಹೇಶ್ವರಿ, ಸುಮತಿ ಉಪಸ್ಥಿತರಿದ್ದರು. ಸಮಾರಂಭದಲ್ಲಿ ಶಾಲಾ ಮಕ್ಕಳಿಂದ ವಿವಿಧ ಬಗೆಯ ಸಾಂಸ್ಕೃತಿಕ ಕಾರ್ಯಗಳು ನಡೆಯಿತು. ಸಮಾರಂಭದಲ್ಲಿ 2024–25ನೇ ಸಾಲಿನ ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ರೋಹಿತ್ ಎಂಬ ವಿದ್ಯಾರ್ಥಿಯನ್ನು ಹಾಗೂ ಕನ್ನಡ ವಿಷಯದಲ್ಲಿ 125 ಕ್ಕೆ 125 ಅಂಕಗಳನ್ನು ಪಡೆದ ಲಕ್ಷಿ ?ಮೀ ಎಂಬ ವಿದ್ಯಾರ್ಥಿನಿ ಇವರುಗಳನ್ನು ಸನ್ಮಾನಿಸಲಾಯಿತು.

# ಮೂರ್ನಾಡುವಿನಲ್ಲಿ ಅರೆಭಾಷೆ ದಿನಾಚರಣೆ

## ಅರೆಭಾಷೆ ಎಲ್ಲೆಡೆ ಪಸರಿಸುವಂತಾಗಲು ಸಿನಿಮಾ ಮತ್ತು ಕಿರುಚಿತ್ರ ನಿರ್ಮಾಣ ಅಗತ್ಯ

ಮಡಿಕೇರಿ:–ಕನ್ನಡ ಉಪ ಭಾಷೆಗಳಲ್ಲಿ ಒಂದಾದ ಅರೆಭಾಷೆಯನ್ನು ಎಲ್ಲೆಡೆ ಪಸರಿಸುವಂತಾಗಲು ಸಿನಿಮಾ, ನಾಟಕ ಹಾಗೂ ಕಿರುಚಿತ್ರಗಳ ನಿರ್ಮಾಣ ಕಾರ್ಯ ಹೆಚ್ಚಾಗಿ ಆಗಬೇಕು ಎಂದು ಕೊಡಗು ಗೌಡ ನಿವೃತ್ತ ನೌಕರರ ಸಂಘದ ಅಧ್ಯಕ್ಷರಾದ ಚೊಕ್ಕಾಡಿ ಎನ್.ಅಪ್ಪಯ್ಯ ಅವರು ಸಲಹೆ ಮಾಡಿದ್ದಾರೆ.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಇವರ ಸಹಯೋಗದೊಂದಿಗೆ ಮೂರ್ನಾಡು ಗೌಡ ಸಮಾಜದಲ್ಲಿ ಸೋಮವಾರ ನಡೆದ 'ಅರೆಭಾಷೆ ದಿನಾಚರಣೆ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಬೆಳವಣಿಗೆಯಲ್ಲಿ ಸಮಾಜಗಳ ಪಾತ್ರ ಕುರಿತು ಅವರು ಮಾತನಾಡಿದರು.

ಇಂದಿನ ಸಾಮಾಜಿಕ ಮಾಧ್ಯಮ ಯುಗದಲ್ಲಿ ಸಿನಿಮಾ ನಾಟಕ, ಸಾಕ್ಷ್ಯಚಿತ್ರ, ಕಿರುಚಿತ್ರಗಳು, ಎಲ್ಲರನ್ನು ಗಮನಸೆಳೆಯುತ್ತವೆ. ಆದ್ದರಿಂದ ಸಾಮಾಜಿಕ ಮಾಧ್ಯಮವು ಪ್ರಬಲವಾಗಿದ್ದು, ಆ ನಿಟ್ಟಿನಲ್ಲಿ ಅರೆಭಾಷೆ ಬೆಳವಣಿಗೆಗೆ ಇವುಗಳ ನಿರ್ಮಾಣ ಕಾರ್ಯ ಅತ್ಯಗತ್ಯ ಎಂದು ಅಪ್ಪಯ್ಯ ಅವರು ಪ್ರತಿಪಾದಿಸಿದರು. ಅರೆಭಾಷೆಯಲ್ಲಿ ಪುಸ್ತಕಗಳನ್ನು ಹೆಚ್ಚಾಗಿ ಪ್ರಕಟಿಸುವಂತಾಗಬೇಕು. ಪುಸ್ತಕಗಳ ಪ್ರಕಟಣೆ ಒಂದು ಗ್ರಂಥವಾಗಿದ್ದು, ಆ ನಿಟ್ಟಿನಲ್ಲಿ ಇನ್ನಷ್ಟು ಪ್ರಯತ್ನಗಳು ನಡೆಯಬೇಕು ಎಂದು ಅಪ್ಪಯ್ಯ ಅವರು ತಿಳಿಸಿದರು.

2016 ರಿಂದ ಅರೆಭಾಷೆ ದಿನಾಚರಣೆಯನ್ನು ಆಚರಿಸಿಕೊಂಡು ಬರಲಾಗುತ್ತಿದೆ. ರಾಷ್ಟ್ರದಲ್ಲಿ 800 ಕ್ಕೂ ಹೆಚ್ಚು ಸಣ್ಣ ಸಣ್ಣ ಭಾಷೆಗಳಿದ್ದು, ಕನ್ನಡದಲ್ಲಿಯೂ ಸಹ ಹಲವು ಉಪ ಭಾಷೆಗಳಿವೆ. ಆ ನಿಟ್ಟಿನಲ್ಲಿ ಪ್ರಾಂತೀಯ ಭಾಷೆಗಳನ್ನು ಉಳಿಸಿ ಬೆಳೆಸಿಕೊಂಡು ಹೋಗಬೇಕು ಎಂದರು.

ಅರೆಭಾಷೆ ಬೆಳವಣಿಗೆಯಲ್ಲಿ ಎಲ್ಲರ ಪಾತ್ರ ಪ್ರಮುಖವಾಗಿದ್ದು, ಭಾಷೆ ಮತ್ತು ಸಮಾಜ ಒಂದಕ್ಕೊಂದು ಅವಿನಾಭಾವ ಸಂಬಂಧವನ್ನು ಹೊಂದಿದೆ ಎಂದು ತಿಳಿಸಿದರು.



ಕೊಡಗು ಗೌಡ ಸಮಾಜಗಳ ಒಕ್ಕೂಟದ ಮಾಜಿ ಅಧ್ಯಕ್ಷರಾದ ಸೂರ್ತಲೆ ಆರ್. ಸೋಮಣ್ಣ ಅವರು ಅರೆಭಾಷೆ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿಗೆ ಹಿರಿಯರ ಕೊಡುಗೆ ಕುರಿತು ಮಾತನಾಡಿ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಬೆಳವಣಿಗೆಯಲ್ಲಿ ಪಟ್ಟಡ ಪ್ರಭಾಕರ್, ಪುರುಷೋತ್ತಮ ಬಿಳಿಮಲೆ, ಹೊದ್ದೆಟ್ಟಿ ಭವಾನಿ ಶಂಕರ್, ಸೂದನ ಈರಪ್ಪ, ವಿಶ್ವನಾಥ ಬದಿಕಾನ, ಕೋಡಿ ಕುಶಾಲಪ್ಪ ಗೌಡ, ಮೋಹನ್ ಸೋನಾ, ಪಿ.ಜಿ.ಅಂಬೆಕಲ್ಲು, ಬೈತಡ್ಕ ಜಾನಕಿ ಬೆಳ್ಯಪ್ಪ, ಕುರುಂಜಿ ಗಂಗಾಧರ್, ಪೂಜಾರಿ ಮೊಣ್ಣಪ್ಪ, ಕೋರನ ಸರಸ್ವತಿ, ಜೋಯಪ್ಪ ಮಾಸ್ಟರ್, ಹೀಗೆ ಹಲವರು ಶ್ರಮಿಸಿದ್ದಾರೆ ಎಂದು ಅವರು ಹೇಳಿದರು. ಅರೆಭಾಷೆ ಸಂಸ್ಕೃತಿ, ಸಂಪ್ರದಾಯಗಳು ವಿಶೇಷತೆಯನ್ನು ಹೊಂದಿದ್ದು, ಸೋಬಾನೆ ಪದಗಳು ತನ್ನದೇ ಆದ ವೈಶಿಷ್ಟ್ಯತೆ ಹೊಂದಿದೆ ಎಂದು ತಿಳಿಸಿದರು.

ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಸದಾನಂದ ಮಾವಜಿ ಅವರು ಮಾತನಾಡಿ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ವತಿಯಿಂದ ಹಲವು ಸಾಹಿತ್ಯ, ಸಂಸ್ಕೃತಿ ಚಟುವಟಿಕೆ ಕೈಗೊಳ್ಳಲಾಗಿದೆ ಎಂದರು.

ಅಕಾಡೆಮಿ ವತಿಯಿಂದ ನೂರಕ್ಕೂ ಹೆಚ್ಚು ಪುಸ್ತಕಗಳು, 11 ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಲಾಗಿದೆ. ಕಥೆ, ಕವನ, ನಾಟಕ, ಮತ್ತಿತರ ಪುಸ್ತಕಗಳನ್ನು ಹೊರತರಲಾಗಿದೆ ಎಂದರು.

ಅಕಾಡೆಮಿ ವತಿಯಿಂದ ಗಡಿನಾಡ ಉತ್ಸವ, ಗೌರವ ಪ್ರಶಸ್ತಿ ಪ್ರದಾನ ಸಮಾರಂಭ, ಅರೆಭಾಷೆ ದಿನಾಚರಣೆ, ಐನ್‌ಮನೆ ಕಾರ್ಯಕ್ರಮ, ಜೊತೆಗೆ ಕಿರುಚಿತ್ರ ಹಾಗೂ ನಾಟಕ ನಿರ್ಮಾಣ ಮಾಡಲಾಗಿದೆ ಎಂದು ಅವರು ಹೇಳಿದರು. ಮೂರ್ನಾಡು ಗೌಡ ಸಮಾಜದ ಮಾಜಿ ಅಧ್ಯಕ್ಷರಾದ ಚೆಟ್ಟಿಮಾಡ ಟಿ.ಕಾರ್ಯಪ್ಪ(ವಸಂತ) ಅವರು ಮಾತನಾಡಿ ಅರೆಭಾಷೆ, ಸಂಸ್ಕೃತಿ, ಕಲೆ ಉಳಿಸಿ ಬೆಳೆಸುವಂತಾಗಬೇಕು. ಮನೆಯಲ್ಲಿ ಕಡ್ಡಾಯವಾಗಿ ಅರೆಭಾಷೆ ಮಾತನಾಡುವಂತಾಗಬೇಕು. ಇದರಿಂದ ಮಕ್ಕಳು



ಅರೆಭಾಷೆ ಕಲಿಕೆಗೆ ಸಹಕಾರಿ ಯಾಗಲಿದೆ ಎಂದರು. ಭೂಮಿಯನ್ನು ಯಾವುದೇ ಕಾರಣಕ್ಕೂ ಮಾರಿಕೊಳ್ಳಬಾರದು. ಭೂಮಿ ಮಾರಿಕೊಂಡಲ್ಲಿ ನಮ್ಮ ಸಂಸ್ಕೃತಿಯನ್ನು ಮರೆತಂತೆ ಎಂದು ಅವರು ಹೇಳಿದರು.

ಕೊಡಗು ಗೌಡ ವಿದ್ಯಾಸಂಘದ ಅಧ್ಯಕ್ಷರಾದ ಅಂಬೆಕಲ್ಲು ನವೀನ್ ಕುಶಾಲಪ್ಪ ಅವರು ಮಾತನಾಡಿ ಮಡಿಕೇರಿ ನಗರದಲ್ಲಿ ಕೊಡಗು ಗೌಡ ವಿದ್ಯಾಸಂಘ ನೂತನ ಕಟ್ಟಡವನ್ನು 4 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತಿದೆ ಇದಕ್ಕಾಗಿ ಎಲ್ಲರೂ ಕೈಜೋಡಿಸಬೇಕು ಎಂದು ಇದೇ ಸಂದರ್ಭದಲ್ಲಿ ಮನವಿ ಮಾಡಿದರು. ಅಕಾಡೆಮಿ ಸದಸ್ಯರು ಹಾಗೂ ಕಾರ್ಯಕ್ರಮದ ಸಂಚಾಲಕರಾದ ಸಂದೀಪ್ ಪೂಳಕಂಡ ಅವರು ಮಾತನಾಡಿ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯವನ್ನು ಉಳಿಸಿ ಬೆಳೆಸುವಲ್ಲಿ ಅಕಾಡೆಮಿ ವತಿಯಿಂದ ಶ್ರಮಿಸಲಾಗುತ್ತಿದೆ. ಆ ನಿಟ್ಟಿನಲ್ಲಿ ಚಿಣ್ಣರ ಮೇಳ, ಅಜ್ಜಿಯ ಕಥೆ ಮತ್ತಿತರ ಕಾರ್ಯಕ್ರಮ ಆಯೋಜಿಸಲು ಚಿಂತಿಸಲಾಗಿದೆ ಎಂದರು.

ಅಕಾಡೆಮಿ ಸದಸ್ಯರು ಹಾಗೂ ಕಾರ್ಯಕ್ರಮದ ಸಂಚಾಲಕರಾದ ಸೂದನ ಈರಪ್ಪ ಅವರು ಮಾತನಾಡಿ ಅಕಾಡೆಮಿ ವತಿಯಿಂದ 'ಅರೆಭಾಷೆ ರಸಪ್ರಶ್ನೆ' ಸೇರಿದಂತೆ ಹಲವು ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದರು. ಆಕಾಶವಾಣಿಯಲ್ಲಿ ಅರೆಭಾಷೆ 'ಸುದ್ದಿಜೊಂಪೆ' ವಾಚಕರಾದ ರೋಹಿಣಿ ಗುಡ್ಡೆಮನೆ, ವಾಣಿ ಚೊಕ್ಕಾಡಿ, ಮಜ್ಜೆಗೌಡನ ಪ್ರೇಮ ಪ್ರಕಾಶ್, ಉಳುವಾರನ ರೋಷನ್ ವಸಂತ್, ಪುದಿಯನೆರವನ ಸ್ವಾತಿ, ಕಲ್ಲುಮುಟ್ಲು ಜಶ್ಮಿ ಚಿಂತು ಅವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಕ್ರೀಡೆ ಸೇರಿದಂತೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಕು.ಮೇರ್ಕಜೆ ದಿವಿನ್ ಬೋಪಯ್ಯ ಮತ್ತು ಕು.ದೇರಾಜೆ ಭವಿಷ್ಯ ಕಿರಣ್ ಅವರನ್ನು ಸನ್ಮಾನಿಸಲಾಯಿತು. ಮೂರ್ನಾಡು ಗೌಡ ಸಮಾಜದ ಅಧ್ಯಕ್ಷರಾದ ಪಾಣತ್ತಲೆ ಟಿ.ಹರೀಶ್ ಅವರು ಮಾತನಾಡಿದರು. ವಯಸ್ಕರು ಮತ್ತು ಮಕ್ಕಳಿಗೆ ಪ್ರತ್ಯೇಕ ಅರೆಭಾಷೆ ರಸಪ್ರಶ್ನೆ ನಡೆಯಿತು.

# 19–20ರಂದು ಉಪ ಲೋಕಾಯುಕ್ತರ ಕನಕಪುರ ಪ್ರವಾಸ

ರಾಮನಗರ: ರಾಜ್ಯದ ಉಪ ಲೋಕಾಯುಕ್ತರಾದ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ಅವರು ಡಿ. 19 ಹಾಗೂ 20ರಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಕನಕಪುರ ಪ್ರವಾಸ ಕೈಗೊಂಡಿದ್ದಾರೆ.

ಅವರು ಡಿ.19ರ ಶುಕ್ರವಾರ ಮಧ್ಯಾಹ್ನ 1.30ಕ್ಕೆ ಬೆಂಗಳೂರಿನಿಂದ ನಿರ್ಗಮಿಸಿ, ಮಧ್ಯಾಹ್ನ 3.30ಕ್ಕೆ ಕನಕಪುರದ ಸರ್ಕಾರಿ ಪ್ರವಾಸಿ ಮಂದಿರಕ್ಕೆ ಆಗಮಿಸುವರು. ನಂತರ ಸಂಜೆ 4 ಗಂಟೆಗೆ ಪರಿಶೀಲನೆ ನಡೆಸುವರು. ತದನಂತರ ರಾತ್ರಿ 9 ಗಂಟೆಗೆ ಭೀಮೇಶ್ವರಿ ಅಡ್ವೆಂಚರ್ ಮತ್ತು ನೇಚರ್ ಕ್ಯಾಂಪ್‌ನಲ್ಲಿ ತಂಗುವರು. ಡಿ.20ರ ಶನಿವಾರ ಬೆಳಿಗ್ಗೆ 9 ರಿಂದ 10 ಗಂಟೆಯವರೆಗೆ ಕನಕಪುರದ ಡಾ. ಅಂಬೇಡ್ಕರ್ ಪುರ ಭವನದಲ್ಲಿ ಕನಕಪುರ ತಾಲ್ಲೂಕಿಗೆ ಸಂಬಂಧಪಟ್ಟ ಲೋಕಾಯುಕ್ತ ಕಚೇರಿಯಲ್ಲಿ ದಾಖಲಾಗಿರುವ ಪ್ರಕರಣಗಳ ವಿಚಾರಣೆ ಹಾಗೂ ಸಾರ್ವಜನಿಕ ಕುಂದುಕೊರತೆ ಸಭೆಯನ್ನು ಉದ್ಘಾಟಿಸುವರು.

ನಂತರ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5.30ರವರೆಗೆ ಕನಕಪುರದ ಡಾ. ಅಂಬೇಡ್ಕರ್ ಪುರ ಭವನದಲ್ಲಿ ಕನಕಪುರ ತಾಲ್ಲೂಕಿಗೆ ಸಂಬಂಧಪಟ್ಟ ಲೋಕಾಯುಕ್ತ ಕಚೇರಿಯಲ್ಲಿ ದಾಖಲಾಗಿರುವ ಪ್ರಕರಣಗಳ ವಿಚಾರಣೆ ಹಾಗೂ ಸಾರ್ವಜನಿಕ ಕುಂದುಕೊರತೆ ಸಭೆಯಲ್ಲಿ ಭಾಗವಹಿಸುವರು. ಬಳಿಕ ಸಂಜೆ 6 ಗಂಟೆಗೆ ಕನಕಪುರದಿಂದ ನಿರ್ಗಮಿಸಿ ಸಂಜೆ 7.30ಕ್ಕೆ ಬೆಂಗಳೂರು ತಲುಪುವರು ಎಂದು ಕರ್ನಾಟಕ ಲೋಕಾಯುಕ್ತ ರಿಜಿಸ್ಟ್ರಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಂಗೋತ್ಸವ ಮಕ್ಕಳ ಪ್ರತಿಭೆಯನ್ನು ಹೊರತರಲು ಸಹಕಾರಿ: ಡಾ.ಬಿ.ಟಿ.ಕವಿತಾ

# ಜೆಎಸ್‌ಎಸ್ ರಂಗೋತ್ಸವ ಸಮಾರೋಪ ಸಮಾರಂಭ

ಚಾಮರಾಜನಗರ, ರಂಗೋತ್ಸವ ಕಾರ್ಯಕ್ರಮಗಳು ಮಕ್ಕಳ ಪ್ರತಿಭೆಯನ್ನು ಹೊರತರಲು ಸಹಕಾರಿಯಾಗಲಿದೆ. ಪ್ರಸ್ತುತ ವಿದ್ಯಾರ್ಥಿಗಳು ಪ್ರಯೋಗಗಳಿಗೆ ತೊಡಗಿಸಿಕೊಳ್ಳಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಸಲಹೆ ನೀಡಿದರು.

ನಗರದ ವರನಟ ಡಾ.ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಮೈಸೂರಿನ ಜೆಎಸ್‌ಎಸ್ ಮಹಾ ವಿದ್ಯಾಪೀಠ ಹಾಗೂ ಜೆಎಸ್‌ಎಸ್ ಕಲಾ ಮಂಟಪ ಸಹಯೋಗದಲ್ಲಿ ಆಯೋಜಿಸಿದ್ದ ಜೆಎಸ್‌ಎಸ್ ರಂಗೋತ್ಸವ–2025 ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮುಂದಿನ ದಿನಗಳಲ್ಲಿ ಶಾಲಾ–ಕಾಲೇಜುಗಳಿಗೆ ರಂಗೋತ್ಸವ ವಿಸ್ತರಣೆಯಾಗಬೇಕು. ಜಿಲ್ಲೆ ಸಾಂಸ್ಕೃತಿಕವಾಗಿ ಮುಂದುವರಿದಿದ್ದು, ಅದನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಯುವಜನಾಂಗ ಮುಂದಾಗಬೇಕು ಎಂದರು.

ರಂಗಭೂಮಿಯನ್ನು ಒಳಗೊಂಡಂತೆ ಇನ್ನಿತರೆ ಕಲೆಗಳನ್ನು ಸಿದ್ಧಿಸಿಕೊಳ್ಳುವುದರಿಂದ ಪರಿಪೂರ್ಣ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬಹುದಾಗಿದೆ. ರಂಗಭೂಮಿಯನ್ನು ಸೇರಿದಂತೆ ಇನ್ನಿತರೆ ಸಾಂಸ್ಕೃತಿಕ ಕಲೆಗಳು ವಿದ್ಯಾರ್ಥಿಗಳಲ್ಲಿ



ಆತ್ಮ ವಿಶ್ವಾಸವನ್ನು ತಂದುಕೊಡುತ್ತದೆ. ಇದು ಪರಿಣಾಮಕಾರಿ ಕಲಿಕೆಯ ಮಾಧ್ಯಮವಾಗಿದ್ದು, ಜೆಎಸ್‌ಎಸ್ ಶಾಲಾ–ಕಾಲೇಜು ಹಂತದಲ್ಲೇ ಇಂತಹ ಕೆಲಸ ಮಾಡುತ್ತಿರುವುದು ಅತ್ಯಂತ ಸಹಕಾರಿಯಾಗಿದೆ ಎಂದರು.

ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಜಾನಪದ ಗಾಯಕ ಸಿ.ಎಂ.ನರಸಿಂಹಮೂರ್ತಿ ಮಾತನಾಡಿ, ರಂಗಭೂಮಿಯ ಮೂಲಕ ಭವಿಷ್ಯವನ್ನು ಕಟ್ಟಿಕೊಳ್ಳಬಹುದಾಗಿದೆ. ನಮ್ಮ ಜಿಲ್ಲೆ ಜಾನಪದ ಕಲೆಗಳ ತವರೂರಾಗಿದ್ದು, ಇತ್ತೀಚಿನ ಮಕ್ಕಳು ಜಾನಪದ ಕಲೆಗಳಿಂದ ವಿಮುಖರಾಗುತ್ತಿದ್ದಾರೆ. ಯಾವುದೇ ಕಲೆಯನ್ನು ಕಲಿತಾಗ ಮಾತ್ರ ಮುಂದಿನ ತಲೆಮಾರಿಗೆ ಉಳಿಸಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ರಂಗಕಲೆಯನ್ನು ಉಳಿಸಿ ಬೆಳೆಸುವ ಕಾರ್ಯವನ್ನು ಮಾಡಬೇಕಿದೆ ಎಂದರು. ರಂಗಭೂಮಿ ಸಾಮಾಜಿಕ ಕಳಕಳಿಯ ಪ್ರತಿಬಿಂಬಿತವಾಗಿದೆ. ಸಾಮಾಜದ ಅನಿಷ್ಠಗಳ ವಿರುದ್ಧ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದೆ. ರಂಗಭೂಮಿ ಯಲ್ಲಿ ಹೆಚ್ಚು ಕ್ರೀಯಾಶೀಲರಾಗಿದ್ದವರು ಸಮಾಜದ ಉನ್ನತ ಸ್ಥಾನಗಳನ್ನು ಪಡೆದುಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಜೆಎಸ್‌ಎಸ್ ಕಳೆದ 2011 ರಿಂದ ನಾಟಕ ರಂಗೋತ್ಸವ ಆಯೋಜನೆ ಮಾಡುತ್ತಿರುವುದು ದೇಶದಲ್ಲೇ ವಿಶಿಷ್ಟವಾಗಿದೆ ಎಂದು ತಿಳಿಸಿದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಎ.ರಮೇಶ್, ಜೆಎಸ್‌ಎಸ್ ಸಾರ್ವ ಜನಿಕ ಸಂಪರ್ಕಾಧಿಕಾರಿ ಆರ್.ಎಂ.ಸ್ವಾಮಿ, ಜೆಎಸ್‌ಎಸ್ ರಂಗೋತ್ಸವ ಸಂಯೋಜಕ ಚಂದ್ರಶೇಖರಾಚಾರ್, ಜೆಎಸ್ ಎಸ್ ಮಹಿಳಾ ಕಾಲೇಜು ಪ್ರಾಂಶುಪಾಲ ಡಾ.ಮಹದೇವಸ್ವಾಮಿ, ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಪ್ರೊ.

# ಬೇಗೂರು ಲಯನ್ಸ್ ವಿಜಯಶಾಲಿ




ಗುಂಡ್ಲುಪೇಟೆ: ತಾಲೂಕಿನ ರಾಘವಾಪುರ ಗ್ರಾಮದಲ್ಲಿ 75ನೇ ಸಂವಿಧಾನ ದಿನಾಚರಣೆ ಅಂಗವಾಗಿ ಏರ್ಪಡಿಸಲಾಗಿದ್ದ ಜೈ ಭೀಮ್ ರೆವಲ್ಯೂಷನರಿ ಕ್ರಿಕೆಟ್ ಪಂದ್ಯಾವಳಿಯಲ್ಲಿ ಬೇಗೂರು ಲಯನ್ಸ್ ತಂಡ ವಿಜಯಶಾಲಿಯಾಗಿ ಹೊರಹೊಮ್ಮಿತು.

ತಾಲೂಕಿನ ರಾಘವಾಪುರ ಗ್ರಾಮದಲ್ಲಿ ಡಾ. ನವೀನ್ ಮೌರ್ಯ ಅಭಿಮಾನಿ ಬಳಗ ವತಿಯಿಂದ ಎರಡು ದಿನಗಳ ಕಾಲ ನಡೆದ ಜೈ ಭೀಮ್ ರೆವಲ್ಯೂಷನರಿ ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿಜಯಶಾಲಿಯಾದ ಬೇಗೂರು ಲಯನ್ಸ್ , ಹಾಗೂ ರನ್ನರ್ ಅಫ್ ಆಗಿ ರಾಘವಾಪುರ ಡೆಂಜರ್ ಬಾಯ್ಸ್ ತಂಡಕ್ಕೆ ಯುವ ನಾಯಕ ಡಾ.ನವೀನ್ ಮೌರ್ಯ ಪ್ರಶಸ್ತಿ ಪ್ರಧಾನ ಮಾಡಿದರು. ಪಂದ್ಯಾವಳಿಯಲ್ಲಿ ಸರಣಿಯ ಉತ್ತಮ ಬ್ಯಾಟ್ಸ್‌ಮನ್ ಆಗಿ ರಾಘವಾಪುರ ಗ್ರಾಮದ ಯುವ ಕರಾದ ನಾಗಣ್ಣ ಕನ್ವಿ ಮತ್ತು ಉತ್ತಮ ಬೌಲರ್ ಆಗಿ ರವಿ ಗುಬ್ಬಿ ತಮ್ಮದಾಗಿಸಿಕೊಂಡರು. ಶಿವಪ್ರಸಾದ್, ಡಾ.ಪ್ರಸಾದ್, ನವೀನ್, ಜಲೇಂದ್ರ, ಆಯೋಜಕರಾದ ಹರೀಶ್ ರಾಘವಾಪುರ, ಮುಕುಂದ, ಸುನೀಲ್, ಮಣಿಕಂಠ, ಸಂಜು, ರಾಘವಾಪುರ ಕ್ರಿಕೆಟ್ ತಂಡದ ನಾಯಕರುಗಳಾದ ರವಿಶಂಕರ್, ಮಹದೇವಸ್ವಾಮಿ, ನಂಜುಂಡಸ್ವಾಮಿ, ಲೋಕೇಶ್ ಇನ್ನಿತರರು ಹಾಜರಿದ್ದರು.

# ಹರಳುಕೋಟೆಗೆ ಹೈ ಕೋರ್ಟ್ ನ್ಯಾಯಾಧೀಶ ಬಸವರಾಜು ಭೇಟಿ

ಚಾಮರಾಜನಗರ, ಹೈ ಕೋರ್ಟ್ ನ್ಯಾಯಾಧೀಶರಾದ ಜಿ.ಬಸವರಾಜು ಅವರು ಶನಿವಾರ ಚಾಮರಾಜನಗರಕ್ಕೆ ಭೇಟಿ ನೀಡಿ ಹರಳುಕೋಟೆ ಆಂಜನೇಯ ಸ್ವಾಮಿ ದರ್ಶನ ಪಡೆದರು.

ಇದೇ ವೇಳೆ ಹೈ ಕೋರ್ಟ್ ನ್ಯಾಯಾಧೀಶರಾದ ಜಿ.ಬಸವರಾಜು ಅವರಿಗೆ ಶ್ರೀವಾಣಿ ಜ್ಯ ಸಂಸ್ಥೆಯ ಪ್ರಾಂಶುಪಾಲರಾದ ಮಹದೇವಪ್ಪ ಗೌರವಿಸಿ ಸನ್ಮಾಸಿದರು. ಲತಾ ಮಹದೇವಪ್ಪ. ಉದ್ಯಮಿ. ಬಸವಪುರ ರವಿಚಂದ್ರ, ಶ್ರೀನಿಧಿಕುದರ್, ಮಾಜಿ ಜಿ.ಪಂ ಅಧ್ಯಕ್ಷ ಸಿ.ಎ.ಮಹದೇವಶೆಟ್ಟಿ, ಕ್ರೀಡಾಪಟು ವಿ. ಶ್ರೀನಿವಾಸಪ್ರಸಾದ್, ಬಸ್ ಮಾಲೀಕರಾದ ರಾಜೀವ. ಚಂದ್ರು ಹಾಜರಿದ್ದರು.



## ಬೆಂಗಳೂರಿನಿಂದ ಚಾಮರಾಜನ ಗರಕ್ಕೆ ಆಗಮನ

# ಸ್ವದೇಶಿ ಜಾಗೃತಿ ಸೈಕಲ್ ಜಾಥಾಗೆ ಅದ್ದೂರಿ ಸ್ವಾಗತ

ಚಾಮರಾಜನಗರ: ಬೆಂಗಳೂರಿನಿಂದ ಚಾಮರಾಜನಗರಕ್ಕೆ ಆಗಮಿಸಿದ ಸ್ವದೇಶಿ ಜಾಗೃತಿ ಸೈಕಲ್ ಜಾಥಾಗೆ ಉದ್ಯಮಿ ನಿತಿನ್ ಕುಮಾರ್ , ಮುಖ್ಯ ಶಿಕ್ಷಕ ಮಹದೇವೇಗೌಡ ಇತರರು ಅದ್ದೂರಿ ಸ್ವಾಗತ ಕೋರಿ ಬರ ಮಾಡಿಕೊಂಡರು.

ಶ್ರೀ ಪರಿಪೂರ್ಣ ಸನಾತನ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿರುವ ಸ್ವದೇಶಿ ಜಾಗೃತಿ ಸೈಕಲ್ ಜಾಥಾಯು ಬೆಂಗಳೂರಿನಲ್ಲಿ ಚಾಲನೆಗೊಂಡು ಬಿಡದಿ, ರಾಮನಗರ, ಚನ್ನಪಟ್ಟಣ, ಮಂಡ್ಯ ಮೂಲಕ ಚಾಮರಾಜನಗರಕ್ಕೆ ಆಗಮಿಸಿದ ಜಾಥಾಗೆ ಶ್ರೀಚಾಮರಾಜೇಶ್ವರ ದೇವಸ್ಥಾನ ಮುಂಭಾಗದಲ್ಲಿ ಸ್ವಾಗತ ಕೋರಿ ಬರಮಾಡಿಕೊಳ್ಳಲಾಯಿತು.

ಸ್ವದೇಶಿ ಬಳಸಿ, ದೇಶ ಬೆಳಸಿ: ಈ ಸಂದರ್ಭದಲ್ಲಿ ಬ್ರಿಗೇಡಿಯರ್ ರವಿ ಮುನಿಸ್ವಾಮಿ ಮಾತನಾಡಿ, ನಾಡಿನ ಪ್ರತಿಯೊಬ್ಬ ಯುವಕರನ್ನು ಬೆಂಗಳೂರಿನಿಂದ ಹಿಡಿದು ಅತ್ಯಂತ ದೂರದ ಗ್ರಾಮಗಳವರೆಗೆ– ನಾನು ಈ ಚಳವಳಿಗೆ ಸೇರುವಂತೆ ಆಹ್ವಾನಿಸುತ್ತೇನೆ. ಬನ್ನಿ, ಸ್ವದೇಶಿಯ ಆತ್ಮವನ್ನು ಪುನರುಜ್ಜೀವಗೊಳಿಸೋಣ.



ನಮ್ಮ ಮಣ್ಣಿನಲ್ಲಿ ಬೇರುಬಿಟ್ಟ, ನಮ್ಮ ಕೈಗಳಿಂದ ರೂಪುಗೊಂಡ, ನಮ್ಮ ದೃಷ್ಟಿಯಿಂದ ಮುನ್ನಡೆಯುವ ಉದ್ಯಮಗಳನ್ನು, ಸಂಸ್ಥೆಗಳನ್ನು, ರಫ್ತು ಸಾಮ್ರಾಜ್ಯಗಳನ್ನು ನಿರ್ಮಿಸೋಣ ಎಂದರು.

ಇಂದು ನಾನು ನಿಮ್ಮ ಮುಂದಿರುವುದು ಒಂದು ಘೋಷಣೆಯ ಕಹಳೆ ಊದಲು: "ಯೂತ್ ಫಾರ್ ನೇಶನ್" ಚಳವಳಿಯನ್ನು, ಬೆಂಗಳೂರು ಮತ್ತು ಕರ್ನಾಟಕದ ಗ್ರಾಮೀಣ ಜಿಲ್ಲೆಗಳಿಗಾಗಿ "ಸ್ವದೇಶಿ ಜಾಗರಣ"ದ ಜೊತೆಯಲ್ಲಿ ಆರಂಭಿಸಲು. ಜಗತ್ತಿನ ವ್ಯಾಪಾರ ಯುದ್ಧಗಳು ಗಾಢಗೊಳ್ಳುತ್ತಿರುವಾಗ, ಸರಕು ಸರಬರಾಜು ಸರಪಳಿಗಳು ಅಸ್ಥಿರವಾಗುತ್ತಿರುವಾಗ, ಭೂರಾಜಕೀಯ ಸಮೀಕರಣಗಳು ಪರಿವರ್ತನಗೊಳ್ಳುತ್ತಿರುವಾಗ ಇಂತಹ ಸಂದರ್ಭದಲ್ಲಿ ಸ್ವದೇಶಿಯ ಆತ್ಮಕ್ಕೆ, ಅಂದರೆ ಆತ್ಮನಿರ್ಭರತೆ, ಸ್ವದೇಶಿ ಉದ್ಯಮಶೀಲತೆ, ಆರ್ಥಿಕ ಗೌರವ ಮತ್ತು ರಾಷ್ಟ್ರೀಯ ಧೈರ್ಯಕ್ಕೆ ತಿರುಗಿಕೊಳ್ಳುವುದು ನಮ್ಮ ಕರ್ತವ್ಯವೂ ಹಾಗೆಯೇ ಅವಕಾಶವೂ ಆಗಿದೆ ಎಂದರು.

ಇತಿಹಾಸದಲ್ಲಿ ಸ್ವದೇಶಿಯ ಪರಿಕಲ್ಪನೆ ಕೇವಲ ಆರ್ಥಿಕವಾಗಿರಲಿಲ್ಲ; ಅದು ದೇಶಭಕ್ತಿಯ ಆಧರವೂ ಆಗಿತ್ತು–ವಿದೇಶಿ ಶೋಷಣೆಗೆ ಪ್ರತಿರೋಧ, ಸ್ಥಳೀಯ ಉದ್ಯಮಗಳ ಪುನರುಜ್ಜೀವನ ಮತ್ತು ರಾಷ್ಟ್ರೀಯ ಗೌರವದ ಪುನರ್ ಸ್ಥಾಪನೆ.ಅಸ್ಥಿರ ಇಂದಿನ ಜಾಗತಿಕ ವ್ಯಾಪಾರ ಸಂಘರ್ಷಗಳು ಮತ್ತು ಬದಲಾಗುತ್ತಿರುವ ಭೂರಾಜಕೀಯ ಒಕ್ಕೂಟಗಳು ಸುಂಕಗಳು, ವ್ಯಾಪಾರ ನಿರ್ಬಂಧಗಳು, ಸರಬರಾಜು ಸರಪಳಿಯ ವ್ಯತ್ಯಯಗಳು ಇವುಗಳ ನಡುವೆ ವಿದೇಶಿ ಆಮದುಗಳ ಮೇಲೆ ಅಧಿಕ ಅವಲಂಬನೆ ಆರ್ಥಿಕ ಭದ್ರತೆಯನ್ನು ಅಪಾಯದಲ್ಲಿಡುತ್ತದೆ. ಇಂತಹ ಸಂದರ್ಭದಲ್ಲಿ ದೇಶೀಯ ಉತ್ಪಾದನೆ ಮತ್ತು ರಫ್ತುಗಳನ್ನು ಉತ್ತೇಜಿಸುವುದು ರಾಷ್ಟ್ರೀಯಕಾರ್ಯತಂತ್ರವೂ ಆಗಿದೆ ಎಂದರು.

# ಇಂದು ಪತ್ರಕರ್ತರ ಸಾಂಸ್ಕೃತಿಕ ವೇದಿಕೆ ಉದ್ಘಾಟನೆ

ಮಡಿಕೇರಿ: ಕೊಡಗು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧೀನದಲ್ಲಿ ಅಸ್ತಿತ್ವಕ್ಕೆ ಬಂದಿರುವ ಪತ್ರಕರ್ತರ ಸಾಂಸ್ಕೃತಿಕ ವೇದಿಕೆಯ ಉದ್ಘಾಟನಾ ಕಾರ್ಯಕ್ರಮ ಡಿ. 16 ರಂದು ಕುಶಾಲನಗರ ಬಳಿಯ ಹುಣಸೆವಾಡಿ ಸರ್ಕಲ್‌ನಲ್ಲಿರುವ ಕೂರ್ಗ್ ವಾಟರ್ ಪಾರ್ಕ್‌ನಲ್ಲಿ ಆಯೋಜಿತವಾಗಿದೆ ಎಂದು ಪ್ರಧಾನ ಕಾರ್ಯದರ್ಶಿ ಹೆಚ್.ಜೆ. ರಾಕೇಶ್ ತಿಳಿಸಿದ್ದಾರೆ.

ಬೆಳಿಗ್ಗೆ 10 ಗಂಟೆಗೆ ಕೊಡಗು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬಾಚರಣಿಯಂಡ ಅನು ಕಾರ್ಯಪ್ಪ ಅಧ್ಯಕ್ಷತೆಯಲ್ಲಿ ನಡೆಯಲಿರುವ ಕಾರ್ಯಕ್ರಮವನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಉದ್ಘಾಟಿಸಲಿದ್ದಾರೆ. ಸಾಂಸ್ಕೃತಿಕ ವೇದಿಕೆಗೆ ಬಿಗ್‌ಬಾಸ್ ರಿಯಾಲಿಟಿ ಶೋ ಸ್ಪರ್ಧಿ ಹಾಗೂ ಹಾಸ್ಯ ನಟ ತುಕಾಲಿ ಸಂತೋಷ್ ಚಾಲನೆ ನೀಡಲಿದ್ದು, ಹಿರಿಯ ಪತ್ರಕರ್ತ ರವಿ ಟೆಲೆಕ್ಸ್ ಅವರು ಮುಖ್ಯ ಭಾಷಣ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕೂರ್ಗ್ ವಾಟರ್ ಪಾರ್ಕ್ ಮಾಲೀಕ ಲಕ್ಷ್ಮೀ ನಾರಾಯಣ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಅಜ್ಜಮಾಡ ರಮೇಶ್ ಕುಟ್ಟಪ್ಪ, ರಾಜ್ಯ ನಿರ್ದೇಶಕಿ ಬಿ.ಆರ್. ಸವಿತಾ ರೈ, ರಾಷ್ಟ್ರೀಯ ಸಮಿತಿ ಸದಸ್ಯ ಪಳೆಯಂಡ ಪಾರ್ಥ ಚಿಣ್ಣಪ್ಪ, ಪತ್ರಕರ್ತರ ಸಾಂಸ್ಕೃತಿಕ ವೇದಿಕೆ ಸಂಚಾಲಕ ಟಿ.ಆರ್. ಪ್ರಭುದೇವ್ ಕುಶಾಲನಗರ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಎಂ.ಎನ್. ಚಂದ್ರಮೋಹನ್, ವೀರಾಜಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ರೆಜಿತ್ ಕುಮಾರ್, ಪೊನ್ನಂಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸಣ್ಣುವಂಡ ಕಿಶೋರ್ ನಾಚಪ್ಪ ಹಾಗೂ ಸೋಮವಾರಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ವಿಶ್ವ ಕುಮಾರ್ ಅವರುಗಳು ಪಾಲ್ಗೊಳ್ಳಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

# ವಾರ್ಡನ್ ಪೃಥ್ವಿ ರಾಜ್, ಶಿಕ್ಷಕಿ ವಿ.ಎಸ್. ಕವಿತಾಗೆ ರಾಜ್ಯ ಮಟ್ಟದ ಪ್ರಶಸ್ತಿ

ಚಾಮರಾಜನಗರ: ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು ಕೊಡಲ್ಪಡುವ ರಾಜ್ಯ ಮಟ್ಟದ ಪ್ರಶಸ್ತಿಗೆ ಜಿಲ್ಲೆಯ ನಿಲಯ ಪಾಲಕ ಪೃಥ್ವಿರಾಜ್, ಶಿಕ್ಷಕಿ ವಿ .ಎಸ್. ಕವಿತಾ ಭಾಜನರಾಗಿದ್ದಾರೆ.



ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಪೃಥ್ವಿರಾಜ್ ಹಾಲಹಳ್ಳಿ ಗೆ ಹೆಚ್. ಎನ್. ನರಸಿಂಹಯ್ಯ ಪ್ರಶಸ್ತಿ, ಹನೂರು ತಾಲೂಕಿನ ಕವಿತಾ ವಿ. ಎಸ್. ಗೆ ಚೈತನ್ಯಶ್ರೀ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಶೈಕ್ಷಣಿಕ ಕ್ಷೇತ್ರದಲ್ಲಿ ಮಾಡಿದ ಸಾಧನೆಯನ್ನು ಗುರುತಿಸಿ ನಿಲಯಪಾಲಕ ಪೃಥ್ವಿರಾಜ್ ಹಾಲಹಳ್ಳಿ ಅವರು ಸಮಾಜ ಕಲ್ಯಾಣ ಇಲಾಖೆ ಕಬ್ಬಳ್ಳಿ ಮತ್ತು ಹನೂರು ತಾಲೂಕಿನ ರಾಮಾಪುರದ ಉನ್ನತ ಹಿರಿಯ. ಪ್ರಾಥಮಿಕ. ಶಾಲೆ ಶಿಕ್ಷಕಿ ಕವಿತಾ ಅವರಿಗೆ ರಾಜ್ಯಮಟ್ಟದ ಪ್ರಶಸ್ತಿ ಲಭಿಸಿದೆ. ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತಿನ ಕೊಡ ಮಾಡುವ ಚಿಂತಕ ಹೆಚ್ ನರಸಿಂಹಯ್ಯ ಪ್ರಶಸ್ತಿಯು ಪೃಥ್ವಿ ರಾಜ್ ಅವರಿಗೆ ಹಾಗೂ ಚೈತನ್ಯಶ್ರೀ ಪ್ರಶಸ್ತಿಯು ಕವಿತಾ ವಿ.ಎಸ್.ಅವರಿಗೆ, ನೀಡಲಾಗುತ್ತಿದೆ ಎಂದು ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತಿನ ರಾಜ್ಯಾಧ್ಯಕ್ಷ ಡಾ. ಹುಲಿಕಲ್ ನಟರಾಜ್ ಘೋಷಣೆ ಮಾಡಿದ್ದಾರೆ. ಡಿಸೆಂಬರ್ 28, 29 ಮತ್ತು 30ರಂದು ಮೂರು ದಿನಗಳ ಕಾಲ ಯಾದಗಿರಿಯಲ್ಲಿ ನಡೆಯಲಿರುವ ವೈಜ್ಞಾನಿಕ ಸಂಶೋಧನಾ ಪರಿಷತ್ತಿನ 5ನೆ ರಾಜ್ಯ ಮಟ್ಟದ ವೈಜ್ಞಾನಿಕ ಸಮ್ಮೇಳನದಲ್ಲಿ ಅವರಿಗೆ ಪ್ರಶಸ್ತಿ ನೀಡಲಾಗುತ್ತಿದೆ ಎಂದು ತಿಳಿಸಿದ್ದಾರೆ. ಚಾಮರಾಜನಗರ ಜಿಲ್ಲಾಧ್ಯಕ್ಷ ಕಿರಣ್ ರಾಜ್ ಎಂ. ಪ್ರತಿವರ್ಷ ನಾನಾ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ ಪ್ರಶಸ್ತಿ ನೀಡಲಾಗುತ್ತಿದೆ.ಈ ಬಾರಿ ಎರಡೂ ವಿಭಾಗಕ್ಕೆ ತಲಾ ಮೂರು ಹೆಸರನ್ನು ರಾಜ್ಯ ಸಮಿತಿ ಗೆ ಕಳುಹಿಸಿಕೊಡಲಾಗಿತ್ತು. ಅದರಲ್ಲಿ ಪೃಥ್ವಿ ರಾಜ್ ಹೆಚ್ ಎಂ ಮತ್ತು ಕವಿತಾ ವಿ.ಎಸ್. ಅವರನ್ನು ರಾಜ್ಯ ಸಮಿತಿ ಆಯ್ಕೆ ಮಾಡಿದೆ.. ಯಾದಗಿರಿಯಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಚಾಮರಾಜನಗರ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿಕೊಡಬೇಕು ಎಂದು ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು ಜಿಲ್ಲಾಧ್ಯಕ್ಷ ಎಂ.ಕಿರಣ್ ರಾಜ್ ಮನವಿ ಮಾಡಿದ್ದಾರೆ.

# ಕರುವಿನ ಮೇಲೆ ಚಿರತೆ ದಾಳಿ

ಗುಂಡ್ಲುಪೇಟೆ: ಶಿವಪುರ ಗ್ರಾಮದ ಮಹೇಶ್ ಎಂಬ ರೈತರ ಜಮೀನಿನಲ್ಲಿ ರಾತ್ರಿ ಸುಮಾರು 2:30 ರ ಸಮಯದಲ್ಲಿ ಚಿರತೆಯೊಂದು ಕರುವಿನ ಮೇಲೆ ದಾಳಿ ಮಾಡಿ ತಿಂದು ಹಾಕಿರುವ ಘಟನೆ ನಡೆದಿದೆ.



ತಾಲ್ಲೂಕಿನ ಕೆಕೆ ಹುಂಡಿ ಗ್ರಾಮದ ಪುಟ್ಟಮಾದೇಗೌಡ ಎಂಬುವವರು ಮನೆಯ ಕೊಟ್ಟಿಗೆಯಲ್ಲಿ ಕಟ್ಟಿಹಾಕಿದ್ದ ಎರಡು ಕರುಗಳ ಮೇಲೆ ಚಿರತೆ ದಾಳಿ ನಾಡಸಿ ಕೊಂದು ಹಾಕಿರುವ ಘಟನೆ ನಡೆದಿದೆ.

ಶಿವಪುರ ಗ್ರಾಮದಲ್ಲಿ ಚಿರತೆ ದಾಳಿ ಮಾಡಿದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಗೆ ಕರೆ ಮಾಡಿ ಸ್ಥಳಕ್ಕೆ ಬಾರದಿದ್ದರೆ ರೈತರೆಲ್ಲ ಸೇರಿ ಶಿವಪುರ–ಗುಂಡ್ಲುಪೇಟೆ ರಸ್ತೆ ಸಂಚಾರ ತಡೆದು ಪ್ರತಿಭಟನೆ ಮಾಡಲಾಗುವುದು ಎಂದು ಕರೆಕೊಟ್ಟ ಹಿನ್ನೆಲೆಯಲ್ಲಿ ಅಧಿಕಾರಿಗಳು ಜಾಗಕ್ಕೆ ಬಂದು ಪರಿಶೀಲನೆ ನಡೆಸಿ ಪರಿಹಾರ ದೊರಕಿಸಿಕೊಡುತ್ತೇವೆ ಎಂದು ತಿಳಿಸಿದರು ಎಂದು ಗ್ರಾಮದ ಮಂಜು ತಿಳಿಸಿದರು. ಇತ್ತೀಚಿನ ದಿನಗಳಲ್ಲಿ ಪ್ರತಿನಿತ್ಯ ಕಾಡುಪ್ರಾಣಿಗಳ ಹಾವಳಿಯಿಂದ ಜಾನುವಾರುಗಳ ಮೇಲೆ ದಾಳಿ ನಡೆಸುತಿದ್ದು ಇದರಿಂದ ತಾಲ್ಲೂಕಿನ ಭಾಗದ ರೈತರು ಆತಂಕಕ್ಕೆ ಒಳಗಾಗಿದ್ದು ಆದಷ್ಟು ಬೇಗ ಚಿರತೆ ,ಹುಲಿ ಸೆರೆ ಹಿಡಿಯುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ.

# ಹೊಂಗಲವಾಡಿ ಬಡ ಕುಟುಂಬಕ್ಕೆ ಪುಡ್ ಕಿಟ್, ಹೊದಿಕೆ ವಿತರಣೆ



ಚಾಮರಾಜನಗರ, ರಾಮಾಬಾಯಿ ಡಾ.ಬಿ. ಆರ್. ಅಂಬೇಡ್ಕರ್ ಸೇವಾ ಸಮಿತಿ ಟ್ರಸ್ಟ್ ವತಿಯಿಂದ ಸಮಾಜಮುಖಿ ಕಾರ್ಯಗಳನ್ನು ಮಾಡಲಾಗುತ್ತದೆ ಎಂದು ಸೇವಾ ಸಮಿತಿ ಟ್ರಸ್ಟ್ ಅಧ್ಯಕ್ಷರು, ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಯೋಜಕ ಸಿ.ಎಂ.ಶಿವಣ್ಣ ಹೇಳಿದರು.

ತಾಲೂಕಿನ ಹೊಂಗಲವಾಡಿ ಗ್ರಾಮದ ಜಮೀನಿನ ಮನೆಯೊಂದರಲ್ಲಿ ವಾಸಮಾಡುವ ಬಡ ಕುಟುಂಬಕ್ಕೆ ಪುಡ್ ಕಿಟ್,ಚಾಪೆ, ಬೆಡ್ ಶೀಟು, ಸ್ವೆಟರ್ ವಿತರಿಸಿ ಮಾತನಾಡಿ, ಹೊಂಗಲವಾಡಿ ಗ್ರಾಮದ ಜಮೀನಿನ ಮನೆಯೊಂದರಲ್ಲಿ ವಾಸಮಾಡುವ ಬಡಕುಟುಂಬದೊಂದು ಚಾಪೆ, ಹೊದಿಕೆ ಇಲ್ಲದೆ ಮೈ ಕೊರೆಯುವ ಚಳಿಯಲ್ಲಿದ್ದ ಮನಗಂಡು ನಮ್ಮ ಟ್ರಸ್ಟ್ ವತಿಯಿಂದ ಅವರಿಗೆ ಒಂದು ತಿಂಗಳಿಗೆ ಆಗುವ ಅಕ್ಕಿ, ಆಹಾರ ಪದಾರ್ಥ ಗಳು,ಬೆಚ್ಚನೆಯ ಹೊದಿಕೆ, ಚಾಪೆ, ಸ್ವೆಟರ್ ವಿತರಿಸಲಾಗಿದೆ ಎಂದರು. ಈ ಸಂದರ್ಭದಲ್ಲಿ ಆಟೋ ಉಮೇಶ್, ಮಂಜೇಶ್, ಸಿದ್ದಪ್ಪ ಇತರರು ಹಾಜರಿದ್ದರು.

# ಶಾಮನೂರು ಶಿವಶಂಕರಪ್ಪಗೆ ಶ್ರದ್ಧಾಂಜಲಿ



ಚಾಮರಾಜನಗರ, ರ ಮಾಜಿ ಸಚಿವ ಹಾಗೂ ಹಾಲಿ ಶಾಸಕರಾದ ಶಾಮನೂರುಶಿವಶಂಕರಪ್ಪ ಅವರ ಗೌರವಾರ್ಥ ನಗರದ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್ ಮಾತನಾಡಿ ರಾಜ್ಯದ ಧೀಮಂತ ರಾಜಕಾರಣಿ ಶಾಮನೂರು ಶಿವಶಂಕರಪ್ಪ ಅವರು ಕಾಂಗ್ರೆಸ್ ಪಕ್ಷದಲ್ಲಿ ನಿಷ್ಠಾವಂತ ಕಾರ್ಯಕರ್ತರಾಗಿ ಪ್ರಭಾವಿ ನಾಯಕರಾಗಿ ಕೆಪಿಸಿಸಿ ಖಜಾಂಚಿಯಾಗಿ ಸೇವೆಸಲ್ಲಿಸಿದ್ದರು. ಸತತ 6ಬಾರಿ ಶಾಸಕರಾಗಿ ಸಚಿವರು, ಸಂಸದರಾಗಿ ರಾಜಕಾರಣದಲ್ಲಿ ತಮ್ಮದೇ ಆದ ಛಾಪುಮೂಡಿಸಿದ್ದರು. ವಿದ್ಯಾಸಂಸ್ಥೆ ಸ್ಥಾಪಿಸುವ ಮೂಲಕ ಶಿಕ್ಷಣಕ್ಷೇತ್ರಕ್ಕೂ ಅಪಾರ ಕೊಡುಗೆ ನೀಡಿದ್ದಾರೆ. ಅವರ ತತ್ವಾದರ್ಶಗಳನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳಬೇಕು, ಭಗವಂತನು ಅವರ ಕುಟುಂಬದವರಿಗೆ ದು:ಖ ಭರಿಸುವ ಶಕ್ತಿ ನೀಡಬೇಕು ಎಂದರು. ಇದೇವೇಳೆ ಮೃತರ ಗೌರವಾರ್ಥ ಒಂದು ನಿಮಿಷ ಮೌನಾಚರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ಮಾದಾಪುರ ಗ್ರಾಪಂ ಅಧ್ಯಕ್ಷ ರೂಪೇಶ್, ಮುಖಂಡರಾದ ಮಹೇಶ್ ಕುದರ್, ನಗರಸಭೆ ನಾಮನಿರ್ದೇಶಕ ಸದಸ್ಯ ಸ್ವಾಮಿ, ತಾಪಂ ಕೆಡಿಪಿ ಸದಸ್ಯ ಶ್ರೀನಿವಾಸ, ಕಚೇರಿ ಕಾರ್ಯದರ್ಶಿ ನಸ್ರುಲ್ಲ, ವಕೀಲ ಪೃಥ್ವಿ, ಸಿ,ಕೆ.ರವಿಕುಮಾರ್, ಟೌನ್ ಬ್ಲಾಕ್ ಉಪಾಧ್ಯಕ್ಷ ಫರ್ಮಾನ್, ಕಿಸಾನ್ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಶಂಕರ್, ಅಪ್ಸರ್ ಪಾಷಾ, ನಗರಸಭೆ ಮಾಜಿಸದಸ್ಯ ಪುಟ್ಟಸ್ವಾಮಿ, ನಾಗೇಂದ್ರ, ಮುಖಂಡರು, ಕಾರ್ಯಕರ್ತರು ಇದ್ದರು.

# ಇತಿಹಾಸದ ಮೂಲಕ ನಮ್ಮ ಅಸ್ಮಿತೆ ಅರಿಯಿರಿ: ಎಂ.ಪಿ.ನಾಗಮ್ಮ

## ಇತಿಹಾಸೋತ್ಸವ–ಕರ್ನಾಟಕ ಚರಿತ್ರೆ ವೈಭವದ ಜಾತ್ರೆ ಕಾರ್ಯಕ್ರಮ

ಮೈಸೂರು: ಇತಿಹಾಸವನ್ನು ಓದುವುದರ ಮೂಲಕ ನಮ್ಮ ಅಸ್ಮಿತೆಯ ಮೂಲವನ್ನು ತಿಳಿದುಕೊಳ್ಳುವ ದಿಸೆಯಲ್ಲಿ ಇಂದಿನ ಯುವ ಸಮೂಹ ಸಾಗಲಿ ಎಂದು ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ) ಮೈಸೂರು ಉಪನಿರ್ದೇಶಕಿ ಎಂ.ಪಿ.ನಾಗಮ್ಮ ತಿಳಿಸಿದರು.

ನಗರದ ಹೆಬ್ಬಾಳ ಮಂಚೇಗೌಡನಕೊಪ್ಪಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ) ಮೈಸೂರು ಹಾಗೂ ಜಿಲ್ಲಾ ಇತಿಹಾಸ ವೇದಿಕೆವತಿಯಿಂದ 'ಇತಿಹಾಸೋತ್ಸವ–ಕರ್ನಾಟಕ ಚರಿತ್ರೆ ವೈಭವದ ಜಾತ್ರೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ವಿಜ್ಞಾನದ ವಿಭಾಗದ ವಿದ್ಯಾರ್ಥಿಗಳು ಸಹ ನಮ್ಮ ಪರಂಪರೆ, ಸಂಸ್ಕೃತಿ, ನಾಗರೀಕತೆ, ಆಡಳಿತ, ವ್ಯವಸ್ಥೆ, ಜೀವನಕ್ರಮ, ಸಂಪ್ರದಾಯಗಳ ವಿಚಾರ ವನ್ನು ತಿಳಿದುಕೊಳ್ಳಲೇಬೇಕು. ಒಂದರ ಹೊಸ ಆವಿಷ್ಕಾರ ಮತ್ತೊಂದರ ಅದಪಥನಕ್ಕೆ ಕಾರಣವಾಗಿ, ಅದು ಇತಿಹಾಸವನ್ನು ಸೇರುತ್ತದೆ. ಅಂತಹವುಗಳನ್ನು ಸಂರಕ್ಷಿಸಿ ಭವಿಷ್ಯಕ್ಕೆ ಪರಿಚಯಿಸಬೇಕು. ಸ್ವಾತಂತ್ರ? ಯದ ನಂತರದಿಂದಲೇ ನಮ್ಮ ಕಣ್ಣ ಮುಂದೆಯೇ ಹಲವಾರು ವಸ್ತುಗಳು ಕಣ್ಮರೆಯಾಗಿವೆ. ಇವತ್ತಿಗೆ ಮಕ್ಕಳಿಗೆ ಹಲವಾರು ಪೈಸೆಯಂತಹ ನಾಣ್ಯಗಳು ಇತಿಹಾಸದ ವಸ್ತುಗಳಾಗಿವೆ. ಹೊಸ ತಂತ್ರಜ್ಞಾನ ಗಳಿಂದ ಯುಪಿಐ ಬ್ಯಾಂಕಿಂಗ್ ವ್ಯವಸ್ಥೆಗಳಿಂದಾಗಿ ಮುಂದೆ ಎಟಿಎಂ ಮಷೀನ್‌ಗಳು ಇಲ್ಲದಂತಾಗುತ್ತವೆ ಎಂದು ಹೇಳಿದರು.

ಇತಿಹಾಸ ತಜ್ಞ ತಲಕಾಡು ಚಿಕ್ಕರಂಗೇಗೌಡ, ಜಿಲ್ಲಾ ಇತಿಹಾಸ ವೇದಿಕೆ ಮೈಸೂರು ಗೌರವಾಧ್ಯಕ್ಷ ಎಂ.ಸಿ.ಚಂದ್ರಶೇಖರ್, ಅಧ್ಯಕ್ಷ ಎಚ್.ಬಿ.ವಾಸು, ಪ್ರಧಾನ ಕಾರ್ಯದರ್ಶಿ ಮಹದೇವಯ್ಯ, ಕಾರ್ಯಾಧ್ಯಕ್ಷ ಎ.ಎಲ್.ಉಮೇಶ್, ಮಂಚೇಗೌಡನ ಕೊಪ್ಪಲಿನ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ವಿ.ಸಿ.ಶಿವಮಲ್ಲು, ಜಿ.ವಿ.ಗೌಡ ಪದವಿ ಪೂರ್ವ ಕಾಲೇಜು ಬನ್ನೂರು ಪ್ರಾಂಶುಪಾಲ ಎಂ.ಭಾಸ್ಕರೇಗೌಡ, ವಾಣಿವಿಲಾಸ ಅರಸು ಬಾಲಿಕಾ ಪದವಿಪೂರ್ವ ಕಾಲೇಜು ಮೈಸೂರು ಜೆ.ಸಿ.ಅನಿತ, ಬೋಃಸತ್ವ ಪದವಿಪೂರ್ವ ಕಾಲೇಜು ಮೈಸೂರು ಪ್ರಾಂಶುಪಾಲ ಎಸ್.ನಂಜುಂಡಸ್ವಾಮಿ, ಹಿರಿಯ ಪ್ರಾಧ್ಯಾಪಕ ರೇವಣ್ಣ ಮತ್ತಿತರರು ಭಾಗವಹಿಸಿದ್ದರು.



### ಹಳೆಯದಾದಷ್ಟು ಅವು ಅಮೂಲ್ಯವಾಗುತ್ತವೆ

ಕರೋನ ಸಂದರ್ಭದಲ್ಲಿ ಲಾಕ್‌ಡೌನ್‌ನಿಂದಾಗಿ ಯಾವುದೇ ಸಂಚಾರವಿಲ್ಲದೇ, ಹಿಂದಿನ ಕಾಲಕ್ಕೆ ಹೋದಂತೆ ಭಾಸವಾಗುತಿತ್ತು. ಅವತ್ತಿನ ಕಾಲದ ಅಂಚೆ ಪತ್ರಗಳ ಸಂದೇಶಗಳು ಕಣ್ಮರೆಯಾಗಿವೆ. ಯಾವುದೇ, ಹೊಸ ಆವಿಷ್ಕಾರ, ಸಮಾಜದಲ್ಲಿ ಬದಲಾವಣೆಗಳಾದರೂ, ಬದುಕಿನಲ್ಲಿ ಎಲ್ಲವೂ ಹಳೆಯದಾದಷ್ಟು ಅವು ಅಮೂಲ್ಯವಾಗುತ್ತವೆ ಎಂದು ತಿಳಿಸಿದರು. ಭಾರತದ ಸ್ವಾತಂತ್ರ?ಯದ ನಂತದ ನಾಣ್ಯ ಮತ್ತು ಚಲಾವಣೆಯಿಂದ ಕಣ್ಮರೆಯಾದ ನಾಣ್ಯ, ನೋಟುಗಳು, ಸ್ವಾತಂತ್ರ?ಯ ಪೂರ್ವದ ನಾಣ್ಯ, ನೋಟುಗಳು, ಲೋಹದ ನಾಣ್ಯಗಳು, ವಿದೇಶಿ ನಾಣ್ಯ, ನೋಟುಗಳು, ಬೆಂಕಿಪಟ್ಟಣದ ಸಾವಿರಾರೂ ರೀತಿಯ ಟಿಕ್ಕಿಗಳು, ಇತಿಹಾಸ ಸಾರುವ ವಾಸ್ತುಶಿಲ್ಪಕಲೆಗಳು, ಸ್ಮಾರಕ, ಶಾಸನಗಳ ಚಿತ್ರಗಳನ್ನು ಪ್ರದರ್ಶನಕ್ಕಿಟ್ಟು ವಿದ್ಯಾರ್ಥಿಗಳು ಮಾಹಿತಿ ತಿಳಿಸಿದರು.

# ಡಿ.17ಕ್ಕೆ ನಿವೃತ್ತ ನೌಕರರ ಸಂಘದ ಮುಷ್ಕರ

ಮೈಸೂರು: ರಾಮಕೃಷ್ಣ ನಗರದಲ್ಲಿನ ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ವತಿಯಿಂದ ಪಿಂಚಣಿದಾರರ ದಿನಾಚರಣೆ ಅಂಗವಾಗಿ ಡಿ.17ರಂದು ಮಧ್ಯಾಹ್ನ 3.30ಕ್ಕೆ ರಾಮಕೃಷ್ಣ ನಗರದ ಪೊಲೀಸ್ ಠಾಣೆ ಮುಖ್ಯ ರಸ್ತೆಯಲ್ಲಿ ಸದಸ್ಯರು ಮಾನವ ಸರಪಳಿ ರಚಿಸಿ, ತಮ್ಮ ಬೇಡಿಕೆ ಈಡೇರಿಸುವಂತೆ ಸರ್ಕಾರವನ್ನು ಒತ್ತಾಯಿಸಲಿದ್ದಾರೆಂದು ಅಧ್ಯಕ್ಷ ಉಮಾಕಾಂತ್ ತಿಳಿಸಿದರು.

ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಮಾನವ ಸರಪಳಿ ರಚನೆ ಸುಮಾರು 15 ನಿಮಿಷ ಇರಲಿದೆ. ಪಾಲ್ಗೊಳ್ಳಲಿಚ್ಛಿಸುವವರು ಬಿಳಿ ಶರ್ಟ್ ಹಾಗೂ ಯಾವುದಾದರೂ ಬಣ್ಣದ ಪ್ಯಾಂಟ್ ಧರಿಸಿರಬೇಕು. ಮಹಿಳೆಯರು ಸಹಾ ಸಾಧ್ಯವಾದಷ್ಟು ಹಳದಿ ಮತ್ತು ಕೆಂಪು ಮಿಶ್ರಿತ ಸೀರೆ ಧರಿಸಿ ಬರಬೇಕೆಂದು ಮನವಿ ಮಾಡಿದರು. ರಾಜ್ಯ ಸರ್ಕಾರ 7ನೇ ವೇತನ ಆಯೋಗದ ಶಿಫಾರಸನ್ನು 15 ತಿಂಗಳಾದರೂ ಜಾರಿಗೆ ತಂದಿಲ್ಲ. ಸಿಎಂಗೂ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಇದೇ ರೀತಿಯ ಸಮಸ್ಯೆಗಳನ್ನು ಆ ವೇಳೆ ಸರ್ಕಾರದ ಗಮನಕ್ಕೆ ತರಲಾಗುವುದೆಂದರು. ಗೋಷ್ಠಿಯಲ್ಲಿ ಖಜಾಂಚಿ ಚಂದ್ರಶೇಖರ್, ಚಿಕ್ಕಲಿಂಗಸ್ವಾಮಿ, ಇನ್ನಿತರರು ಇದ್ದರು.

# ನಾಳೆ ಬಹಿರಂಗ ಹರಾಜು

ಮಡಿಕೇರಿ:–ಸೋಮವಾರಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಿಸಿ ವಶಪಡಿಸಿಕೊಂಡ ಪಿಡಿಎಸ್ ಅಕ್ಕಿ 4200 ಕೆ.ಜಿ., 94 ಚೀಲ (ಪ್ರತಿ ಕ್ವಿಂಟಾಲ್ ಅಂದಾಜು ಬೆಲೆ 2250) ಯನ್ನು ಜಿಲ್ಲಾಧಿಕಾರಿಯವರ ನ್ಯಾಯಾಲಯದಲ್ಲಿ ಅಗತ್ಯ ವಸ್ತುಗಳ ಕಾಯ್ದೆಯಡಿ ವಶಪಡಿಸಿಕೊಂಡ ಅಕ್ಕಿಯನ್ನು ಹೆಚ್ಚು ದಿನ ಇಟ್ಟಲ್ಲಿ ಹಾಳಾಗುವ ಸಂಭವವಿರುವುದರಿಂದ ಬಹಿರಂಗ ಹರಾಜು ಮಾಡುವಂತೆ ದಿನಾಂಕ 04/11/2025 ರಂದು ಆದೇಶಿಸಿದ್ದಾರೆ. ಈ ಹಿನ್ನೆಲೆ ಪ್ರಕರಣದಲ್ಲಿ ವಶಪಡಿಸಿಕೊಂಡ ಅಕ್ಕಿಯನ್ನು ಡಿಸೆಂಬರ್, 17 ರಂದು ಮಧ್ಯಾಹ್ನ 12 ಗಂಟೆಗೆ ಸೋಮವಾರಪೇಟೆ ತಹಶೀಲ್ದಾರರ ಸಮಕ್ಷಮದಲ್ಲಿ ಎಪಿಸಿಎಂಎಸ್ ಇವರ ಗೋದಾಮಿನ ಆವರಣದಲ್ಲಿ ಬಹಿರಂಗ ಹರಾಜು ಮಾಡಲಾಗುವುದು ತಹಶೀಲ್ದಾರ್ ಕೃಷ್ಣಮೂರ್ತಿ ಅವರು ತಿಳಿಸಿದ್ದಾರೆ.

# ಟ್ರ್ಯಾಕ್ ಸೂಟ್ ವಿತರಣೆ



ಗುಂಡ್ಲುಪೇಟೆ: ತಾಲೂಕಿನ ಹುಂಡೀಪುರ ಗ್ರಾಮದ ಜಿಎಚ್ ಪಿ ಎಸ್ ಶಾಲಾ ಮಕ್ಕಳಿಗೆ ಬೆಂಗಳೂರಿನ ಆಕ್ವನ್ ಫೈನಾನ್ಸಿಯಲ್ ಸೊಲ್ಯೂಷನ್ ಪ್ರೈವೇಟ್ ಲಿಮಿಟೆಡ್ ಸಿಎಸ್ ಅರ್ ಕಮಿಟಿ ವತಿಯಿಂದ ಉಚಿತವಾಗಿ ಉತ್ತಮ ಗುಣಮಟ್ಟದ ಟ್ರ್ಯಾಕ್ ಸೂಟ್ ಗಳನ್ನು ವಿತರಣೆ ಮಾಡಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಆಸ್ಟ್ರೇನ್ ಥಾಮಸ್, ರೇಷ್ಮಾ, ಫಾಯಾಲ್ ಮೋಹನ್. ಅಪ್ಪಣ್ಣ ವಿಜಯ್, ಜಂಗಲ್ ಲಾಡ್ಜ್ ಕೃಷ್ಣ, ಗ್ರಾಪಂ ಪಿಡಿಓ ಕಿರಣ್, ಸೆಕ್ರೆಟ್ರಿ ರವಿ, ಬಿಲ್ ಕಲೆಕ್ಟರ್ ಬೋಗಯ್ಯ, ಶಾಲಾ ಮುಖ್ಯ ಶಿಕ್ಷಕಿ ಸುಮಾ ಭಜರಂಗಿ, ಅತಿಥಿ ಶಿಕ್ಷಕ ಮಹದೇವಸ್ವಾಮಿ, ಎಸ್ ಡಿಎಂಸಿ ಅಧ್ಯಕ್ಷರು ಸ್ವಾಮಿ, ಸದಸ್ಯರುಗಳಾದ ಕಾಳಮ್ಮ, ಸುವರ್ಣ, ಸೌಮ್ಯ, ತೇಜು, ಮೈನಾ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಮೈಸೂರಿನಲ್ಲಿಯೂ ನೆರವಿಗಿದೆ ನಿರ್ದೇಶಕರ ಸಂಘ

ಮೈಸೂರು: ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘ ಹಲವಾರು ವರ್ಷಗಳಿಂದ ಅಸ್ತಿತ್ವದಲ್ಲಿದ್ದು, ಮೈಸೂರು ಭಾಗದ ನಿರ್ದೇಶಕರು ಸಹಾ ಸದಸ್ಯರಾಗುವ ಮೂಲಕ ವಿವಿಧ ಸಮಸ್ಯೆ ವೇಳೆ ಸಂಘದ ಬೆಂಬಲ ಹಾಗೂ ಕೆಲವೊಂದು ಸೌಲಭ್ಯ ಪಡೆಯಬಹುದಾಗಿದೆ ಎಂದು ಹಿರಿಯ ಚಲನಚಿತ್ರ ನಿರ್ದೇಶಕ, ಸಂಘದ ಉಪಾಧ್ಯಕ್ಷ ಜೋ ಸೈಮನ್ ತಿಳಿಸಿದರು.



ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸದಸ್ಯತ್ವ ಪಡೆಯಲು ಯಾವುದಾದರೊಂದು ಸಿನಿಮಾ ನಿರ್ದೇಶನ ಮಾಡಿರಬೇಕು, ಸೆನ್ಸಾರ್ ಮಂಡಳಿಯಿಂದ ಸೆನ್ಸಾರ್ ಆಗಿರುವ ಪ್ರಮಾಣ ಪತ್ರ ಸಲ್ಲಿಸಬೇಕು. ಕಲ್ಯಾಣ ನಿಧಿ ಸೇರಿ ಸುಮಾರು 25 ಸಾವಿರ ರೂ. ಶುಲ್ಕ ಪಾವತಿಸಬೇಕು. ಒಂದು ವೇಳೆ ಸದಸ್ಯರಿಗೆ ಅನಾರೋಗ್ಯವೇನಾದರೂ ಉಂಟಾದರೆ ಸಂಘ ನೀಡುವ ಶಿಫಾರಸು ಪತ್ರ ಆಧರಿಸಿ ಕರ್ನಾಟಕ ಚಲನಚಿತ್ರ ಅಕಾಡೆಮಿ ಅವರಿಗೆ 75 ಸಾವಿರ ರೂ., ನೆರವು ನೀಡಲಿದೆ ಎಂದರು. ಕಾರ್ಯದರ್ಶಿ ರೇಣುಕುಮಾರ್ ಟಾಪ್ ಸ್ಟಾರ್ ಮಾತನಾಡಿ, ಪ್ರತಿಯೊಂದು ವಲಯ ದಲ್ಲೂ ಸದಸ್ಯರನ್ನಾಗಿಸಿಕೊಳ್ಳಲು ಸಂಘದ ಸಮಿತಿ ಪ್ರವಾಸ ಕೈಗೊಂಡಿದೆ. ಇದೇ ರೀತಿ ಈಗ ಮೈಸೂರಿನ ಉಸ್ತುವಾರಿ ಪುಟ್ಟಸ್ವಾಮಿ ಅವರಿಗೆ ವಹಿಸಲಾಗಿದೆ. ದಿವಂಗತ ಪುಟ್ಟಣ್ಣ ಕಣಗಾಲ್, ಸಿದ್ದಲಿಂಗಯ್ಯ ಮೊದಲಾದ ಹಿರಿಯರು ಸೇರಿ 1984ರಲ್ಲಿ ಸಂಘ ಸ್ಥಾಪಿಸಿದರು. ಇಲ್ಲಿಗೆ ಆಗಮಿಸಿರುವ ತಾವೆಲ್ಲ ಪುಟ್ಟಣ್ಣ ಅವರ ಕಣಗಾಲ್ ಗ್ರಾಮಕ್ಕೆ ಭೇಟಿ ನೀಡಿ ಅವರ ಮನೆ ಪುನರುಜ್ಜೀವನ ಸಾಧ್ಯತೆ ಪರಿಶೀಲಿಸಲಿದ್ದೇವೆಂದರು. ಗೋಷ್ಠಿಯಲ್ಲಿ ಅಧ್ಯಕ್ಷ ಎನ್ನಾರ್ ಕೆ.ವಿಶ್ವನಾಥ್, ಮಳವಳ್ಳಿ ಕೃಷ್ಣ, ಪುಟ್ಟಸ್ವಾಮಿ, ಆದಿತ್ಯ ಚಿಕ್ಕಣ್ಣ ಹಾಗೂ ಇನ್ನಿತರರು ಇದ್ದರು.

# ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯ



ಚಾಮರಾಜನಗರ, ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಚಾಮರಾಜನಗರ ಜಿಲ್ಲಾ ಮತ್ತು ತಾಲ್ಲೂಕು ಪತ್ರ ಬರಹಗಾರರ ಒಕ್ಕೂಟದ ವತಿಯಿಂದ ನಗರದ ಉಪನೋಂದಣಿ ಮತ್ತು ವಿವಾಹ ನೋಂದಣಾಧಿಕಾರಿಗಳ ಕಚೇರಿಯ ಮುಂಭಾಗದಲ್ಲಿ ಧರಣಿ ನಡೆಸಿದರು.

ಈ ಸಂದರ್ಭದಲ್ಲಿ ಚಾಮರಾಜನಗರ ತಾಲೂಕು ಪರವಾನಗಿ ಹೊಂದಿದ ಜಿಲ್ಲಾ ಪತ್ರ ಬರಹಗಾರ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ ಮಹಾದೇವಸ್ವಾಮಿ ಮಾತನಾಡಿ, ಹೊರರಾಜ್ಯದಲ್ಲಿರುವಂತೆ ನಮ್ಮ ರಾಜ್ಯದಲ್ಲಿ ಪತ್ರ ಬರಹಗಾರರಿಗೆ ಪ್ರತ್ಯೇಕ ಲಾಗಿನ್ ನೀಡುವುದು. ಕಾವೇರಿ 2.0 ತಂತ್ರಾಂಶದಲ್ಲಿ ಆಗುತ್ತಿರುವ ತೊಂದರೆಗಳನ್ನು ಆದಷ್ಟು ಬೇಗನೆ ಸರಿಪಡಿಸಬೇಕು.ಅನಧಿಕೃತ ವ್ಯಕ್ತಿಗಳನ್ನು ತಡೆಗಟ್ಟುವುದು ಮತ್ತು ಕರ್ನಾಟಕ ಎಲ್ಲಾ ಪತ್ರ ಬರಹಗಾರರಿಗೆ ಏಕ ಮಾದರಿಯ ಗುರುತಿನ ಚೀಟಿಯನ್ನು ನೀಡುವುದು ದಸ್ತು ಬರಹಗಾರರಿಗೆ ಸೇವಾ ಭದ್ರತೆ ಒದಗಿಸುವುದು ಎಂದು ಒತ್ತಾಯಿಸಿದರು. ಧರಣಿಯಲ್ಲಿ ಸಂಘದ ಅಧ್ಯಕ್ಷ ಜಿ.ನಂದೀಶ್ವರಸ್ವಾಮಿ, ಉಪಾಧ್ಯಕ್ಷ ಎಸ್.ಕಾಂತರಾಜು, ಗುರುಸ್ವಾಮಿ, ಶೇಷಣ್ಣಸ್ವಾಮಿ, ಶಂಕರ, ರವಿ, ಸೈಯದ್, ಹೊಮ್ಮ ರಾಮನಾಯಕ, ಎಸ್.ಕೆ.ಮಹದೇವಯ್ಯ, ಸಿದ್ದರಾಜು, ನಾಗೇಂದ್ರ, ಜೆ.ಬಿ.ಸಿದ್ದರಾಜಶೆಟ್ಟಿ, ಶಾಂತಮೂರ್ತಿ, ಮಲ್ಲಶೆಟ್ಟಿ, ಬಸವೇಶ, ಬಿ. ಎಸ್.ಪುಟ್ಟರಾಜ, ನಂದಕುಮಾರ್, ಸ್ವಾಮಿ, ಸತೀಶ್, ಸೂರ್ಯ ಬಾಲರಾಜು ಇತರರು ಭಾಗವಹಿಸಿದ್ದರು.

## ಪ್ರೊ.ಎನ್.ಕೆ.ಲೋಕನಾಥ್ ಹೇಳಿಕೆ

# ಶೀಘ್ರ ಪ್ರಸಾರಾಂಗ ವೆಬ್ ಸೈಟ್ ಚಾಲನೆ

ಮೈಸೂರು: ಪ್ರಸಾರಾಂಗದ ಪುಸ್ತಕಗಳು ಜಾಗತಿಕಮಟ್ಟದಲ್ಲಿ ಮಾರಾಟವಾಗುವ ನಿಟ್ಟಿನಲ್ಲಿ ಶೀಘ್ರ ಪ್ರಸಾರಾಂಗ ವೆಬ್‌ಸೈಟ್ ಆರಂಭಿಸಲಾಗುವುದು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ತಿಳಿಸಿದರು.

ಮೈಸೂರು ವಿವಿ ಪ್ರಸಾರಾಂಗದ ಪ್ರಸಾರಾಂಗ ಪುಸ್ತ ಕೋತ್ಸವ 2025 ಹಾಗೂ ಪ್ರಸಾರಾಂಗದಲ್ಲಿರುವ ಪ್ರಮುಖ ಕೃತಿಗಳ ಪರಾಮರ್ಶೆ ಮತ್ತು ಸನ್ಮಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಪ್ರಸಾರಾಂಗ ಮುದ್ರಣ ಮಾಡಿರುವ ಸಾವಿರಾರು ಶೀರ್ಷಿಕೆಯ ಅಮೂಲ್ಯ ಗ್ರಂಥಗಳು ಜಗತ್ತಿನ ಎಲ್ಲ ಓದುಗರಿಗೆ ಲಭ್ಯವಾಗಿಸಲು ಆನ್‌ಲೈನ್ ಮುಖೇನ ಪುಸ್ತಕ ಮಾರಾಟ ಮಾಡಲಾಗುವುದು. ದೂರದ ಪ್ರದೇ ಶಗಳಿಂದ ಬರಲಾಗದವರಿಗೆ ಆನ್‌ಲೈನ್ ಖರೀದಿಗೆ ಅವಕಾಶ ಕಲ್ಪಿಸಲಾಗುವುದು. ಕವಿ ಕುವೆಂಪು ಪ್ರಸಾರಾಂ ಗದ ಕನಸು ಕಂಡಿದ್ದರು. ಕುವೆಂಪು ನಿವೃತ್ತಿಯಾದ ಬಳಿಕ ಪ್ರಸಾರಾಂಗಕ್ಕೆ ಬರುತ್ತಿದ್ದರು. ಪ್ರಸಾರಾಂಗ ಹೆಮ್ಮರವಾಗಿ ಬೆಳೆದಿತ್ತು. ಡಿಜಿಟಲ್ ಯುಗ ಬಂದ ನಂತರ ಹಿನ್ನಡೆಯಾಗಿದೆ. ಪ್ರಸಾರಾಂಗದ ಭಂಡಾರದಲ್ಲಿ ಬೇಕಾದಷ್ಟು ಪುಸ್ತಕವಿದೆ. ಅದನ್ನು ಸಾರ್ವಜನಿಕರಿಗೆ ತಲುಪಿಸಲು ಪುಸ್ತಕೋತ್ಸವ ಆರಂಭಿಸಿರುವುದು ಉತ್ತಮ ಕಾರ್ಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಕುಲಸಚಿವೆ ಎಂ.ಕೆ.ಸವಿತಾ ಮಾತನಾಡಿ, ಕುವೆಂಪು ಅವರ ಕಾಲದಲ್ಲಿ ಪುಸ್ತಕದ ಕೆಲಸಕ್ಕಾಗಿ ಭವ್ಯವಾದ ಕಟ್ಟಡ ನಿರ್ಮಾಣಗೊಂಡಿರುವುದು ಹೆಮ್ಮೆಯ ವಿಚಾರ. ಇದನ್ನು ಉಳಿಸಲು ಎಲ್ಲರೂ ಜೊತೆಯಾಗಿ ಶ್ರಮಿಸೋಣ ಎಂದು ಹೇಳಿದರು. ಪ್ರಸಾರಾಂಗದ ನಿರ್ದೇಶಕ ಡಾ.ಎಂ.ನಂಜಯ್ಯ ಹೊಂಗನೂರು ಅಧ್ಯಕ್ಷತೆವಹಿಸಿ ಮಾತನಾಡಿ, ಎಪಿಗ್ರಫಿ ಆಫ್ ಕರ್ನಾಟಕ ಸಂಪುಟಗಳ ಬಗ್ಗೆ ಒಂದು ಸಮೀಕ್ಷೆಯನ್ನು ನಡೆಸಬೇಕು. ಶಾಸನ, ಸಂಪುಟಗಳ ಬಗ್ಗೆ ಇತ್ತೀಚಿನ ಯುವ ಪೀಳಿಗೆಗೆ ಸಾಕಷ್ಟು ಮಾಹಿತಿ ಇಲ್ಲ. ಅದನ್ನು ತಿಳಿಸುವ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಿದ್ದೇವೆಂದರು.

### ನಿವೃತ್ತರಿಗೆ ಸನ್ಮಾನ

ಪ್ರಸಾರಂಗದಲ್ಲಿ ಕಾರ್ಯ ನಿರ್ವಹಿಸಿ ನಿವೃತ್ತರಾದ ದಾಸೇಗೌಡ, ಲಿಂಗಣ್ಣ, ಕೆ.ಎಸ್.ರಾಮಶೇಷನ್, ಟಿ.ಕಮಲಮ್ಮ, ಜಿ.ಶ್ರೀದೇವಿ, ಡಿ.ಟಿ.ಈರೇಗೌಡ ಹಾಗೂ ಕುಮಾರ್ ಅವರನ್ನು ಸನ್ಮಾನಿಸಲಾಯಿತು. ಪ್ರಸಾರಂಗದ ವಿಶ್ರಾಂತ ನಿರ್ದೇಶಕ ಕೆ.ಟಿ.ವೀರಪ್ಪ, ಪ್ರೊ.ಎಸ್.ಲಕ್ಷ್ಮಿ ನಾರಾಯಣ ಅರೋರ, ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಇದ್ದರು.

# ಅನುಭವ ಆಶಯಗಳ ಅಕ್ಷರ ಕ್ರಾಂತಿಯೇ ಕವಿತೆ: ಸಾಹಿತಿ ಕೊತ್ತತ್ತಿರಾಜು

**ಮಂಡ್ಯ:** ಮನುಷ್ಯನ ಅನುಭವಗಳು ಹಾಗೂ ಆಶಯಗಳನ್ನು ವ್ಯಕ್ತಪಡಿಸುವ ಬುತ್ತಿಭಾವಗಳ ಸಂಗಮದ ಅಕ್ಷರ ಕ್ರಾಂತಿಯೇ ಕವಿತೆ ಎಂದು ಸಾಹಿತಿ ಕೊತ್ತತ್ತಿರಾಜು ಅಭಿಪ್ರಾಯಿಸಿದರು.

ನಗರದ ಪರಮಪೂಜ್ಯ ಡಾ.ಶ್ರೀ ಶಿವಕುಮಾರಮಹಾಸ್ವಾಮೀಜಿ ಉದ್ಯಾನವನದ ಧ್ಯಾನಕೆಂದ್ರದಲ್ಲಿ ಕಸ್ತೂರಿ ಸಿರಿಗನ್ನಡವೇದಿಕೆ ಹಾಗೂ ಕಾಯಕಯೋಗಿ ಫೌಂಡೇಶನ್ ವತಿಯಿಂದ ನಡೆದ ಕವಿಕಾವ್ಯ ಸಮ್ಮಿಲನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪೂಜ್ಯ ಸಿದ್ದಗಂಗಾಶ್ರೀಗಳ ತ್ರಿವಿಧ ದಾಸೋಹದ ಕಾಯಕ ನಿತ್ಯಸ್ಮರಣೀಯವಾದದ್ದು. ಮಹಾಸಂತರು, ನಡೆದಾಡಿದ ದೇವರು ಪೂಜ್ಯಶ್ರೀಗಳನ್ನು ಯಾವ ಕಾವ್ಯದಲ್ಲೂ ವರ್ಣಿಸಲು ಪದಗಳಿಲ್ಲ ಎಂದು ಭಾವುಕರಾಗಿ ನುಡಿದರು.

ಗದ್ಯ ಭಾಷೆಯ ನಡಿಗೆ, ಪದ್ಯ ಭಾಷೆಯ ನರ್ತನ ಇವೆರಡರಲ್ಲೂ ಸಮಾಜವನ್ನು ತಿದ್ದುವ ಶಕ್ತಿಯಾಗಿದೆ. ಉತ್ತಮ ಕವಿ ಕಾಲ ಮತ್ತು ದೇಶಕ್ಕೆ ಸವಾಲಾಗಿ ಹಾಡದಿದ್ದರೆ ಆತ ಸಾಹಿತಿಯಲ್ಲ ಗುಮಾಸ್ತ ಎಂದು ಪಿ.ಲಂಕೇಶ್ ಅವರು ಹೇಳಿದ್ದಾರೆ. ನಾವು ಯಾವಾಗಲೂ ಲೆಕ್ಕಬರೆಯುವ ಗುಮಾಸ್ತರಾಗಬಾರದು ಸಮಾಜವನ್ನು ಕಟ್ಟುವ ಸಾಹಿತಿಗಳಾಗಬೇಕೆಂದರು.



**ಸಿದ್ದಗಂಗಾ ಶ್ರೀಗಳ ಧ್ಯಾನಕೇಂದ್ರ್ರದಲ್ಲಿ ಕವಿಕಾವ್ಯ ಸಮ್ಮಿಲನ**

ಸಾಹಿತ್ಯವು ನಮ್ಮೊಳಗಿನ ನಮ್ಮ ಹುಡುಕಾಟವು ಹೌದು, ವರ್ತಮಾನದ ಜೊತೆಗಿನ ಸಂವಾದವು ಹೌದು. ಆದ್ದರಿಂದ ಕವಿಗಳು ತಮ್ಮ ಕವಿತೆಗಳ ಮೂಲಕ ಸಮಾಜವನ್ನು ತಿದ್ದುವ ಸಾಮಾಜಿಕ ಜವಾಬ್ದಾರಿಯನ್ನು ಹೊಂದಿರಬೇಕು ಎಂದರು. ಉದಯೋನ್ಮುಖ ಬರಹಗಾರರು ಜನಪದ ಸಾಹಿತ್ಯ, ವಚನ ಸಾಹಿತ್ಯ, ದಾಸ ಸಾಹಿತ್ಯವನ್ನು ಅಧ್ಯಯನ ಮಾಡುವ ಜೊತೆಗೆ ಆದಿಕವಿ ಪಂಪನಿಂದ ಪ್ರಸ್ತುತ ತಲೆಮಾರಿನವರ ಕೃತಿಗಳನ್ನು ಓದುವ ಮೂಲಕ ಬರಹದಲ್ಲಿ ತಮ್ಮದೇ ಹೊಸ ರೂಪವನ್ನು, ಹೊಸ ದಿಕ್ಕನ್ನು ಕಂಡುಕೊಳ್ಳಬೇಕು ಎಂದು ವಿಶ್ಲೇಷಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕಾಯಕಯೋಗಿ ಫೌಂಡೇಶನ್ ಅಧ್ಯಕ್ಷ ಎಂ.ಶಿವಕುಮಾರ್ ಮಾತನಾಡಿ, ಆದಿಕವಿ ಪಂಪನಿಂದ ಮೊದಲ್ಗೊಂಡು ರಾಷ್ಟ್ರಕವಿ ಕುವೆಂಪು ಅವರ ಬರಹದವರೆಗೆ ಮಾನವೀಯ ಮೌಲ್ಯಗಳೇ ಮೇಲುಗೈ ಸಾಧಿಸಿವೆ. ಕನ್ನಡ ಭಾಷೆ, ನೆಲ, ಜಲ, ನಮ್ಮ ಅಸ್ಮಿತೆಯನ್ನು ಉಳಿಸುವ ನಿಟ್ಟಿನಲ್ಲಿ ಕವಿಗಳು ತಮ್ಮ ಬರಹದ ಮೂಲಕ ಜನಜಾಗೃತಿ ಮೂಡಿಸುವುದು ಇಂದು ಅನಿವರ?ಯವಾಗಿದೆ ಎಂದರು.

ರಾಜಧಾನಿ ಬೆಂಗಳೂರು ಸೇರಿದಂತೆ ಗಡಿನಾಡ ಜಿಲ್ಲೆಗಳಲ್ಲಿ ಇನ್ನೂ ಕನ್ನಡಿಗರ ಮೇಲಿನ ದಬ್ಬಾಳಿಕೆ ನಿಂತಿಲ್ಲ. ಕನ್ನಡ ನಾಡಿನಲ್ಲಿ ಕನ್ನಡಿಗನೇ ಸಾರ್ವಭೌಮ ಎಂಬುದನ್ನು ಮತ್ತಷ್ಟು ಗಟ್ಟಿಗೊಳಿಸುವ ಸಾಹಿತ್ಯ ಹೊರಬರಬೇಕಿದೆ. ಆಡಳಿತರೂಢ ಸರ್ಕಾರ ಎಷ್ಟೇ ಕಾನೂನುಗಳನ್ನು ಜಾರಿಮಾಡಿದರೂ ಕನ್ನಡ ಭಾಷಾ ವಿರೋಧಿಗಳು ಹೆಚ್ಚುತ್ತಲೇ ಇದ್ದಾರೆ. ಜನಸಾಮಾನ್ಯರು ಕನ್ನಡತನವನ್ನು ಬಿಟ್ಟುಕೊಡದೆ ಕನ್ನಡ ಕಟ್ಟುವ ಕೆಲಸದಲ್ಲಿ ಮುಂದಾಗಬೇಕೆಂದರು.

ಕಸ್ತೂರಿ ಸಿರಿಗನ್ನಡ ವೇದಿಕೆಯ ರಾಜ್ಯಾಧ್ಯಕ್ಷರಾದ ಪೋತೇರ ಮಹಾದೇವ ಪ್ರಾಸ್ತಾವಿಕ ಭಾಷಣ ಮಾಡಿ, ಸಾಹಿತ್ಯ ಮತ್ತು ಸಂಸ್ಕೃತಿಯಿಂದ ಸಮಾಜವು ಉತ್ತಮ ದಿಕ್ಕಿನಲ್ಲಿ ಸಾಗುತ್ತದೆ ಎಂದು ತಿಳಿಸಿದರು.

ಕವಿಗಳಾದ ಕಲ್ಕುಣಿ ಲೋಕೇಶ್, ನ್ಯಾಮನಹಳ್ಳಿ ರಾಜೇಗೌಡ ,ಎಸ್. ಶ್ರೀಧರ್ಮೂರ್ತಿ, ಡಿ.ಕೆ. ರಾಮಯ್ಯ ,ಸದ್ದಾಂ ತಗ್ಗಹಳ್ಳಿ, ಎಸ್.ಎಂ. ಗಂಗಾಧರ್ ಮೈಸೂರು, ಪುಟ್ಟರಾಜು ಗೋಣಿಕೊಪ್ಪ , ಪಾಲನೇತ್ರ ರಾಯ ಶೆಟ್ಟಿಪುರ, ಅವಿನಾಶ್ ಕೆ.ಆರ್. ಪೇಟೆ, ಕೀರ್ತಿ ಶ್ರೀದೇವಿ ಮತ್ತು ಮಂಜುಳ ಮಂಡ್ಯ ಸೇರಿದಂತೆ 17 ಕವಿಗಳು ತಮ್ಮ ಕವನವನ್ನು ವಾಚಿಸಿದರು.ಕವಿ ಕಾವ್ಯ ಸಮ್ಮಿಲನದಲ್ಲಿ ಸಾಹಿತಿ ಕೆ.ಪಿ. ವೀರಪ್ಪ, ಚಿಕ್ಕ ತಿಮ್ಮಯ್ಯ, ಎಚ್.ವಿ.ಶಿವರುದ್ರಪ್ಪ, ಜಿ.ಮಹಾಂತಪ್ಪ ಮತ್ತಿತರರು ಉಪಸ್ಥಿತರಿದ್ದರು.

# ಕಾಂಗ್ರೆಸ್ ಮತ ಪತ್ರಗಳನ್ನೇ ಬದಲಾಯಿಸಿ ಗೆಲವು: ಶಾಸಕ ಜಿ.ಡಿ.ಹರೀಶ್ ಗೌಡ



**ಮೈಸೂರು:** ಎಂಸಿಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಿ ಕಾಂಗ್ರೆಸ್ ಮತ ಪತ್ರಗಳನ್ನೇ ಬದಲಾಯಿಸಿ ಗೆಲವು ಸಾಧಿಸಿದೆ ಎಂದು ಶಾಸಕ ಜಿ.ಡಿ.ಹರೀಶ್ ಗೌಡ ಆರೋಪಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಹಕಾರಿ ಸಂಘಗಳ ಚುನಾವಣೆಯಲ್ಲಿ 5 ಮತಗಳನ್ನು ಹೆಚ್ಚುವರಿಯಾಗಿ ಸೇರಿಸಿ ಗೆಲುವು ಸಾಧಿಸಿದ್ದೇವೆಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಹೇಳಿದ್ದರು. ಅದರ ಮುಂದಿನ ಭಾಗ ಇದು. ನ್ಯಾಯಾಲಯ ಫಲಿತಾಂಶ ಪ್ರಕಟಿಸದಂತೆ ಆದೇಶ ನೀಡಿತ್ತು.

ಆದರೂ ನ್ಯಾಯಾಲಯದ ಆದೇಶ ಉಲ್ಲಂಘನೆ ಮಾಡಿ ಫಲಿತಾಂಶ ಘೋಷಣೆ ಮಾಡಿದ್ದಾರೆ. ಬೂತ್‌ನಲ್ಲೇ ಮತಪತ್ರ ಬದಲಾಯಿಸಿದ್ದಾರೆಂದು ಹೇಳುತ್ತಿದ್ದಾರೆ. ಮತ ಚಲಾವಣೆ ಮಾಡಿರುವ ಮತದಾರರು ಈ ಬಗ್ಗೆ ಹೇಳಿದ್ದಾರೆ. ಇವೆಲ್ಲವನ್ನು ನೋಡಿದರೆ ಯಾವುದನ್ನೂ ನಂಬಲು ಆಗುತ್ತಿಲ್ಲ. ಆಡಳಿತ ವ್ಯವಸ್ಥೆಯ ಮೇಲೆ ನಂಬಿಕೆಯೇ ಇಲ್ಲದಂತಾಗಿದೆ ಎಂದು ಕಿಡಿ ಕಾರಿದರು.

ಮತ ಚೋರಿ: ರಾಹುಲ್ ಗಾಂಧಿ ಹೋದಲ್ಲಿ ಬಂದಲ್ಲಿ ಮತ ಚೋರಿಯಾಗಿದೆ ಎಂದು ಹೇಳುತ್ತಿದ್ದಾರೆ. ಆದರೆ, ಮೈಸೂರಿನ ಎಂಸಿಡಿಸಿಸಿ ಚುನಾವಣೆಯಲ್ಲಿ ಮತಪತ್ರ ಬದಲಾಯಿಸಿದ್ದಾರೆ. ನಿಜವಾಗಿಯೂ ಇಲ್ಲಿ ಮತ ಚೋರಿಯಾಗಿದೆ. ಯಾವುದೇ ರ?ಕಾರದ ಅವಧಿಯಲ್ಲೂ ಈ ರೀತಿ ಆಗಿರಲಿಲ್ಲ. ಇಷ್ಟೊಂದು ದ್ವೇಷಾಸೂಯೆಯ ರ?ಕಾರ ನೋಡಿರಲಿಲ್ಲ. ಈ ಬಗ್ಗೆ ನ್ಯಾಯಾಲಯದ ಮೊರೆ ಹೋಗಿ ಕಾನೂನು ಹೋರಾಟ ಮಾಡುತ್ತೇವೆ ಎಂದರು.

# 'ಜ್ಞಾನ, ಕೌಶಲದಿಂದ ಜೀವನ ಮೌಲ್ಯ ಹೆಚ್ಚಿಸಿಕೊಳ್ಳಿ'



**ಮೈಸೂರು:** ವಿದ್ಯಾರ್ಥಿಗಳು ಜ್ಞಾನ, ಕೌಶಲ ಮತ್ತು ಜೀವನ ಮೌಲ್ಯಗಳನ್ನು ಸದಾ ಉನ್ನತಗೊಳಿಸಿಕೊಳ್ಳಬೇಕು ಎಂದು ಲೇಖಕ ರಂಗಸ್ವಾಮಿ ಮೂಕನಹಳ್ಳಿ ಸಲಹೆ ನೀಡಿದರು.

ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಸ್ನಾತಕೋತ್ತರ ಕೇಂದ್ರದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಿ.ಜಿ. ವಿದ್ಯಾರ್ಥಿಗಳ ವೇದಿಕೆ ಉದ್ಘಾಟಿಸಿ ಮಾತನಾಡಿದರು. ಪ್ರಕೃತಿ ತಟಸ್ಥವಾಗಿದೆ. ಮನಸ್ಸಿನ ಸ್ಥಿತಿ ಬದಲಾಯಿಸದೆ ಇರುವವರಿಗೆ ಜೀವನದ ಸ್ಥಿತಿ ಬದಲಾಯಿಸಲು ಸಾಧ್ಯವಿಲ್ಲ. ನಿಮ್ಮ ಕಥೆಯ ಮಾಲೀಕರು ನೀವೇ ಆಗಿದ್ದರೆ, ಅದರ ಅಂತ್ಯ ಬರೆಯುವ ಹಕ್ಕು ಕೂಡ ನಿಮ್ಮದೆಯಾಗಿದೆ.

ಇಂದಿನ ಪರಿಸ್ಥಿತಿ ಹೈರ್ ಅಂಡ್ ಫೈರ್ ಸಂಪ್ರದಾಯದಂತಿದೆ. ನಿನಗಿಂತ ಯಾರೂ ಶ್ರೇಷ್ಠರಲ್ಲ, ಕನಸುಗಳು ನಿದ್ರೆಯಲ್ಲಿ ಕಾಣಿಸುವುದಿಲ್ಲ. ನಿದ್ರೆ ಮಾಡಲು ಬಿಡದಿರುವುದೇ ಕನಸುಗಳು. ನಿಮ್ಮ ದೃಷ್ಟಿ ಸ್ಪಷ್ಟವಾಗಿದ್ದರೆ, ನಿಮ್ಮ ಮಾರ್ಗ ಸರಳವೂ ಸಮೀಪವೂ ಆಗುತ್ತದೆ ಎಂದು ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಮತ್ತು ಸ್ಟೀವ್ ಜಾಬ್ಸ್ ಅವರ ಮಾತುಗಳನ್ನು ಉಲ್ಲೇಖಿಸಿ ಸ್ಫೂರ್ತಿ ತುಂಬಿದರು.

ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮರೀಗೌಡ ಮಾತನಾಡಿ, ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಗೆ ಕೇವಲ ನಿಯಮಿತ ಪಾಠ ಮಾತ್ರ ಸಾಕಾಗುವುದಿಲ್ಲ. ವಿದ್ಯಾರ್ಥಿಗಳು ಹೊಣೆಗಾರಿಕೆಗಳನ್ನು ಸ್ವಯಂ ಪ್ರೇರಣೆಯಿಂದ ಸ್ವೀಕರಿಸಿ ಇತರರಿಗೆ ಮಾದರಿಯಾಗಬೇಕು. ಕನಸುಗಳಿಲ್ಲದೆ ಜೀವನ ಬಣ್ಣವಿಲ್ಲದಂತಾಗುತ್ತದೆ.

ಹೀಗಾಗಿ ಇನ್ನಷ್ಟು ಎತ್ತರದ ಕನಸು ಕಾಣಬೇಕು ಎಂದು ಪ್ರೋತ್ಸಾಹಿಸಿದ ಅವರು, ಈ ನಿಟ್ಟಿನಲ್ಲಿ ಪಿ.ಜಿ ಫೋರಂ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂದರು. ವಿದ್ಯಾವರ್ಧಕ ಸಂಘದ ಖಜಾಂಚಿ ಶ್ರೀಶೈಲ ರಾಮಣ್ಣನವರ್ ಮಾತನಾಡಿದರು. ಕಾಲೇಜು ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಟಿ.ನಾಗರಾಜು ಸೇರಿ ಹಲವರು ಇದ್ದರು.

# ಶಾಮನೂರು ಶಿವಶಂಕರಪ್ಪನವರಿಗೆ ಶ್ರದ್ಧಾಂಜಲಿ



**ಮಂಡ್ಯ:** ನಗರದ ವೀರಶೈವ ವಿದ್ಯಾರ್ಥಿ ನಿಲಯದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷರಾದ ಸಿ.ಆನಂದ್ ರವರ ಅಧ್ಯಕ್ಷತೆಯಲ್ಲಿ ನೆನ್ನೆ ನಿಧನರಾದ ದಾವಣಗೆರೆ ಕ್ಷೇತ್ರದ ಶಾಸಕ,ಮಾಜಿ ಸಚಿವ ಶಾಮನೂರು ಶಿವಶಂಕರಪ್ಪನವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.


ಸಭೆಯಲ್ಲಿ ವೀರಶೈವ ವಿದ್ಯಾರ್ಥಿನಿಲಯದ ಅಧ್ಯಕ್ಷರಾದ ಎಂ.ಬಿ.ರಾಜಶೇಖರ್, ಕಾರ್ಯದರ್ಶಿ ಎಂ.ಎಸ್. ಶಿವಪ್ರಕಾಶ್, ತಾಲೂಕು ವೀರಶೈವ ಮಹಾಸಭೆಯ ಅಧ್ಯಕ್ಷ ಬುಳ್ಳಪ್ಪ. ಕಾರ್ಯದರ್ಶಿ ಮಧು, ಪಾಂಡವಪುರ ತಾಲೂಕಿನ ವೀರಶೈವ ಮಹಾಸಭೆಯ ಅಧ್ಯಕ್ಷ ಶಿವಕುಮಾರ್ ಹಾಗೂ ಕೆ ಆರ್ ಪೇಟೆ ವೀರಶೈವ ಮಹಾಸಭೆ ಅಧ್ಯಕ್ಷ ಸುಚೇಂದ್ರ ಹಾಗೂ ಜಿಲ್ಲೆಯ ಎಲ್ಲಾ ತಾಲ್ಲೂಕಿನ ವೀರಶೈವ ಲಿಂಗಾಯಿತ ಮುಖಂಡರುಗಳು ಶ್ರದ್ಧಾಂಜಲಿ ಅರ್ಪಿಸಿ ನಂತರ ದಾವಣಗೆರೆಗೆ ಅಂತಿಮ ದರ್ಶನಕ್ಕಾಗಿ ತೆರಳಿದರು.

# ಇಂದಿನಿಂದ ಧನುರ್ಮಾಸ ಮಹತ್ವ-ವಿಶೇಷ ಏನು?

ಸೂರ್ಯನು ಧನು ರಾಶಿಗೆ ಪ್ರವೇಶಿಸುವ ಕಾಲವನ್ನು ಧನುರ್ಮಾಸ ಎಂದು ಕರೆಯಲಾಗುತ್ತದೆ. 12 ರಾಶಿಗಳಲ್ಲಿ 9ನೇ ರಾಶಿಯಾದ ಧನು ರಾಶಿಯನ್ನು ಸೂರ್ಯನು ಪ್ರವೇಶಿಸಿದ ಕಾಲದಿಂದ 10ನೇ ರಾಶಿಯಾದ ಮಕರಕ್ಕೆ ಪ್ರವೇಶಿಸುವ ಕಾಲವನ್ನು ಧನುರ್ಮಾಸ ಎಂದು ಕರೆಯಲಾಗುವುದು. ಸಾಮಾನ್ಯವಾಗಿ ಧರ್ನುಮಾಸವು ಡಿಸೆಂಬರ್ 16–17ನೇ ತಾರೀಖಿನಿಂದ ಆರಂಭವಾಗಿ ಮಕರ ಸಂಕ್ರಮಣದ ದಿನ ಸಮಾಪ್ತಿಯಾಗುತ್ತದೆ. ದೇವತೆಗಳಿಗೆ ದಕ್ಷಿಣಾಯಣವು ರಾತ್ರಿಯಾಗಿರುತ್ತದೆ. ಉತ್ತರಾಯಣದ ಆಗಮನಕ್ಕೆ ಮೊದಲು ಬರುವ ಧನುರ್ಮಾಸವು ದೇವತೆಗಳಿಗೆ ಅರುಣೋದಯ ಕಾಲವೆಂದು ಪರಿಗಣಿಸಲಾಗುತ್ತದೆ ಆದ್ದರಿಂದ ಈ ಸಮಯದಲ್ಲಿ ಶ್ರೀಹರಿಯ ಪೂಜೆ ಬಹಳ ಮಹತ್ವವನ್ನು ಪಡೆಯುತ್ತದೆ. ಧನುರ್ಮಾಸಲ್ಲಿ ಉಷಃ ಕಾಲದಲ್ಲಿಯೇ ಎದ್ದು ಸೂರ್ಯೋದಯಕ್ಕೂ ಮೊದಲಿಗೆ ಸ್ನಾನ ಆಹ್ನಿಕ ಪೂಜೆಗಳನ್ನು ಮುಗಿಸಿ, ದೇವರಿಗೆ ನೈವೇದ್ಯವನ್ನು ಮಾಡಬೇಕೆಂದು ಹೇಳಲಾಗಿದೆ. ಸಾಮಾನ್ಯವಾಗಿ ಮಾರ್ಗಶೀರ ಅಥವಾ ಪುಷ್ಯ ಮಾಸಗಳಲ್ಲಿ ಧನುರ್ಮಾಸವು ಬರುತ್ತದೆ. ಇದೇ ಕಾಲದ ಶುಕ್ಲ ಏಕಾದಶಿ ವೈಕುಂಠ ಏಕಾದಶಿ ಆಗಿರುವುದರಿಂದ ಧನುರ್ಮಾಸಕ್ಕೆ ವಿಶೇಷ ಮಹತ್ವವಿದೆ. ಪಂಚರಾತ್ರ ಆಗಮಗಳಲ್ಲಿ ಧನುರ್ಮಾಸದ ಬಗ್ಗೆ ಹಂಸನಾಮಕ ಪರಮಾತ್ಮ ಹಾಗೂ ಬ್ರಹ್ಮದೇವರ ಸಂಭಾಷಣೆಯ ಮೂಲಕ ತಿಳಿಯುತ್ತೇವೆ. ಧನುರ್ಮಾಸವು ಬಹಳ ಉತ್ತಮ ಕಾಲ ಎಂಬ ಪ್ರತೀತಿ ಇದೆ. ಮಹಾಭಾರತ ಯುದ್ಧವು ನಡೆದ ಮತ್ತು ಶ್ರೀಮದ್ ಭಗವದ್ಗೀತೆಯನ್ನು ಅರ್ಜುನನಿಗೆ ಪರಮಾತ್ಮನು ಉಪದೇಶಿಸಿದ ಹಾಗೂ ಭೀಷ್ಮಾಚಾರ್ಯರು ವಿಷ್ಣು ಸಹಸ್ರನಾಮವನ್ನು ಉಪದೇಶಿಸಿದ ಕಾಲವಾಗಿರುವುದು ವಿಶೇಷವಾಗಿದೆ. ಉತ್ತರಾಯಣ ಪರ್ವಕಾಲದಲ್ಲಿ ತರ್ಪಣವನ್ನು ನೀಡಿದ ಮೇಲೆ ಧನುರ್ಮಾಸದ ಸಮಾಪ್ತಿಯಾಗುತ್ತದೆ. ಸೂರ್ಯನು ಧನು ರಾಶಿಯಿಂದ ಮಕರ ರಾಶಿಗೆ ಪ್ರವೇಶಿಸುವ ಸಮಯವಾಗಿದೆ.

ಮಹಾಭಾರತದ ಯುದ್ಧವು ಮುಂಜಾನೆ 6 ಗಂಟೆಗೆ ಆರಂಭವಾಗುತ್ತಿತ್ತು. ಆ ಸಮಯದಲ್ಲಿಯೂ ಕೂಡ ದ್ರೌಪದೀ ದೇವಿ ಮುಂಜಾನೆ ಆರು ಗಂಟೆಯ ಒಳಗೆ ಧನುರ್ಮಾಸ ಪೂಜೆಯನ್ನು ಮಾಡಿ ಹುಗ್ಗಿ ನೈವೇದ್ಯವನ್ನು ಮಾಡಿ ಎಲ್ಲರಿಗೂ ಊಟವನ್ನು ಮಾಡಿಸಿ ಯುದ್ಧಕ್ಕೆ ಕಳುಹಿಸುತ್ತಿದ್ದಳು ಎಂದು ಭಾಗವತದಲ್ಲಿ ಬರುತ್ತದೆ. ಧನುರ್ಮಾಸದಲ್ಲಿ ದೇವತೆಗಳಿಂದ ಮಹಾವಿಷ್ಣುವಿಗೆ ಪೂಜೆ ಮತ್ತು ಹುಗ್ಗಿಯ ನೈವೇದ್ಯ ಮಾಡುತ್ತಾರೆ. ಅದರಂತೆ ನಾವುಗಳು ಕೂಡ ಪರಮಾತ್ಮನ ಪ್ರೀತಿಗಾಗಿ ಧನುರ್ಮಾಸ ಪೂಜೆಯನ್ನು ಮಾಡಬೇಕು. ಬ್ರಹ್ಮ ದೇವರಿಗೆ ಹಂಸನಾಮಕ ಪರಮಾತ್ಮನು ಉಪದೇಶಿಸಿದ್ದನ್ನು ಅದೇ ರೀತಿಯಲ್ಲಿ ಶೌನಕರು ಕೇಳಿದ ಪ್ರಶ್ನೆಗೆ ಋಷಿ ಸೂತರು ಉತ್ತರ ರೂಪವಾಗಿ ಹೇಳುತ್ತಾರೆ.

ಧನುರ್ಮಾಸದಲ್ಲಿ ಮುಂಜಾನೆ ಬೇಗ ಎದ್ದು ಪಜೆ ಮಾಡುವುದರಿಂದ ಸಂಪತ್ತು, ಆರೋಗ್ಯ ಐಶ್ವರ್ಯಾದಿಗಳು ದೊರೆತದೆ. ಮುಂಜಾನೆ ಏಳದೇ ಪೂಜೆ ಮಾಡದೇ ಇರುವವರಿಗೆ ದಾರಿದ್ರ್ಯ ದೊರೆಯುತ್ತದೆ ಎನ್ನಲಾಗುತ್ತದೆ. ಧನರ್ಮಾಸ ಒಂದು ದಿನದ ಮುಂಜಾನೆಯ ಪೂಜಾ ಫಲ ಸಾವಿರಾರು ವರ್ಷ ಪೂಜೆ ಮಾಡುವ ಫಲ ಎಂದು



ಕೂಡ ಹೇಳುತ್ತಾರೆ. ಧನುರ್ಮಾಸವನ್ನು ಶೂನ್ಯಮಾಸ ಎಂದು ಕರೆಯುವುದರಿಂದ ಮದುವೆ ಮುಂಜಿ ಹಾಗೂ ಅನೇಕ ಸಮಾರಂಭಗಳನ್ನು ಮಾಡುವುದಿಲ್ಲ ಆದರೆ ಪೂಜೆ ಹೋಮ ಪುಣ್ಯಕಾರ್ಯಗಳು , ಬ್ರಾಹ್ಮಣ ಸುವಾಸಿನಿಯರ ಭೋಜನವನ್ನು ಮಾಡುತ್ತಾರೆ. ನಾಮಕರಣ ಕರ್ಮವನ್ನು 12,13 ದಿನಗಳಲ್ಲಿ ಮಾಡುವವರು ಮಾತ್ರ ಮಾಡುತ್ತಾರೆ. ಉಳಿದಂತೆ ಪೂಜಾ ಕಾರ್ಯಗಳನ್ನು ಮಾಡಿದರೂ ಸಮಾರಂಭಗಳನ್ನು ಮಾಡುವುದಿಲ್ಲ

ಧನರ್ಮಾಸವೆಂದರೆ ಹುಗ್ಗಿಯ ನೈವೇದ್ಯದ ಮಹತ್ವ ಹೆಚ್ಚು. ಅಕ್ಕಿ ಮತ್ತು ಹೆಸರು ಬೇಳೆಯನ್ನು ಸಮ ಪ್ರಮಾಣದಲ್ಲಿ ಹಾಕಿ ಜೀರಿಗೆ ಮೆಣಸು ಒಣ ಕೊಬ್ಬರಿ ಕೊತ್ತಂಬರಿ ಬೀಜ ಇಂಗು ಮಸಾಲೆಗಳನ್ನು ಹಾಕಿ ಹುಗ್ಗಿಯನ್ನು ಮಾಡುತ್ತಾರೆ. ಅದರ ಮೇಲೆ ಬೆಣ್ಣೆಯನ್ನು ಹಾಕಿ ಪರಮಾತ್ಮನಿಗೆ ನೀವೇದಿಸಿ ತಾವು ಕೂಡ ಸೇವಿಸುತ್ತಾರೆ.

ಇದರಿಂದ ನಮಗೆ ಬೇಕಿರುವ ಉಷ್ಣಾಂಶ, ಪ್ರೋಟಿನ್ ಮತ್ತು ಶಕ್ತಿಯು ಸಿಗುತ್ತದೆ. ಚಳಿಗಾಲದಲ್ಲಿ ಹಸಿವು ಹೆಚ್ಚು ಆಗುವುದರಿಂದ ಹುಗ್ಗಿ ಪೋಷಕಾಂಶಗಳ ಜೊತೆಗೆ ಬಹಳ ಸಮಯ ಹಸಿವನ್ನು ಉಂಟು ಮಾಡದೇ ಇರುವುದರಿಂದ ಅದನ್ನು ಸೇವಿಸುತ್ತಾರೆ. ಪುರಾಣಗಳ ಪ್ರಕಾರ ಧನುರ್ಮಾಸವನ್ನು ಆಚರಿಸದೇ ಹೋದಲ್ಲಿ ಮುಂದಿನ ಏಳು ಜನ್ಮಗಳಲ್ಲಿ ದಾರಿದ್ರ್ಯ ಮತ್ತು ಕ್ಷಯ ರೋಗಗಳು ಬರುತ್ತವೆ ಎಂದು ಹೇಳುತ್ತಾರೆ. ಅದೇ ಲಕ್ಷ್ಮಿ ನಾರಾಯಣರನ್ನು ಮುಂಜಾನೆ ಬಹು ಬೇಗ ಎದ್ದು ಪೂಜಿಸಿದಲ್ಲಿ ಧನ ಧಾನ್ಯ ಐಶ್ವರ್ಯ ಆಯಸ್ಸುಗಳಿಂದ ಸಮೃದ್ಧ ಜೀವನವನ್ನು ಪಡೆಯುತ್ತಾರೆ ಎಂದು ಹೇಳುತ್ತಾರೆ.

ಧನುರ್ಮಾಸದಲ್ಲಿ ದಾನಗಳು ಕೂಡ ವಿಶೇಷ ಮಹತ್ವ ಹೊಂದಿವೆ ಈ ಕಾಲದಲ್ಲಿ ಕಂಬಳಿ ದಾನ, ಶಯ್ಯಾ ದಾನ, (ಹಾಸಿಗೆ, ಹೊದಿಕೆ ಮತ್ತು ದಿಂಬುಗಳು) ಎಲ್ಲಕ್ಕಿಂತ ವಿಶೇಷವಾಗಿ ಹುಗ್ಗಿದಾನ ಮಹತ್ವವನ್ನು ಹೊಂದಿದೆ. ಬಹಳಷ್ಟು ಬ್ರಾಹ್ಮಣ ಸುವಾಸಿನಿಯರಿಗೆ ಮಾತ್ರವಲ್ಲದೇ ಕೈಲಾಗದ ವಯೋ ವೃದ್ಧರಿಗೆ ಅಸಾಹಕರಿಗೆ ಈ ಸಮಯದಲ್ಲಿ ಹುಗ್ಗಿ ನೈವೇದ್ಯ ಮಾಡಿ ದಾನ ಮಾಡುವುದು ವಿಶೇಷ ಪುಣ್ಯಕರ. ಈ ಬಾರಿ ಧನುರ್ಮಾಸವು 17ನೇ ತಾರೀಖಿನಿಂದ ಆರಂಭವಾಗಲಿದ್ದು ಎಲ್ಲ ದೇವಾಲಯಗಳಲ್ಲಿ ವಿಶೇಷ ಪೂಜೆಗಳು ನಡೆಯುತ್ತದೆ. ಮನೆಯಲ್ಲಿ ಪೂಜೆ ಮಾಡಲಾಗದವರು ದೇವಾಲಯ ದರ್ಶನ ಮಾಡಿ ಪೂಜೆ ಮಾಡಿಸಿ ಪ್ರಸಾದ ಸ್ವೀಕರಿಸಬಹುದು.



ಮಾಧುರಿ ದೇಶಪಾಂಡೆ

# ಆಯ್ಕೆ, ಸ್ವಾತಂತ್ರ್ಯ, ಬದುಕು, ಮದುವೆ ಇತ್ಯಾದಿ...

"ಹುಟ್ಟಿಸಿದವರು, ಈ ಬದುಕನ್ನು ಕೊಟ್ಟವರು ನೀವಾದರೂ ಪಪ್ಪಾ... ಬದುಕುವ ಆಯ್ಕೆ ನಮ್ಮದಲ್ಲವೇ"... ಮಗಳ ಪ್ರಶ್ನೆಗೆ ಉತ್ತರಿಸಲಾಗದೆ ತಡಬಡಿಸಿದನಾತ. ಎದೆಯ ಗೂಡಲ್ಲಿರುವ ಪ್ರೀತಿಯ ಹಕ್ಕಿಯೊಂದು ಹಾರಿಹೋಗು ತ್ತಿರುವಂತೆ...ಚಡಪಡಿಕೆ, ಕಸಿವಿಸಿ. ಅವ್ಯಕ್ತ ಭಯ, ನೋವು,ಸಂಕಟ, ಸಂಶಯ... ಇದು ವಯಸ್ಸಿಗೆ ಬಂದ ಹೆಣ್ಣುಮಕ್ಕಳ ಅಪ್ಪಂದಿರಿಗೆ ಇರುವಂತಹದ್ದೇ. ಅದುರು ತ್ತಿರುವ ತುಟಿಗಳಿಂದ ಆಕೆ ಯನ್ನು ಪ್ರಶ್ನಿಸಿದ.'ಆಯ್ಕೆಯ ಮಾತೇಕೆ ಈಗ '

ಸ್ನಾತಕೋತ್ತರ ಪದವೀಧರೆ ಮಗಳು,ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕಲಿಕೆಗೆ ಆಕೆ ಆರಿಸಿಕೊಂಡ ವಸ್ತು ವಿಷಯ ಮತ್ತು ಆ ವಿಭಾಗಕ್ಕೆ ಪ್ರಥಮತಃಳಾಗಿ ಉತ್ತೀರ್ಣ ಳಾಗಿ ಬಂಗಾರದ ಪದಕವನ್ನು ತನ್ನದಾಗಿಸಿಕೊಂಡ ಪ್ರತಿಭಾನ್ವಿತ ವಿದ್ಯಾರ್ಥಿನಿ.


ಪ್ರಸ್ತುತ ನಗರದ ಸರಕಾರಿ ಮಹಾವಿದ್ಯಾಲಯದಲ್ಲಿ ನೂರಕ್ಕೂ ಹೆಚ್ಚು ವಿದ್ಯಾರ್ಥಿ ವಿದ್ಯಾರ್ಥಿಯನಿರಿಗೆ ಬೋಧನೆ ಮಾಡುತ್ತಿರುವ ಸರಕಾರಿ ಆದೇಶ ಪಡೆದ ಉಪನ್ಯಾಸಕಿ ಯಾಗಿ ಕೆಲಸ ನಿರ್ವಹಿಸು ತ್ತಿದ್ದಾಳೆ...

"ಮದುವೆಯಾಗಬೇಕೆಂದಿ ದ್ದೇನೆ"ಮಗಳ ಮಾತಿಗೆ ತಲೆ ಎತ್ತಿ ನೋಡಿದನಾತ. 'ಸಂತೋಷ' ಎಂದನಾತ...

ಈ ಮೊದಲು ಆತ ಮಗಳಲ್ಲಿ ಆಕೆಯ ಮದುವೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾಗ, ಅವಳು ಗಟ್ಟಿ ಸ್ವರದಲ್ಲಿ ಖಡಾ ಖಂಡಿತವಾಗಿ ಕಟುವಾಗಿ ಅಂದಿದ್ದಳು."ಪಪ್ಪಾ.. ಜನ್ಮ ನೀಡಿ ಬೆಳೆಸಿದಿರಿ, ಸಾಕಿ ಸಲಹಿದಿರಿ,ಬುದ್ಧಿ ಹೇಳಿದ್ದೀರಿ, ವಿದ್ಯಾಭ್ಯಾಸ ಕೊಟ್ಟು ನನ್ನನ್ನು ಈ ಹಂತಕ್ಕೆ ತಂದಿದ್ದೀರಿ, ನಿಮ್ಮ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಿ ದ್ದೀರಿ.ಈಗ ನಾನು ನನ್ನ ಕಾಲ ಮೇಲೆ ನಾನೇ ನಿಂತುಕೊಳ್ಳು ವವಳಾಗಿದ್ದೇನೆ.ಮದುವೆ ನನ್ನ ವೈಯುಕ್ತಿಕ ವಿಚಾರ. ನನ್ನ ಆಯ್ಕೆ ನನ್ನ ಸ್ವತಂತ್ರ ನಿಲುವು ನಿರ್ಧಾರಗಳಿಗೆ ಬಿಟ್ಟದ್ದು ಎಂಬುದು ನನ್ನ ಭಾವನೆ'

'ನಿನ್ನ ಭಾವನೆಗಳನ್ನು ಗೌರವಿಸುವೆ ಮಗಳೇ...'

'ಗೌರವಿಸಲೇಬೇಕಲ್ಲವೇ ಪಪ್ಪಾ... ಅಪ್ಪನಾಗಿ ನಿಮ್ಮ ಕರ್ತವ್ಯ ಪಾಲಿಸಿ ನನ್ನ ನ್ನೊಂದು ಸ್ಥಾನಕ್ಕೆ ತಂದಿರಿ.ಈ ಮಟ್ಟಕ್ಕೆ ಏರಿಸಿದಿರಿ. ಏರಿಸಲೆ ಬೇಕಾದವರಾಗಿದ್ದೀರಿ ನೀವು. ನನ್ನ ಕಾಪಾಡಿದಿರಿ, ಕಾಪಾಡ ಬೇಕಿತ್ತು ಕೂಡಾ... ಇನ್ನು ನಮ್ಮ ದಾರಿ ನಮಗೆ... ಈ ಬಾಳು ನಾವು ಬಯಸಿದಂತೆ... ಪಪ್ಪಾ ನಿಮ್ಮಲ್ಲಿ



ನಾನು ಅಂದೇ ಹೇಳಿದ್ದೆ... ನನ್ನ ಬಾಳ ಸಂಗಾತಿ ನನ್ನ ಆಯ್ಕೆ, ನನ್ನ ಸ್ವಾತಂತ್ರ್ಯ... ಅಲ್ಲಿ ಯಾರೂ ಮೂಗು ತೂರಿಸು ವಂತಿಲ್ಲ.ನಾನು ಇಷ್ಟಪಟ್ಟ ವನನ್ನು, ನನ್ನ ಮನಸ್ಸು ಆರಿಸಿಕೊಂಡವನನ್ನು ಮದುವೆಯಾಗುವವಳು ನಾನು. ಆತ ಉದ್ಯಮಿಯಾಗಿರಲಿ,ಭಿಕ್ಷುಕನಾಗಿರಲಿ, ಕುಂಟನಾಗಿರಲಿ, ಕುರುಡನಾಗಿರಲಿ,ಕಿವುಡನಾಗಿರಲಿ, ಮೂಗನಾಗಿರಲಿ... ಬಡವನಾಗಿರಲಿ, ಶ್ರೀಮಂತನಾಗಿರಲಿ... ನಾನವನನ್ನೇ ಮದುವೆಯಾಗೋಳು...'

'ನೀನೂ ನಿನ್ನ ಅಮ್ಮನ ಹಾದಿ ಹಿಡಿಯುವವಳೇ... ನೂಲಿನಂತೆ ಸೀರೆ, ತಾಯಿಯಂತೆ ಮಗಳು...'

'ತಪ್ಪೇನು ನಾನೂ ಓಡಿಹೋಗುವವಳೇ...' ಅವಳ ಪ್ರಶ್ನೆಗೆ, ಅದರೊಂದಿಗಿನ ಅವಳ ಉತ್ತರಕ್ಕೆ ಕಕ್ಕಾವಿಕ್ಕಿ ಯಾಗಿದ್ದಾನಾತ. ತಳಮಳ ಕಳವಳಕ್ಕೆ ಈಡಾಗಿದ್ದ.ಆತ ತನ್ನ ಕೆಲಸದಿಂದ ನಿವೃತ್ತಿಯಾದ ದಿನವೇ ಅವನ ಹೆಂಡತಿ, ಇವಳ ಅಮ್ಮ ಆ ಮನೆಗೆ ಕಾರು ಚಾಲನೆಯನ್ನು ಕಲಿಸಲು ಬರುತಿದ್ದವನೊಂದಿಗೆ, ಅವರ ಕಾರಿಗೆ ಚಾಲಕನಾದವನೊಂದಿಗೆ ಓಡಿಹೋಗಿದ್ದಳು... ಆತನನ್ನೂ, ಆತನ ಮಗಳನ್ನೂ ನಡುನೀರಿನಲ್ಲಿ ಕೈಬಿಟ್ಟು...

'ಪಪ್ಪಾ.. ನನ್ನ ಪ್ರಕಾರ ನಮ್ಮ ಅಮ್ಮ ಮಾಡಿದ್ದು ಸಮಾಜದ ರೀತಿ ರಿವಾಜುಗಳಿಗೆ ಸಂಬಂಧಿಸಿದಂತೆ ಸರಿಯಲ್ಲದೆ ಇರಬಹುದು.ಆದರೆ ಅದು ತಪ್ಪು ಅಲ್ಲ...'

ಮಗಳ ಮಾತು ಅಪ್ಪನನ್ನು ಪಾತಾಳಕ್ಕೆ ತಳ್ಳಿದಂತಿತ್ತು.

"ಪಪ್ಪಾ ನಾನು ಮದುವೆ ಯಾಗುವಾತ ಕೂಡ ಬಸ್ಸು ಚಾಲಕನೇ... ನಾನು ವಿಶ್ವವಿದ್ಯಾನಿಲಯಕ್ಕೆ ಹೋಗುವಾಗ ಬಸ್ಸಿನಲ್ಲೇ ಪರಿಚಯವಾದಾತ... ಜಾತಿ ಬೇರೆ... ವಿದ್ಯಾಭ್ಯಾಸ ಕಡಿಮೆ.. ವಯಸ್ಸು ಸ್ವಲ್ಪ ಹೆಚ್ಚೇ...

ದಿನಗೂಲಿಯಾತ,ತಂದೆಯಿ ಲ್ಲ,ತಾಯಿ ಜೊತೆಯಿರುವಾತ, ನನ್ನನ್ನು ಪ್ರೀತಿಯಿಂದ ನೋಡಿಕೊಳ್ಳಬಲ್ಲ.. ಅವನನ್ನೇ ಮದುವೆಯಾಗುತ್ತೇನೆ. ಅವನೊಂದಿಗೆ ದಾಂಪತ್ಯ, ಸಂಸಾರ ಮಾಡುತ್ತೇನೆ. ನನ್ನಕ್ಕಿಂತ ಹತ್ತು ವರುಷ ದೊಡ್ಡವನು.. ಆದರೆ ನನ್ನನ್ನು ಅರ್ಥಮಾಡಿಕೊಂಡಿರುವವನು. ನನ್ನನ್ನು ಸಂತೋಷದಿಂದ ಬಾಳಿಸಬಲ್ಲ ಎಂಬ ನಂಬಿಕೆ ಯನ್ನು ಹುಟ್ಟುಹಾಕಿದವನು."

ಮಗಳ ಮಾತಿಗೆ ಅಪ್ಪನ ಕಣ್ಣಿಂದ ಕಣ್ಣೀರು ಧಾರೆಯಾಗುರುಳಿತು.


"ಮಗಳೇ... ಈ ಮದುವೆ ಬೇಕೇ ಕೇಳಲಾರೆ ನಿನ್ನಲ್ಲಿ.

ಮಗಳೇ... ಈ ಮದುವೆ ಬೇಡ ಎಂದು ಹೇಳಲಾರೆ ನಿನ್ನಲ್ಲಿ. ಯಾಕೆಂದರೆ ನೀನು ಯಾವುದು ಸರಿ ಯಾವುದು ತಪ್ಪು ಏನನ್ನು ಮಾಡಬೇಕು ಏನನ್ನು ಮಾಡಬಾರದು ಎಂಬ ಅರಿವು ತಿಳುವಳಿಕೆ ಬುದ್ಧಿ ಇರುವವಳು... ಮಗಳೇ ಈ ಗಂಡು, ಈ ಮದುವೆ ನನಗಿಷ್ಟವಿಲ್ಲವಾದರೂ ನಾನು ನಿನ್ನ ಭಾವನೆಗಳನ್ನು, ಮತ್ತು ನಿಮ್ಮ ನಡುವಿನ ಪ್ರೀತಿಯನ್ನು ಗೌರವಿಸುತ್ತೇನೆ. ಉಳಿದಂತೆ ನಿಮ್ಮ ಹಣೆಬರಹ ದಲ್ಲೇನಿದೆ ಯೋ ಅದೇ ನಡೆಯುತ್ತೆ... ಅಪ್ಪನಾಗಿ ನಾನು ನನ್ನ ಜವಾಬ್ದಾರಿಯನ್ನು ನೆರವೇರಿ ಸಿದ್ದಾಗಿದೆ. ಆದರೆ ಈ ಮದುವೆಯ ವಿಷಯದಲ್ಲಿ ನಾನು ಒಪ್ಪಿದರೂ, ಒಪ್ಪದಿ ದ್ದರೂ ನಿನ್ನ ನಿಲುವೇ ಅಂತಿಮ. ಮಗಳೇ... ನಿನ್ನ ಮದುವೆಯ ವಿಷಯದಲ್ಲಿ ನನಗೆ ನೀನು ಯಾವುದೇ ಜವಾಬ್ದಾರಿ ಅಧಿಕಾರ ನೀಡಿಲ್ಲ.. ಎಂಬುದನ್ನು ಮನಗಂಡಿದ್ದೇನೆ."

ಮಗಳೇ... ನಿನ್ನ ಬದುಕು ನಿನ್ನದು. ನೀನೇ ಅದರ ರೂವಾರಿ. ಈ ಕಾಲಘಟ್ಟದಲ್ಲಿ ನಾನದನ್ನು ಒಪ್ಪಿಕೊಳ್ಳದೆ ವಿಧಿಯಿಲ್ಲ.ನಿನ್ನ ಭಾವನೆಗಳನ್ನು ಗೌರವಿಸಿದ್ದೇನೆ. ನಿಮ್ಮ ಪ್ರೀತಿಯನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಪ್ರೀತಿಗಿಂತ ಬದುಕು ಮುಖ್ಯ ಅನಿಸುತ್ತಿದೆ ಮಗಳೇ... ಪ್ರೀತಿ ಎರಡು ಹೃದಯ, ಎರಡು ಜೀವ, ಎರಡು ಮನಸುಗಳಿಗೆ ಸಂಬಂಧಿಸಿದ್ದು. ಆದರೆ ನಮ್ಮ ಬದುಕು ಎಷ್ಟು ಮಂದಿಗೆ ಸಂಬಂಧಿಸಿಲ್ಲ... ಸಮಾಜಕ್ಕೆ ಏನೆಂದು ಉತ್ತರಿಸೋಣಆದರೂ ಒಪ್ಪಿಕೊಳ್ಳುತ್ತೇನೆ...ಈ ಪ್ರೀತಿ, ಈ ಬಡಿಕು ನಿನ್ನ ಆಯ್ಕೆ, ನಿನ್ನ ಸ್ವಾತಂತ್ರ್ಯ, ನಿನ್ನ ನಿರ್ಧಾರ...

"ಆತ ತಲೆ ತಗ್ಗಿಸಿ ಮಾತಾಡು ತಿದ್ದವ

"ಮಗಳೇ... ನನ್ನವಳು, ನಿನ್ನಮ್ಮ ಕಾರು ಚಾಲಕ ನೊಂದಿಗೆ ಓಡಿಹೋದಳು. ಮಗಳು



ಜಾತಿ ಮತ ಅಂತಸ್ತು ಪ್ರತಿಷ್ಠೆಗಳೆಲ್ಲವ ಬಿಟ್ಟು ಬಸ್ಸು ಚಾಲಕನೊಂದಿಗೆ ಓಡಿ ಹೋಗಲು ತುದಿಗಾಲಲ್ಲಿ ನಿಂತಿರುವವಳು."

"ಅವನಿಲ್ಲದೆ ನಾನಿಲ್ಲ ಪಪ್ಪಾ"

" ನೀನಿಲ್ಲದೆ ನಾನು ಹೇಗಿರಲಿ ಮಗಳೇ ಈ ನೋವು, ಅವಮಾನ ಸಹಿಸಿಕೊಂಡು... ನಿನ್ನಮ್ಮನ ಬಗ್ಗೆ, ನಿನ್ನ ಬಗ್ಗೆ ಪ್ರಶ್ನಿಸುವವರಿಗೆ ನಾನೇನು ಉತ್ತರ ಕೊಡಲಿ ಮಗಳೇ "

ಒಂದು ವಿಷಯ ತಿಳಿದುಕೋ ನಮ್ಮಿಬ್ಬರ ನಡುವೆ ಬಂದ ಆತ್ಮಹತ್ಯೆಯ ಬಗೆಗಿನ ಆಲೋಚನೆಗಳಿಗೆ ಯಾವುದೇ ಮಹತ್ವ, ಕಾವು ಇಲ್ಲ..ಅದು ಜೀವನ್ಮುಖಿ ಧೋರಣೆಯಲ್ಲ. ಮತ್ತದು ಪರಿಹಾರವೂಅಲ್ಲ... ಇಬ್ಬರ ನಡುವಿನ ಪ್ರೀತಿಗಿಂತ ಸಮಾಜದಲ್ಲಿ ಬಾಳುವ ಆ ಇಬ್ಬರ ಬದುಕೇ ದೊಡ್ಡದು. ಕಾಲ ಹೀಗಿದೆ.

ಜೀವನ ಸಾಂಸಾರಿಕ ಬದುಕೇನೋ ನಡೆಯುತ್ತಿದೆ... ಎಲ್ಲರ ಅಸಮಾಧಾನ ಅಸಹನೆ ತಿರಸ್ಕಾರಗಳ ನಡುವೆ. ಆದರೆ ಅವನು... ಅವನು ಮಾತ್ರ ವೃದ್ಧಾಶ್ರಮ ಸೇರಿಕೊಂಡಿದ್ದಾನೆ... ತನ್ನ ಸಾವಿನ ದಿನಕ್ಷಣಕ್ಕಾಗಿ ಕಾಯುತ್ತಿದ್ದಾನೆ... ಆತ ತನ್ನ ಬಾಳ ಸಂಜೆಯಲ್ಲಿ ಹೆಂಡತಿ ಮಗಳು ಹೀಗೆ ಬಣ್ಣ ಬದಲಿಸಿಕೊಳ್ಳುತ್ತಾರೆ ಎಂದುಕೊಂಡಿರಲೇ ಇಲ್ಲ.



ಶ್ರೀಜಿತ್

# ಇಂದಿನ ಬದುಕಿಗೆ ಗೀತೆಯ ಅವಶ್ಯಕತೆ



ಯುಗಾಂತರಗಳಿಂದ ಸಾಗುತ್ತಿರುವ ಮನುಷ್ಯನ ಜೀವನದಲ್ಲಿ ಬದಲಾವಣೆಗಳು ಸಂಭವಿಸದೆ ಇರುವ ದಿನವೇ ಇಲ್ಲ. ತಂತ್ರಜ್ಞಾನದ ಪ್ರಗತಿ, ಸಮಾಜದ ಬೆಳವಣಿಗೆ, ಜ್ಞಾನವಿಸ್ತರಣೆ ಎಲ್ಲವೂ ಒಂದೇ ಕಡೆ ಮನುಷ್ಯನ ಬದುಕನ್ನು ಸುಲಭಗೊಳಿಸಿರುವಂತೆ ಕಾಣುತ್ತದೆ. ಆದರೆ ಅದಕ್ಕೆ ವಿರುದ್ಧವಾಗಿ, ಮನುಷ್ಯನ ಮನಸ್ಸು ಎದೆಯೊಳಗೆ ತಾನೇ ತಾನೇ ಕುಸಿಯುತ್ತಿರುವುದು ವಿಸ್ಮಯಕಾರಿ. ಹೊರಗಿನ ಲೋಕ ಬಲಿಷ್ಠವಾಗುತ್ತಿದ್ದಂತೆ, ಒಳಗಿನ ಮನಸ್ಸು ಬಲಹೀನವಾಗುತ್ತಿದೆ. ಸಾಧನೆಗಳು ಹೆಚ್ಚಿದಂತೆ, ಆತಂಕವೂ ಹೆಚ್ಚುತ್ತಿದೆ. ಸೌಕರ್ಯಗಳು ಹೆಚ್ಚಿದಂತೆ, ಸಂಬಂಧಗಳು ದೂರವಾಗುತ್ತಿವೆ. ಜ್ಞಾನ ಹೆಚ್ಚಾದಂತೆ, ಶಾಂತಿ ಕಡಿಮೆಯಾಗುತ್ತಿದೆ. ನಾವಿಂದು ವಾಸ್ತವವಾಗಿ ಎದುರಿಸುತ್ತಿರುವ ಹೋರಾಟ, ಹೊರಗಿನ ಜಗತ್ತಿನಲ್ಲಲ್ಲ ಅದು ನಮ್ಮ ಮನಸ್ಸಿನೊಳಗಿನ ಕುರುಕ್ಷೇತ್ರ.

ಅರ್ಜುನನು ಯುದ್ಧಭೂಮಿಯಲ್ಲಿ ನಿಂತಾಗ ತನ್ನೊಳಗಿನ ಗೊಂದಲ, ಭಯ, ಅಳಲು, ದುಃಖ, ಕರ್ತವ್ಯ ಹಾಗೂ ಸಂಬಂಧಗಳ ಮಧ್ಯದ ಸಂಘರ್ಷವನ್ನು ಅನುಭವಿಸಿದ್ದ. ನಮ್ಮ ಇಂದಿನ ಜೀವನದಲ್ಲೂ ಇದೇ ಸಂಘರ್ಷಗಳು ನಿತ್ಯ ನಡೆಯುತ್ತಿವೆ. ಜೀವಿತವು ಬಲವಂತಿತಾಗಿರುವ ಕ್ಷಣಗಳಲ್ಲಿ, ಭಯ ಮತ್ತು ಗೊಂದಲ ಮನುಷ್ಯನಿಂದ ಬಲೆಯಂತೆ ಆವರಿಸುತ್ತದೆ. ಈ ಕ್ಷಣಗಳಲ್ಲಿ ಗೀತೆಯ ಬೆಳಕೇ ಮನುಷ್ಯನಿಗೆ ಅತ್ಯಗತ್ಯವಾಗುತ್ತದೆ.

ಇಂದಿನ ಮನುಷ್ಯನು ದಿನಪತ್ರಿಕೆಯಲ್ಲಿ ಓದುತ್ತಿರುವ ಸುದ್ದಿ, ಸಮಾಜದಲ್ಲಿ ಎದುರಾದ ಸಮಸ್ಯೆಗಳು, ಮನೆಗಳಲ್ಲಿ ನಡೆಯುತ್ತಿರುವ ಒತ್ತಡ, ಕೆಲಸದ ಸ್ಥಳದ ಸ್ಪರ್ಧೆ, ಮೊಬೈಲ್ ನ ಅತಿಯಾದ ಬಳಕೆ, ಮನೋಭಾರ ಇವೆಲ್ಲವೂ ಅವನ ಮನಸ್ಸನ್ನು ಮಗ್ಗುಲುಗಳಿಗೆ ಎಳೆದಾಡುತ್ತಿವೆ. ಹೊರಗಿನ ಸುಖವನ್ನು ಪಡೆದುಕೊಂಡರೂ, ಒಳಗಿನ ಸುಖವನ್ನು ಕಳೆದುಕೊಂಡಿರುವುದು ಮಾನವಕುಲದ ದುರಂತ. ಮನಸ್ಸಿಗೆ ಶಾಂತಿ ಇರುವುದಿಲ್ಲ; ಹೃದಯಕ್ಕೆ ನೆಲೆಗುಂದಿಲ್ಲ. ಗೀತೆಯ ಮೊದಲ ವಾಕ್ಯವೇ ಇದಕ್ಕೆ ಸಮಾಧಾನ ನೀಡುವಂತೆ, ಕ್ಲೈಬ್ಯಂ ಮಾ ಸ್ಮ ಗಮಃ ಪಾರ್ಥ ಅರ್ಜುನನ ದುರ್ಬಲತೆಯನ್ನು ಬಲವಂತೇ ಮಾಡಿ ಕಟ್ಟಿದಂತೆ. ಮನುಷ್ಯನ ಜೀವನದಲ್ಲಿನ ಮೊದಲ ಸಮಸ್ಯೆ ದುರ್ಬಲತೆ; ಅದನ್ನು ಗುರುತಿಸುವ ಮೊದಲು ಗೀತೆ ಅದಕ್ಕೆ ಔಷಧ ನೀಡುತ್ತದೆ.

ಇಂದಿನ ಯುವಕರು ಮತ್ತು ವಯಸ್ಕರು ಒತ್ತಡದಲ್ಲಿ ಬದುಕುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಗೀತೆಯ ನಿಷ್ಕಾಮ ಕರ್ಮ ತತ್ತ್ವವು ಅತ್ಯಂತ ಅವಶ್ಯ. ಮನುಷ್ಯನು ತನ್ನ ಕೆಲಸಕ್ಕೆ ಮಾತ್ರ ಜವಾಬ್ದಾರ, ಫಲಕ್ಕೆ ಅಲ್ಲ. ಫಲದ ಬಗ್ಗೆ ಅತಿಯಾದ ನಿರೀಕ್ಷೆ, ಫಲದ ಗಂಭೀರ ಭಯ ಇವುಗಳು ಅವನ ಮನಸ್ಸಿನ ಮೇಲೆ ಸಾವಿರ ಕಿಲೋ ಭಾರ ಹಾಕುತ್ತಿರುವಂತೆ. ಗೀತೆಯ ಸಂದೇಶ, ಕಾರ್ಯಮಾತ್ರಕ್ಕೆ ಹಕ್ಕಿದೆ; ಫಲಕ್ಕೆ ಅಲ್ಲ, ಎನ್ನುವುದು ಪ್ರತಿಯೊಬ್ಬರಿಗೂ ಬದುಕಿನಲ್ಲಿ ಅತ್ಯಂತ ದೊಡ್ಡ ಸ್ವಾತಂತ್ರ್ಯವನ್ನು ಕೊಡಬಲ್ಲತದ್ದು.

ಇಂದಿನ ಕಾಲದಲ್ಲಿ ಆತ್ಮವಿಶ್ವಾಸ ಕುಸಿದಿದೆ. ನಾನು ಸಾಧ್ಯವಿಲ್ಲ, ಎಂಬ ಭಾವನೆ ಚಿಲುಮೆಯಂತೆ ಹರಿದು ಬರುತ್ತಿದೆ. ಸಮಾಜದ ಒತ್ತಡ, ಕುಟುಂಬದ ನಿರೀಕ್ಷೆ, ತನ್ನದೇ ಇದ್ದ ಗುರಿಗಳು ಇವೆಲ್ಲ ಗುಂಡಿನಂತೆ ಮನಸ್ಸನ್ನು ಚುಚ್ಚುತ್ತಿವೆ. ಗೀತೆ, ಉದ್ಧರೇದಾತ್ಮನಾತ್ಮಾನಂ, ಎಂದು ಹೇಳುತ್ತದೆ. ನಿನ್ನನ್ನು ನೀನೆ ಎತ್ತಿಕೊಳ್ಳು. ಆತ್ಮವಿಶ್ವಾಸಕ್ಕೆ ಈಷ್ಟೊಂದು ಪ್ರಚೋದನೆ ಬೇರೆ ಯಾವುದೂ ಕೊಡಲಾರದು. ಗೀತೆಯ ಜ್ಞಾನ ಮನುಷ್ಯನೊಳಗಿನ ನಿಧಾನವಾಗಿ ಕರಗುತ್ತಿರುವ ಧೈರ್ಯಕ್ಕೆ ಹೊಸ ಜೀವ



ನೀಡುತ್ತದೆ.

ಸಮಾಜದ ವೇಗದ ಹಿಂದೆ ಮನುಷ್ಯನು ನಾಗರಿಕತೆಯನ್ನು ಪಡೆಯುತ್ತಿದ್ದರೂ, ಮೌಲ್ಯಗಳನ್ನು ಕಳೆದುಕೊಂಡಿದ್ದಾನೆ. ಕರುಣೆ, ವಿನಯ, ಸಹನೆ, ಸಂಯಮ ಇವು ಮನುಷ್ಯನ ಹೃದಯದಲ್ಲಿ ನಿಧಾನವಾಗಿ ಅಳಿದು ಹೋಗುತ್ತಿವೆ. ಸಂಬಂಧಗಳಲ್ಲಿ ಬಿರುಕುಗಳಾಗುತ್ತಿವೆ. ಮನುಷ್ಯನ ಮಾತು ಮೃದುತ್ವವನ್ನು ಕಳೆದುಕೊಂಡಿದೆ; ಧಾವಂತ, ಕೋಪ, ಅಹಂಕಾರ ಇವು ಜೀವನದ ಆಧಾರವಾಗುತ್ತಿದೆ. ಗೀತೆಯ ಬೋಧನೆ ಮನುಷ್ಯನ ಮನಸ್ಸಿಗೆ ಮೌನ ಮತ್ತು ಮೃದುತೆಯನ್ನು ಮತ್ತೆ ನೆನಪಿಸುತ್ತವೆ. ಗೀತೆಯ ಸಮತ್ವ ಎಂದರೆ ಕೇವಲ ಅನಂತ ಶಾಂತಿಯಲ್ಲ; ಅದು ಮನುಷ್ಯನ ನಡವಳಿಕೆಯ ಮೂಲ.

ಇಂದಿನ ಕಾಲದಲ್ಲಿ ಜನರು ಅನುಭವಿಸುತ್ತಿರುವ ಅತ್ಯಂತ ದೊಡ್ಡ ಸಮಸ್ಯೆ ಸಂಬಂಧಗಳ ಕುಸಿತ. ಗಂಡಹೆಂಡತಿ ಮಧ್ಯದ ಅಸಮಾಧಾನ, ಮಕ್ಕಳುಪೋಷಕರು ನಡುವಿನ ಬಿರುಕು, ಸ್ನೇಹಿತರ ಮಧ್ಯದ ದೂರಇವುಗಳು ಮನೆಗಳ ನೆಲೆಯನ್ನು ಅಸ್ಥಿರಗೊಳಿಸುತ್ತಿವೆ. ಕುಟುಂಬದೊಳಗಿನ ವಾತಾವರಣ ದಿನದಿಂದ ದಿನಕ್ಕೆ ಭಾರವಾಗಿ ಬದಲಾಗುತ್ತಿದೆ. ಗೀತೆಯ ಸಂದೇಶ ಕುಟುಂಬಗಳಿಗೆ ಅಮೃತದಂತೆ. ದ್ವೇಷವನ್ನು ಬಿಡು, ಮಮತೆಯನ್ನು ಹೆಚ್ಚಿಸು, ಸಹನೆಯನ್ನು ಧರಿಸು. ಗೀತೆಯಲ್ಲಿರುವ ನೈತಿಕ ಮೌಲ್ಯಗಳು ಮನೆಗೆ ಮರಳಿ ಬಂದರೆ, ಶಾಂತಿ ಮನೆಯ ಮೂಲದ ಅಷ್ಟಮೂಲವಾಗುತ್ತದೆ.

ಯುವಜನತೆಗೆ ಗೀತೆಯ ಪಾಠ ಅವಶ್ಯಕ. ಅವರನ್ನು ಆವರಿಸಿರುವ ಗೊಂದಲ ಉದ್ಯೋಗ, ಸಂಬಂಧ, ಗುರಿ, ಭವಿಷ್ಯ, ತಮ್ಮದೇ ಅಸ್ತಿತ್ವ ಇವೆಲ್ಲವೂ ಅವರನ್ನು ದಿಕ್ಕುತಪ್ಪಿಸುತ್ತಿವೆ. ಗೀತೆಯ ಒಂದು ಸಾಲೇ ಇವರಿಗೆ ದಾರಿ ತೋರಿಸಲು ಸಾಕು: ಕರ್ಮಣ್ಯೇವಾಧಿಕಾರಸ್ತೇ. ಕೆಲಸ ಮಾಡು; ಉಳಿದವು ದೇವರಿಗೆ ಬಿಟ್ಟುಬಿಡು. ಈ ಮನೋಭಾವ ಯುವಕರಿಗೆ ಅಗತ್ಯ.

ಮಾನಸಿಕ ಆರೋಗ್ಯ ಇಂದು ಜಗತ್ತಿನ ದೊಡ್ಡ ಆತಂಕ. ಔಷಧಿಗಳು, ಚಿಕಿತ್ಸೆ, ಸಲಹೆಗಳು ಎಲ್ಲವೂ ಇದ್ದರೂ ಮನಸ್ಸಿಗೆ ನಿಜವಾದ ನೆಮ್ಮದಿ ಸಿಗದೆ ಜನರು ಬಳಲುತ್ತಿದ್ದಾರೆ. ಗೀತೆಯ ಧ್ಯಾನಯೋಗ, ಮನೋನಿಗ್ರಹ, ಪ್ರಾಣಾಯಾಮ, ಏಕಾಗ್ರತೆ,ಮನಸ್ಸು ಚಂಚಲವಾದಾಗ, ಆತಂಕ ಬರುವುದನ್ನು ತಡೆಯಲು ಗೀತೆಯ ಮಂತ್ರಗಳು ಔಷಧಿ.

ಇಂದಿನ ಹೊಗಳಿಕೆ, ಸದ್ದುಗದ್ದಲದ ಬದುಕಿನಲ್ಲಿ ಮನುಷ್ಯನು ಮೌನವನ್ನು ಮರೆತುಬಿಟ್ಟಿದ್ದಾನೆ. ಗೀತೆಯ ಧ್ಯಾನಪಾಠ ಯೋಗಸ್ಥಃ ಕುರು ಕರ್ಮಾಣಿ ಎಂದು ಹೇಳುತ್ತದೆ. ಮನಸ್ಸು ಸ್ಥಿರವಾಗಿಲ್ಲದಾಗ ಮನುಷ್ಯನು ತಪ್ಪಾದ ನಿರ್ಧಾರ ಮಾಡುತ್ತಾನೆ; ಧ್ಯಾನವು ಅವನೊಳಗಿನ ತಲ್ಲಣಕ್ಕೆ ಮದ್ದು. ಗೀತೆಯ ಒಬ್ಬೊಬ್ಬ ಶ್ಲೋಕ ಮನಸ್ಸಿಗೆ ಮೌನದ ಸಂದೇಶ.

ಈ ಗದ್ದಲದ ನಡುವೆ ಮನುಷ್ಯನು ದೇಹಕ್ಕೆ ಮಾತ್ರ ಗಮನಕೊಡುತ್ತಿದ್ದಾನೆ; ಆತ್ಮಕ್ಕೆ ಅಲ್ಲ. ಆತ್ಮಜ್ಞಾನ ಮನುಷ್ಯನಿಗೆ ಅತ್ಯಂತ ಮೂಲ. ನೀನು ದೇಹವಲ್ಲ; ನೀನು ಆತ್ಮ ಈ ತತ್ತ್ವ ಮನುಷ್ಯನ ಭಯಗಳನ್ನು ಕರಗಿಸುತ್ತದೆ. ಮರಣದ ಭಯ, ನಷ್ಟದ ನೋವು, ಅನಿಶ್ಚಿತತೆಯ ಕತ್ತಲೆ.ಗೀತೆಯ ಜ್ಞಾನ ಹೊರಗಿನ ಕತ್ತಲೆಯನ್ನು ತೆಗೆಯುವುದಿಲ್ಲ; ಅದು ಒಳಗಿನ ಕತ್ತಲೆಯನ್ನೇ ಕರಗಿಸುತ್ತದೆ.

ಇಂದಿನ ಸಾಮಾಜಿಕ ಬಿರುಕುಗಳು ಗಾಢವಾಗುತ್ತಿವೆ. ಧರ್ಮಭೇದ, ಜಾತಿಭೇದ, ವೈಮನಸ್ಯ, ದ್ವೇಷಇವು ಬೆಳೆಯುತ್ತಿದ್ದಂತೆ ಮನುಷ್ಯತೆ ಕುಸಿಯುತ್ತಿದೆ. ಗೀತೆಯ ಬೋಧನೆ ಲೋಕಸಂಗ್ರಹ ಸಮಾಜದ ಹಿತಕ್ಕಾಗಿ ಮನುಷ್ಯನು ಸ್ವಾರ್ಥದ ಸುತ್ತಲ್ಲದೆ ಸಮಾಜಕ್ಕಾಗಿ ಕೆಲಸ ಮಾಡಿದಾಗ ಜೀವನದ ಉದ್ದೇಶ ದೊಡ್ಡದಾಗುತ್ತದೆ. ಗೀತೆಯ ಮೌಲ್ಯಗಳು ಸಮಾಜದ ನಡುವೆ ಸೇತುವೆಯಂತೆ.

ಇಂದಿನ ಕಾಲದಲ್ಲಿ ಭಯವಿದೆ ಆರ್ಥಿಕ ಭಯ, ಭವಿಷ್ಯಭಯ, ಸಂಬಂಧಭಯ, ಆರೋಗ್ಯಭಯ. ಮನುಷ್ಯನು ತನ್ನ ಭವಿಷ್ಯವನ್ನು ಹಿಡಿಯಲು ಅಸಾಧ್ಯ. ಗೀತೆಯಲ್ಲಿರುವ ಮಾ ಶುಚಃ ಚಿಂತೆ ಮಾಡಬೇಡ ಎಂಬ ಮಾತು ಮನುಷ್ಯನ ಭಯಕ್ಕೆ ಮದ್ದು. ದೇವರಲ್ಲಿ ನಂಬಿಕೆ ಅಳಿದುಹೋಗುತ್ತಿರುವಾಗ ಗೀತೆಯ ನಂಬಿಕೆ ಜೀವನಕ್ಕೆ ಆಮ್ಲಜನಕವಾಗುತ್ತದೆ.

ಗೀತೆಯ ಅವಶ್ಯಕತೆ ಇಂದಿಗೆ ಏಕೆ ಹೆಚ್ಚಾಗಿದೆ ಎಂಬುದಕ್ಕೆ ಒಂದು ಉತ್ತರ: ಮನುಷ್ಯನು ಹೊರಗಿನ ಸಾಧನೆಗಳನ್ನು ಪಡೆದರೂ, ಒಳಗಿನ ನೆಮ್ಮದಿಯನ್ನು ಕಳೆದುಕೊಂಡಿದ್ದಾನೆ.

ಮನುಷ್ಯನು ಎಲ್ಲಾ ಯಂತ್ರಗಳನ್ನು ವಶಪಡಿಸಿಕೊಂಡಿದ್ದಾನೆ;

ಆದರೆ ಮನಸ್ಸಿನ ಯಂತ್ರವೂ ಅವನನ್ನು ವಶಪಡಿಸಿಕೊಳ್ಳುತ್ತಿದೆ.

ಅವನು ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕಂಡಿದ್ದಾನೆ;

ಆದರೆ ತನ್ನೊಳಗಿನ ಸಮಸ್ಯೆಗೆ ಪರಿಹಾರ ಕಾಣಲಾಗುತ್ತಿಲ್ಲ. ಈ ಒಳಗಿನ ಯುದ್ಧಕ್ಕೆ ಔಷಧ ಗೀತೆ.

ಈ ಆತ್ಮದ ಬಯಕೆಗೆ ದಾರಿ ಗೀತೆ.

ಈ ಮನೋವೈಜ್ಞಾನಿಕ ಗೊಂದಲಕ್ಕೆ ಪರಿಹಾರ ಗೀತೆ.

ಈ ಬದುಕಿನ ದುಃಖಕ್ಕೆ ಮದ್ದು ಗೀತೆ.

ಗೀತೆಯನ್ನು ಓದಿದರೆ ಮನುಷ್ಯನು ಜೀವನವನ್ನು ಅರ್ಥಮಾಡಿಕೊಳ್ಳುತ್ತಾನೆ.

ಗೀತೆಯನ್ನು ಕೇಳಿದರೆ ಅವನೊಳಗಿನ ಕತ್ತಲೆಗೆ ಬೆಳಕು ಬರುತ್ತದೆ. ಗೀತೆಯನ್ನು ಬದುಕಿದರೆ ಅವನ ಜೀವನವೇ ಪುನರ್ಜನ್ಮ ಪಡೆಯುತ್ತದೆ.

ಇಂದಿನ ಬದುಕಿಗೆ ಗೀತೆ ಅವಶ್ಯಕಲ

ಅದು ಶ್ವಾಸದಷ್ಟು ಅವಶ್ಯಕ.

ಗೀತೆಯಿಲ್ಲದೆ ಮನುಷ್ಯನು ದಾರಿ ಕಳೆದುಕೊಳ್ಳುತ್ತಾನೆ;

ಗೀತೆಯೊಂದಿಗೆ ಮನುಷ್ಯನು ದಾರಿಯನ್ನು ಮರುಪಡೆಯುತ್ತಾನೆ.

ಜೀವನದ ಕುರುಕ್ಷೇತ್ರ ಎಷ್ಟೇ ಗದ್ದಲವಾಗಿದ್ದರೂ,

ಒಂದು ಕೃಷ್ಣನ ನುಡಿ ಸಾಕು
ಮನಸ್ಸಿಗೆ ಶಾಂತಿ ಬರಲು,
ಬದುಕಿಗೆ ದಾರಿ ಕಾಣಲು,
ಆತ್ಮಕ್ಕೆ ನೆಲೆ ಸಿಗಲು.



ಶ್ರೀ ಪ್ರಶಾಂತ ಕುಲಕರ್ಣಿ

# ತಾಳ್ಮೆ, ಸಂತೋಷ, ನಿರ್ಲೋಭ ಮತ್ತು ದಯೆ ಬದುಕಿನ ಅರ್ಥಪೂರ್ಣ ಮೌಲ್ಯಗಳು

ಇಂದಿನ ವೇಗದ ಯುಗದಲ್ಲಿ ಮನುಷ್ಯನು ಗೆಲುವು, ಸಾಧನೆ, ಐಶ್ವರ್ಯ, ಗೌರವ , ಮನ್ನಣೆ ಇವೆಲ್ಲವನ್ನು ಕ್ಷಣದಲ್ಲಿ ಗಳಿಸಬೇಕೆಂದೇ ನಿರೀಕ್ಷಿಸುತ್ತಾನೆ. ಆದರೆ ಮನುಷ್ಯನ ನಿಜವಾದ ಬೆಳವಣಿಗೆ, ಬದುಕಿನ ಆಳದ ಜ್ಞಾನ ಮತ್ತು ಒಳಗಿನ ಸಮೃದ್ಧಿ ಕ್ಷಣದಲ್ಲಿ ಸಿಗುವುದಲ್ಲ. ಅದಕ್ಕೆ ಬೇಕಾಗಿರುವುದು ಸಮಯ, ಆಲೋಚನೆ ಮತ್ತು ಶ್ರದ್ಧೆ. ಈ ಹಿನ್ನೆಲೆಯಲ್ಲಿ ತಾಳುವಿಕೆಗಿಂತ ಸಮನಾದ ತಪಸ್ಸು ಇನ್ನೊಂದಿಲ್ಲ, ಹಾಗಾಗಿ ವಾದಿರಾಜರು ತಮ್ಮ ದಾಸ ಸಾಹಿತ್ಯದಲ್ಲಿ ತಾಳುವಿಕೆಗಿಂತನ್ಯ ತಪವು ಇಲ್ಲ ಎಂದು ಹೇಳಿರುವುದು . ಸಹಿಸಿಕೊಳ್ಳುವುದಕ್ಕಿಂತ ದೊಡ್ಡ ತಪಸ್ಸು ಬೇರೊಂದಿಲ್ಲ. ಸಂತೋಷಕ್ಕಿಂತ ಸಮನಾದ ಸುಖವಿಲ್ಲ, ಲೋಭಕ್ಕೆ ಸಮನಾದ ರೋಗವಿಲ್ಲ ಹಾಗೂ ದಯೆಗೆ ಮಿಗಿಲಾದ ಧರ್ಮವಿಲ್ಲ ಎಂಬ ಜೀವನ ಸೂತ್ರ ಎಂದಿಗಿಂತ ಇಂದು ಹೆಚ್ಚಾಗಿ ಪ್ರಸ್ತುತವಾಗಿದೆ.

ವರ್ತಮಾನದ ಗೊಂದಲಮಯ ಸಾಮಾಜಿಕ ವಾತಾವರಣದಲ್ಲಿ, ಅನಿಶ್ಚಿತ ಉದ್ಯೋಗದ ಕ್ಷೇತ್ರದಲ್ಲಿ, ಸಂಬಂಧಗಳ ಬದಲಾವಣೆಯ ಮಧ್ಯೆ, ಮಾನವನ ಬದುಕಿನ ಸಮತೋಲನ ಕಳೆದುಹೋಗುತ್ತಿರುವ ಸಂದರ್ಭದಲ್ಲಿ ಈ ಚಿಂತನೆಗಳು ಮಾರ್ಗದರ್ಶಕವಾಗುತ್ತವೆ. ಈ ಲೇಖನದ ಮೂಲಕ ಈ ನಾಲ್ಕು ಮೌಲ್ಯಗಳ ಕಾಲಾತೀತ ಶಕ್ತಿ ಮತ್ತು ಅವುಗಳು ಇಂದಿನ ಸಮಾಜಕ್ಕೆ ಇರುವ ಅಗತ್ಯತೆಯನ್ನು ವಿಶ್ಲೇಷಿಸೋಣ. .

ತಾಳ್ಮೆ: ಆಧುನಿಕ ಯುಗದ ಮರೆತುಹೋಗಿರುವ ತಪಸ್ಸು ಪ್ರಪಂಚವೇ ವೇಗದತ್ತ ಓಡುತ್ತಿರುವಾಗ, ಎಲ್ಲರಲ್ಲೂ ತಾಳ್ಮೆಯ ಮಹತ್ವ ಕಡಿಮೆಯಾಗಿದೆ ಎಂಬ ಭ್ರಮೆ ಮೂಡಿದರೆ ಅಚ್ಚರಿಯೇನಿಲ್ಲ . ವೇಗದ ಇಂಟರ್ನೆಟ್, ಬೆರಳ ತುದಿಯಲ್ಲಿರುವ , ಬೇಕೆಂದೊಡನೆ ತಕ್ಷಣ ನೀಡುವ ಮಾಹಿತಿ ತಂತ್ರಜ್ಞಾನ, ಎಲ್ಲ ಮಾಹಿತಿ ಬಟಬಯಲಾಗಿರುವ ಸಾಮಾಜಿಕ ಜಾಲತಾಣ , ಮಾಧ್ಯಮಗಳು ಇವು ಎಲ್ಲವೂ ಮಾನವನ ಮನದಲ್ಲಿ ಕಾಯುವಿಕೆ ವ್ಯರ್ಥ ಎಂಬ ಭಾವ ಮೂಡಿಸುತ್ತಿವೆ. ಆದರೆ ಮಾನವ ಇತಿಹಾಸದಲ್ಲಿ ಸಂಭವಿಸಿದ ಯಾವುದೇ ಮಹಾನ್ ಸಾಧನೆಯ ಹಿಂದೆ ತಾಳ್ಮೆ ಮತ್ತು ನಿರಂತರ ಪ್ರಯತ್ನಗಳ ಕಥೆಯೇ ಇದೆ ಎಂಬುದನ್ನು ಎಲ್ಲರೂ ಮರೆಯುತ್ತಿರುವುದು ದುರ್ದೈವ .

ನೆಲದಲ್ಲಿ ಬಿತ್ತಿದ ಬೀಜ ಬೆಳೆದು , ಮಣ್ಣನ್ನು ಭೇದಿಸಿ ಮೊಳಕೆ ಹೊರಬರುವವರೆಗೂ ಪ್ರಕೃತಿಯೇ ಕಾಯುತ್ತದೆ. ಆದರೆ ಮನುಷ್ಯ ಮಾತ್ರ ತನ್ನ ಕನಸುಗಳು ತಕ್ಷಣ ಸಾಕಾರವಾಗಬೇಕೆಂದು ಬಯಸುತ್ತಾನೆ. ಈ ಅಸಹನೆಯ ಕಾರಣಕ್ಕಾಗಿಯೇ ಬಹುತೇಕ ಜನರು ಯಶಸ್ಸಿನ ಹಾದಿಯಲ್ಲಿ ಸೋಲುತ್ತಾರೆ.

ತಾಳ್ಮೆ ಎಂದರೆ ಕೈಕಟ್ಟಿ ಕುಳಿತುಕೊಳ್ಳುವುದು ಅಲ್ಲ; ಅದು ಸಹಿಸುವ ಶಕ್ತಿ ಮತ್ತು ನಿರಂತರ ಪ್ರಯತ್ನಕ್ಕೆ ಬೆಂಬಲ ನೀಡುವ ಮನೋಬಲ. ಜೀವನದಲ್ಲಿ ತೊಂದರೆ ಬಂದಾಗ ಬಚಾವಾಗುವುದೂ, ಸೋತಾಗ ಬೆಳೆಯುವುದೂ ತಾಳ್ಮೆಯಿಂದಲೇ.

ಮನಶ್ಶಾಸ್ತ್ರಜ್ಞರ ಸಂಶೋಧನೆಗಳು ಹೇಳುವುದೇನೆಂದರೆ , ತಾಳ್ಮೆಯಿರುವವರು:

- **ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ**
- **ಒತ್ತಡಕ್ಕೆ ತುತ್ತಾಗುವುದಿಲ್ಲ**
- **ದೀರ್ಘಕಾಲೀನ ಗುರಿಗಳನ್ನು ಸಾಧಿಸುತ್ತಾರೆ**
- **ಸಂಬಂಧಗಳನ್ನು ಚೆನ್ನಾಗಿ ನಿರ್ವಹಿಸುತ್ತಾರೆ**

ಇವೆಲ್ಲ ಕಾರಣಗಳಿಂದಲೇ ಪ್ರಾಚೀನ ತತ್ತ್ವಗಳು ತಾಳ್ಮೆಯನ್ನು ತಪಸ್ಸು ಎಂದಿವೆ. ಏಕೆಂದರೆ ನಮ್ಮ ಅಶಾಂತ ಮನಸ್ಸನ್ನು ನಿಯಂತ್ರಿಸಿ, ಅವಸರವನ್ನು ಜಿಗುಪ್ಸೆಗೊಳಿಸಿ, ಕಾಲಕ್ಕೆ ಸಂಪೂರ್ಣ ಶರಣಾಗುವುದು ಒಂದು ರೀತಿಯ ತಪಸ್ಸೇ ಸರಿ. ಹಾಗಾಗಿ ತಾಳ್ಮೆ ವಹಿಸುವುದು ಎಲ್ಲರೂ ಅನುಸರಿಸುವುದು ತುಂಬಾ ಮುಖ್ಯ . ತಾಳ್ಮೆ ಎಂದರೆ ನಿಲ್ಲುವಿಕೆ ಅಲ್ಲ; ಅದು ನಿಧಾನವಾಗಿ, ಆದರೆ ನಿಸ್ಸಂದೇಹವಾಗಿ ಸಾಗುತ್ತಿರುವ ನದಿ. ಅದು ಹೊಗಳಿಕೆ ಬೇಡುವುದಿಲ್ಲ, ಬಯಕೆಗಳ ಗದ್ದಲದಲ್ಲೂ ಬಿರುಸಿಲ್ಲ. ಗಾಳಿಯ ಎದುರು ನಿಂತ ಮರ ಬಾಗಿ ನಿಂತು ಬದುಕನ್ನು ಉಳಿಸಿಕೊಳ್ಳುವಂತೆ, ತಾಳ್ಮೆ ಮನುಷ್ಯನನ್ನು ಪುನಃ ಪುನಃ ಉಳಿಸುತ್ತದೆ. ತಾಳ್ಮೆಯಿಲ್ಲದ ಮನುಷ್ಯ ಬಿರುಗಾಳಿಯಲ್ಲಿ ನಿಂತ ದೀಪದಂತೆಬೆಳಕು ಇದ್ದರೂ ಕ್ಷಣಿಕ. ತಾಳ್ಮೆಯಿರುವ ಮನುಷ್ಯ ಮಳೆಯಲ್ಲೂ ನಿಂತಿರುವ ಗಿರಿಶಿಖರಅಚಲ, ನಿಶ್ಚಲ. ತಾಳ್ಮೆ ಜೀವನದ ದೊಡ್ಡ ಶಕ್ತಿ. ಪರಿಸ್ಥಿತಿಗೆ ತಕ್ಷಣ ಪ್ರತಿಕ್ರಿಯಿಸುವ ಬದಲು ಕೆಲವು ಕ್ಷಣ ನಿಶ್ಶಬ್ದವಾಗಿರಿ; ಆಳವಾದ ಉಸಿರಾಟ ಮಾಡುವುದು ಮನಸ್ಸನ್ನು ನಿಧಾನಗೊಳಿಸುತ್ತದೆ. ನಿಯಂತ್ರಣಕ್ಕೆ ಬಾರದ ವಿಷಯಗಳನ್ನು ಒಪ್ಪಿಕೊಳ್ಳುವುದು ತಾಳ್ಮೆಯ ಮೂಲ. ಟ್ರಾಫಿಕ್, ವಿಳಂಬ, ಜನರ ವರ್ತನೆಇವುಗಳ ಮೇಲೆ ನಮ್ಮ ಹಿಡಿತವಿಲ್ಲ. ಇದನ್ನು ಅರಿತುಕೊಳ್ಳುವುದೇ ತಾಳ್ಮೆಯ ನಿಜವಾದ ಅಭ್ಯಾಸ.

ಸಂತೋಷ: ಸಂತೋಷಕ್ಕೆ ಸಮಾನವಾದ ಸುಖವಿಲ್ಲ :ಮಾನವ ಜೀವನದ ಅಂತಿಮ ಗುರಿ ಏನು ಎಂಬ ಪ್ರಶ್ನೆಗೆ ಸಾವಿರಾರು ವರ್ಷಗಳ ಚಿಂತನೆ, ತತ್ತ್ವ, ಶಾಸ್ತ್ರಗಳಲ್ಲಿ ಒಂದು ಸಾಮಾನ್ಯ ಉತ್ತರ ಸಿಗುತ್ತದೆ . ಅದೇ ಸಂತೋಷ. ಹಣ, ಮನೆ, ಸ್ಥಾನಮಾನ, ಅಧಿಕಾರ, ಪ್ರಶಂಸೆ ಎಲ್ಲವೂ ಒಬ್ಬರಿಗೆ ಸುಖ ನೀಡಬಹುದು, ಆದರೆ ನಿಜವಾದ ಸಂತೋಷ ನೀಡುವುದೇ ಇಲ್ಲ. ಏಕೆಂದರೆ ವಸ್ತುಗಳಿಂದ ದೊರೆಯುವ ಸುಖ ಕ್ಷಣಿಕ, ಆದರೆ ಮನಸ್ಸಿನಿಂದ ಹುಟ್ಟುವ ಸಂತೋಷ ಶಾಶ್ವತ. ಅದಕ್ಕೇ ಸಂತೋಷಕ್ಕೆ ಸಮಾನವಾದ ಸುಖವಿಲ್ಲ ಎಂಬ ಮಾತು ಕಾಲಾನೂಕಾಲಕ್ಕೆ ನಿಂತಿರುವ ಶಾಶ್ವತ ಸತ್ಯ.

ಸುಖ ಮತ್ತು ಸಂತೋಷ ಎರಡರ ಮಧ್ಯೆಯಿರುವ ಸೂಕ್ಷ್ಮ ವ್ಯತ್ಯಾಸ : ಒಬ್ಬನು ಹೊಸ ಕಾರನ್ನು ಕೊಂಡುಕೊಂಡಾಗ ಸುಖವಾಗುತ್ತದೆ; ಆದರೆ ಅದು ಕೆಲವು ದಿನಗಳ ಬಳಿಕ ಸಹಜವಾಗಿಬಿಡುತ್ತದೆ.

ಒಬ್ಬನು ಹೊಸ ಮನೆಯನ್ನು ಕಟ್ಟಿದಾಗ ಹೆಮ್ಮೆಯ ಅನುಭವ; ಆದರೆ ಸಮಯವಾದಾಗ ಅದೂ ಸಾಮಾನ್ಯವಾಗುತ್ತದೆ.

ಇವು ಸಾಮಾನ್ಯ ಸುಖಗಳು. ಬಾಹ್ಯ ವಸ್ತುಗಳಿಂದ ದೊರೆಯುವವು. ಆದರೆ ಸಂತೋಷ ಅದು ಮನಸ್ಸಿನ ಶಾಂತಿಯಿಂದ ಬರುತ್ತದೆ. ತೃಪ್ತಿಯಿಂದ ಬರುತ್ತದೆ. ಹೊಂದಿರುವುದನ್ನು ಮೆಚ್ಚುವ ಭಾವದಿಂದ ಬರುತ್ತದೆ. ಸುಖ ಹೊರಗಿನಿಂದ ಬರುತ್ತದೆ; ಸಂತೋಷ ಒಳಗಿನಿಂದ ಹುಟ್ಟುತ್ತದೆ.

**ಸಂತೋಷವನ್ನು ಕೊಡುವ ಮೂಲಗಳು:**

- **ಸಮಾಧಾನ ಮತ್ತು ತೃಪ್ತಿ (Contentment): ಹೆಚ್ಚು-ಹೆಚ್ಚು ಬೇಕು ಎನ್ನುವ ಬದುಕು ನಿರಂತರ ಅಸಮಾಧಾನಕ್ಕೆ ಕಾರಣ. ಆದರೆ ಇದು ಸಾಕು, ನನಗೆ ಬೇಕಾದಷ್ಟು ಇದೆ ಎನ್ನುವ ಸಮಾಧಾನ ಮನಸ್ಸನ್ನು ಹಗುರಗೊಳಿಸುತ್ತದೆ. ತೃಪ್ತಿ ಇಲ್ಲದವನಿಗೆ ಕೋಟ್ಯಂತರ ಇದ್ದರೂ ದುಃಖ; ಸಮಾಧಾನ ಇರುವವನಿಗೆ ಸಾವಿರ ಇದ್ದರೂ ಸಂತೋಷ.**
- **ಸಂಬಂಧಗಳ ಮೌಲ್ಯ : ಕುಟುಂಬದ ನಗು, ಸ್ನೇಹಿತರ ನಿಷ್ಠೆ, ಮಕ್ಕಳ ಪ್ರೀತಿಇವುಗಳನ್ನು ಖರೀದಿಸಲು ಸಾಧ್ಯವಿಲ್ಲ. ವಿಶ್ವದಲ್ಲೇ ಅತಿ ದೊಡ್ಡ ಸುಖವೇ ಅಂತರಂಗದ ಸಂಬಂಧಗಳು. ಮನಸ್ಸಿಗೆ ಆರಾಮ ಕೊಡುವ ಜನರ ಸುತ್ತ ಇದ್ದರೆ ಸಂತೋಷ ಸಹಜವಾಗಿ ಬರುತ್ತದೆ.**
- **ಆರೋಗ್ಯ: ಮೌಲ್ಯಮಾಪನದ ಮೊದಲ ಅಂಶ :ಹಣ ಕಳೆದುಹೋದರೆ ಮರುಕಳಿಸಬಹುದು; ಮನೆ ಕಳೆದುಹೋದರೂ ಕಟ್ಟಬಹುದು; ಆದರೆ ಆರೋಗ್ಯ ಕಳೆದುಹೋದರೆ ಉಳಿದೆಲ್ಲವೂ ಅರ್ಥಹೀನ. ಶರೀರ ಮತ್ತು ಮನಸ್ಸು ಚೆನ್ನಾಗಿದ್ದರೆ ಜೀವನವೇ ಹಬ್ಬ. ಆದ್ದರಿಂದ ಆರೋಗ್ಯವೇ ಸಂತೋಷದ ಮೂಲ ಬಂಡವಾಳ.**
- **ಒಳಗಿನ ಶಾಂತಿ ಮತ್ತು ಸ್ವೀಕಾರ : ಸಾಧಿಸದ್ದನ್ನು ಒಪ್ಪಿಕೊಳ್ಳುವುದು, ತಪ್ಪುಗಳನ್ನು ಕ್ಷಮಿಸುವುದು, ಇತರರನ್ನು ಅರ್ಥ ಮಾಡಿಕೊಳ್ಳುವುದು. ಇವು ಮನಸ್ಸಿಗೆ ಆರಾಮ ಕೊಡುತ್ತದೆ. ಶಾಂತಿ ಇರುವ ಜಾಗದಲ್ಲೇ ಸಂತೋಷ ಬೆಳೆಯುತ್ತದೆ.**


**ಏಕೆ ಸಂತೋಷವೇ ಅತಿ ದೊಡ್ಡ ಸುಖ** ಸಂತೋಷ ಕ್ಷಣಿಕವಲ್ಲ, ಅದು ದೀರ್ಘಕಾಲ ಇರುತ್ತದೆ . ಹೊರಗಿನ ಪರಿಸ್ಥಿತಿಯಿಂದ ಕಡಿಮೆ ಬದಲಾಗುತ್ತದೆ. ಮನುಷ್ಯನ ಮನಸ್ಸನ್ನು, ವ್ಯಕ್ತಿತ್ವವನ್ನು, ಬದುಕಿನ ಗುಣಮಟ್ಟವನ್ನು ಬದಲಾಯಿಸುತ್ತದೆ. ಹಣ, ಸ್ಥಾನಮಾನ ಕಳೆದುಹೋದರೂ ಸಂತೋಷ ಉಳಿಯುತ್ತದೆ. ಸುಖ ಜೀವನವನ್ನು ಸುಂದರಗೊಳಿಸಬಹುದು . ಆದರೆ ಸಂತೋಷ ಜೀವನಕ್ಕೆ ಅರ್ಥ ಕೊಡುತ್ತದೆ.

**ಸಂತೋಷವನ್ನು ಹೇಗೆ ಬೆಳೆಸಬಹುದು**

- **ಪ್ರತಿದಿನ ಕೃತಜ್ಞತೆ ಅಭ್ಯಾಸ ಮಾಡುವುದು .**
- **ಇತರರೊಂದಿಗೆ ಹೋಲಿಕೆ ಮಾಡುವದನ್ನು ನಿಲ್ಲಿಸುವುದು. .**
- **ಸರಳ ವಿಚಾರಗಳಿಂದ ಸಂತೋಷ ಪಡೆಯುವ ಮನೋಭಾವ ಬೆಳೆಸಿಕೊಳ್ಳುವುದು.**
- **ಪ್ರಕೃತಿಯೊಂದಿಗೆ ಸಮಯ ಕಳೆಯುವುದು**
- **ನಗು, ಹಾಸ್ಯ, ಸಕಾರಾತ್ಮಕ ಚಿಂತನೆಗಳನ್ನು ದಿನನಿತ್ಯದ ಭಾಗವಾಗಿಸಿಕೊಳ್ಳುವುದು.**
- **ನೀವು ಪ್ರೀತಿಸುವ ಕೆಲಸಗಳಿಗೆ ಸಮಯ ಕೊಡುವುದು .** ಇವುಗಳು ಹೊರಗಿನಿಂದ ಬರುವ ಸುಖವನ್ನು ಅವಲಂಬಿಸದೆ, ಒಳಗಿನ ಮನಸ್ಸನ್ನು ಸಮೃದ್ಧಗೊಳಿಸುತ್ತವೆ.

**ಲೋಭ:** ಮನುಷ್ಯನ ಜೀವನದಲ್ಲಿ ಶತ್ರುಗಳು ಹೊರಗಿನಿಂದ ಮಾತ್ರ ಬರುವುದಿಲ್ಲ; ಬಹುತೇಕ ಬಾರಿ ಅವು ನಮ್ಮೊಳಗೇ ಹುಟ್ಟುತ್ತವೆ. ಅದರಲ್ಲಿ ಅತ್ಯಂತ ಅಪಾಯಕಾರಿದ್ದು ಲೋಭ. ದೇಹಕ್ಕೆ ತಗುಲುವ ರೋಗಗಳು ಔಷಧಿಯಿಂದ ಗುಣವಾಗಬಹುದು, ಆದರೆ ಮನಸ್ಸಿಗೆ ತಗುಲುವ ಲೋಭ ಎಂಬ ರೋಗ ಸರಿಯಾದ ಜ್ಞಾನ ಮತ್ತು ಜಾಗೃತಿಯಿಂದ ಮಾತ್ರ ಗುಣವಾಗುತ್ತದೆ. ಈ





ಕಾರಣಕ್ಕೇ ಲೋಭಕ್ಕಿಂತ ಕೆಟ್ಟ ರೋಗವೇ ಇಲ್ಲ ಎಂದು ಶಾಶ್ವತ ಸತ್ಯವಾಗಿ ಎಲ್ಲ ತತ್ತ್ವಗಳು ಹೇಳಿವೆ.

ಲೋಭದ ಮೂಲ: ಮನಸ್ಸಿನ ಅಪೂರ್ಣತೆಯ ಭಾವನೆ : ಲೋಭ ಯಾವಾಗ ಹುಟ್ಟುತ್ತದೆ ಮನಸ್ಸು ಇದು ಬೇಕು, ಇನ್ನೂ ಬೇಕು, ಸಾಕಾಗಿಲ್ಲ ಎಂದು ಕಿರುಚುವಾಗ. ವಸ್ತು, ಹಣ, ಸ್ಥಾನಮಾನ, ಪ್ರಶಂಸೆ, ಅಧಿಕಾರ ಇವುಗಳ ಮೇಲೆ ಅತಿಯಾದ ಬಯಕೆ ಉಂಟಾದಾಗ, ಮನುಷ್ಯ ತನ್ನ ಮೌಲ್ಯಗಳು, ಸಂಬಂಧಗಳು, ಶಾಂತಿ ಎಲ್ಲವನ್ನೂ ಕಳೆದುಕೊಳ್ಳುತ್ತಾನೆ. ಲೋಭದ ಚಕ್ರ ಹೀಗೆ ನಡೆಯುತ್ತದೆ. ಒಂದು ಬಯಕೆ ಪೂರೈಸಿದರೆ ತಾತ್ಕಾಲಿಕ ಸಂತೋಷ. ಶೀಘ್ರದಲ್ಲೇ ಮತ್ತೊಂದು ಬಯಕೆ ಹುಟ್ಟುತ್ತದೆ. ಅದನ್ನು ಪಡೆಯಲು ಅತಿಯಾದ ತವಕ. ಪೂರೈಸಿದರೂ ಮನಸ್ಸು ಖಾಲಿಯೇ. ಇದು ನಿಜವಾದ ರೋಗದ ಚಕ್ರಕ್ಕಿಂತಲೂ ಅಪಾಯಕಾರಿ, ಏಕೆಂದರೆ ಇದು ಅತೃಪ್ತಿಯ ಶಾಶ್ವತ ಸ್ಥಿತಿ. ಲೋಭದ ಪರಿಣಾಮ , ಮನಸ್ಸಿನ ಶಾಂತಿ ಕಳೆದುಹೋಗುವುದು : ಲೋಭಕ್ಕೆ ಒಳಗಾದ ವ್ಯಕ್ತಿಗೆ ಸಂತೋಷ ಮತ್ತು ಸಮಾಧಾನ. ಎಂದಿಗೂ ಸಿಗುವುದಿಲ್ಲ.

ಲೋಭದ ಪರಿಣಾಮಗಳು: ನಿರಂತರ ಆತಂಕ ಮತ್ತು ಭಯ. ಈರ್ಷೆ: ಇತರರ ಯಶಸ್ಸು ಕಂಡು ಕರುಬುವುದು. ಸಂಬಂಧಗಳ ಕುಸಿತ: ಹಣಲಾಭಕ್ಕಾಗಿ ಮನುಷ್ಯರನ್ನು ತನ್ನ ಸ್ವಾರ್ಥಕ್ಕೆ ಉಪಯೋಗಿಸುವ ಸ್ವಭಾವ

ನೀತಿಯ ಕುಸಿತ: ಸುಳ್ಳು, ಮೋಸ, ದ್ರೋಹ ಇವು ಅಸಹಜವಲ್ಲ, ಸಹಜವಾಗುತ್ತದೆ.

ಸಮಾಜದ ಮಟ್ಟದಲ್ಲಿ ಲೋಭ : ದುರುಳತನದ ಬೀಜ : ಲೋಭ ವೈಯಕ್ತಿಕ ಸಮಸ್ಯೆಯಲ್ಲ; ಇದು ಸಮಾಜವನ್ನೇ ಕುಸಿತಗೊಳಿಸುವ ಶಕ್ತಿ. ಭ್ರಷ್ಟಾಚಾರದ ಪೆಡಂಬೂತವಾಗಿರುವುದೇ ಲೋಭದಿಂದ.ದರೋಡೆ, ಕಳ್ಳತನ, ಕಪಟ ಇವೆಲ್ಲವೂ ಇರುವುಸು ಲೋಭದಿಂದ . ಇಂದಿನ ಪರಿಸರ ಹಾನಿ, ನೈಸರ್ಗಿಕ ಸಂಪನ್ಮೂಲಗಳ ದುರುಪಯೋಗಇವೆಲ್ಲ ಲಾಭದ ಲೋಭ.

ಲೋಭದಿಂದ ಹೊರಬರುವುದು ಹೇಗೆ : ಲೋಭಕ್ಕೆ ಪರಿಹಾರಗಳಿವೆ, ಆದರೆ ಅವು ಮನಸ್ಸಿನ ಜಾಗೃತಿಯ ನಿರಂತರ ಅಭ್ಯಾಸಗಳಿಂದ ಮಾತ್ರ ಸಾಧ್ಯ.

- **ಸಾಕು ಎಂಬ ಭಾವನೆ (Contentment) : ಸಂತೋಷ ಎಂದರೆ ಹೆಚ್ಚು ಹೊಂದಿರುವುದು ಅಲ್ಲ; ಬೇಕಾದಷ್ಟು ಇದ್ದಾಗ. ಪ್ರತಿದಿನ ನನಗೆ ಭಗವಂತ ಕೊಟ್ಟಿರುವುದು ಸಾಕು ಎಂಬ ಮನಸ್ಥಿತಿ ರೂಢಿಸಿಕೊಳ್ಳಬೇಕು . 2. ನೀಡುವ ಅಭ್ಯಾಸ (Giving) : ದಾನ, ಸಮಯ, ಸಹಾಯ ಏನೇ ಆಗಿರಲಿ, ನೀಡುವುದು ಮನಸ್ಸನ್ನು ವಿಸ್ತರಿಸುತ್ತದೆ. ಲೋಭ ಕಣ್ಣನ್ನು ಕಿರಿದಾಗಿಸುತ್ತದೆ; ದಾನ ಹೃದಯವನ್ನು ವಿಶಾಲವಾಗಿಸುತ್ತದೆ .**
- **ಬಯಕೆಗಳ ಮೇಲೆ ಪ್ರಶ್ನೆ ಹಾಕುವುದು : ಇದು ನನಗೆ ನಿಜವಾಗಿಯೂ ಬೇಕೆ**
- **ಇದಿಲ್ಲದೆ ನಾನು ಬದುಕಲಾರೆನೆ ಎಂಬ ಪ್ರಶ್ನೆ ಹಾಕಿಕೊಂಡರೆ ಬಹುತೇಕ ಬಯಕೆಗಳು ಅಪ್ರಯೋಜಕ ಎಂದು ಮನಸ್ಸೇ ಹೇಳುತ್ತದೆ.**
- **ಸರಳ ಜೀವನ ಉನ್ನತ ಚಿಂತನೆ : ಕನಿಷ್ಠ ಭೌತಿಕ ಆಸೆಗಳು; ಗರಿಷ್ಠ ಮೌಲ್ಯಗಳು, ಜ್ಞಾನ, ಸಂಬಂಧಗಳು ಇವು ಗಳಿಸಿದಾಗ ಮಾತ್ರ ಮನಸ್ಸಿನ ಒಳಗಿನ ಖಾಲಿ ಜಾಗ ತುಂಬುತ್ತದೆ.**

ಲೋಭವು ದೇಹದ ರೋಗಕ್ಕಿಂತ ಅಪಾಯಕಾರಿ, ಏಕೆಂದರೆ ಅದು ಆತ್ಮದ ಆರೋಗ್ಯವನ್ನು ಹಾಳುಮಾಡುತ್ತದೆ. ಹಣ, ಶ್ರೀಮಂತಿಕೆ, ಸ್ಥಾನಮಾನ ಚಿಟಟ ರಠಠಜ, ಛಣಣ ಠಟಟಥಿ ತ್ರಿಜಟಿ ಣುಜಥಿ ಜಡಿತಜ ಟುಜಿಜ, ಟಿಣ ಛಿಠಟಣಡಿಠಟ ಟುಜಿಜ. ಲೋಭ ಮನುಷ್ಯನನ್ನು ದಾಸನನ್ನಾಗಿಸುತ್ತದೆ; ಸಮಾಧಾನ ಅವನನ್ನು ರಾಜನನ್ನಾಗಿಸುತ್ತದೆ.

ದಯೆ: ಮನುಷ್ಯತ್ವದ ಪರಮ ಧರ್ಮ : ಸಮಾಜದ ಬಲ, ಮಾನವನ ನಿಜವಾದ ಅಸ್ತಿತ್ವ, ನಾಗರಿಕತೆಯ ಮೂಲವೇ ದಯೆ . All begin with compassion.

ಮನುಷ್ಯ ಎಷ್ಟೇ ಜ್ಞಾನ ಸಂಪನ್ನನಾಗಿದ್ದರೂ, ಎಷ್ಟೇ ಧನ ಸಂಪಾದನೆ ಮಾಡಿದ್ದರೂ , ಎಷ್ಟೇ ಸಾಮರ್ಥ್ಯ ಹೊಂದಿದ್ದರೂ ದಯೆ ಇಲ್ಲದ ಮನುಷ್ಯ ಪರಿಪೂರ್ಣನಾಗಲು ಸಾಧ್ಯವಿಲ್ಲ. ದಯೆ ಎಂದರೆ ಕೇವಲ ಕರುಣೆ ಅಲ್ಲ; ಅದು ತನ್ನಲ್ಲಿರುವ ಒಳ್ಳೆಯದನ್ನು ಮತ್ತೊಬ್ಬರ ಜೊತೆ ಹಂಚಿಕೊಳ್ಳುವ ಶಕ್ತಿ. ದಯೆ ಮನುಷ್ಯನೊಳಗಿನ ಆಳದ ಬೆಳಕನ್ನು ಹೊರಗೆ ಹರಡುವ ಗುಣ. ದಯೆಯ ಮಹತ್ವವನ್ನು ಪೌರಾಣಿಕ, ತತ್ತ್ವಶಾಸ್ತ್ರೀಯ, ಧಾರ್ಮಿಕ ಪರಂಪರೆಗಳು ಹೀಗೆ ಎತ್ತಿ ಹೇಳಿವೆ : ಉಪನಿಷತ್ತುಗಳು ದಯಾಧರ್ಮಃ ಪರೋ ಧರ್ಮಃ ಎಂದು ಹೇಳಿವೆ

ಬುದ್ಧನು ದಯೆಯನ್ನು ಪರಮ ಜ್ಞಾನವೆಂದಿದ್ದಾನೆ.

ಬಸವಣ್ಣನವರು ದಯೆಯೇ ಧರ್ಮದ ಮೂಲವಯ್ಯ ಎಂದಿದ್ದಾರೆ. ದಯೆ ಬಂಧಗಳನ್ನೂ, ಸಮಾಜವನ್ನೂ, ಮಾನವ ಸಂಬಂಧಗಳನ್ನೂ ಬಲಪಡಿಸುತ್ತದೆ. ದುಃಖದಲ್ಲಿರುವವನಿಗೆ ಬದುಕಿನ ಆಶಾಕಿರಣ ನೀಡುತ್ತದೆ. ಜನರಲ್ಲಿ ನಂಬಿಕೆಯನ್ನು ಹುಟ್ಟಿಸುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಮನುಷ್ಯನನ್ನು ಮನುಷ್ಯನಾಗಿಯೇ ಇಡುತ್ತದೆ. ದಯೆ ಎಂದರೆ ಸಹಾಯ ಹಸ್ತ ಚಾಚುವುದು ಮಾತ್ರವಲ್ಲ. ದಯೆ ಎಂದರೆ ಹೃದಯವನ್ನು ತೆರೆಯುವುದು. ಯಾವಾಗ ನಾವು ಮತ್ತೊಬ್ಬರ ನೋವನ್ನು ನೋಡಿ ಮೌನವಾಗುತ್ತೇವೆಯೋಅದೇ ಕ್ಷಣದಲ್ಲಿ ದಯೆ ನಮ್ಮೊಳಗೆ ಉಸಿರಾಡುತ್ತದೆ . ದಯೆ ಪ್ರತಿಫಲವನ್ನು ಕೇಳುವುದಿಲ್ಲ, ಕೃತಜ್ಞತೆಯನ್ನು ನಿರೀಕ್ಷಿಸುವುದಿಲ್ಲ. ದಯೆ ಮನುಷ್ಯನೊಳಗಿನ ಮೃದು ಬೆಳಕು. ದಯೆ ನಮ್ಮೊಳಗಿನ ಗರ್ವವನ್ನು ಕರಗಿಸುವ ಲಾವಣ್ಯ. ದಯೆ ಮಾನವಕುಲವನ್ನು ಬಂಧಿಸುವ ಅಸ್ಪಷ್ಟ ನೂಲು. ಜೀವನದಲ್ಲಿ ಎಷ್ಟು ಜ್ಞಾನ ಸಿಕ್ಕರೂ, ಎಷ್ಟು ಹಣ ಗಳಿಸಿದರೂ, ಎಷ್ಟು ಸಂಬಂಧಗಳಿದ್ದರೂ, ಈ ನಾಲ್ಕು ಮೌಲ್ಯಗಳಿಲ್ಲದೆ ಮನುಷ್ಯನ ಬದುಕಿಗೆ ತಳಹದಿ ಸಿಗುವುದಿಲ್ಲ. ಈ ನಾಲ್ಕು ಮೌಲ್ಯಗಳೇ ಜೀವನದ ಸಮತೋಲನ.



ಸ್ವಾಮಿನಾಥನ್
ಬೆಂಗಳೂರು

ಇಂದು ತಂತ್ರಜ್ಞಾನ ವೇಗವಾಗಿ ಬದಲಾಗುತ್ತಿದ್ದರೂ, ಉದ್ಯೋಗ ಕ್ಷೇತ್ರದಲ್ಲಿ ಸ್ಪರ್ಧೆ ಹೆಚ್ಚುತ್ತಿದ್ದರೂ, ಸಂಬಂಧಗಳಲ್ಲಿ ಅನಿಶ್ಚಿತತೆ ಮೂಡುತ್ತಿದ್ದರೂ, ಈ ಮೌಲ್ಯಗಳು ನಮ್ಮ ಬದುಕನ್ನು ಸಮತೋಲನದಲ್ಲಿರಿಸಲು ಅಗತ್ಯವಾಗಿವೆ. ಜನಾಂಗ, ಕಾಲ, ಸ್ಥಳ ಯಾವುದಾದರೂ ಆಗಿರಲಿ, ಈ ಮೌಲ್ಯಗಳು ನಿತ್ಯಸತ್ಯ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,